ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 34 | ಆಗಸ್ಟ್ 17–23, 2020 | ಪುಟ 16 | ರೂ. 10

Web : www.janashakthi.co.in e-mail : js_weekly@yahoo.com

ಬೆಂಗಳೂರು ಹಿಂಸಾಚಾರ ಸಮರ್ಥನೀಯವಲ್ಲ





'ನ್ಯೂ ಇಂಡಿಯಾ' ಕಥನ

ಸಂವಿಧಾನ ವಿನಾಶ



ನೂತನ ಶಿಕ್ಷಣ ನೀತಿ 2020

ಸದಾಶಯಗಳೋ ಹುನ್ನಾರಗಳೋ?



ಮಹಾ ಹಿನ್ನೆಗೆತ

'ಭಾರತ ರಕ್ಷಿಸಿ' ವ್ಯಾಪಕ ಬೆಂಬಲ









ನಮ್ಮ ಸಂವಿಧಾನವನ್ನು ಸುರಕ್ಷಿತಗೊಳಿಸುತ್ತೇವೆ ಮತ್ತು ಭಾರತದ ಸ್ವಾತಂತ್ರ್ಯವನ್ನು ಗಟ್ಟಿಗೊಳಿಸುತ್ತೇವೆ ಎಂದು ಸ್ವಾತಂತ್ರ್ಯ ದಿನದಂದು ಪ್ರತಿಜ್ಞೆಗೈಯೋಣ–ಜನತೆಗೆ ಎಡಪಕ್ಷಗಳ ಕರೆ

ಈ ಸ್ವಾತಂತ್ರ್ಯ ದಿನದಂದು ನಮ್ಮ ಸಂವಿಧಾನವನ್ನು ಸುರಕ್ಷಿತಗೊಳಸುತ್ತೇವೆ ಮತ್ತು ಭಾರತದ ಸ್ವಾತಂತ್ರ್ಯವನ್ನು ಗಟ್ಟಿಗೊಳಸುತ್ತೇವೆ ಎಂದು ಪ್ರತಿಜ್ಞೆ ತೆಗೆದುಕೊಳ್ಳೋಣ ಹಾಗೂ ಸಪ್ಟಂಬರ್ 1 ರಂದು, ಭಾರತ ತನ್ನನ್ನು ಅಮೇರಿಕಾದ ಒಂದು ಅಡಿಯಾಳು ಮಿತ್ರನೆಂಬ ಸ್ಥಿತಿಯನ್ನು ಈ ಅವಧಿಯಲ್ಲಿ ಇನ್ನಷ್ಟು ಬೆಸೆದಿರುವುದನ್ನು ಪ್ರತಿಭಟಿಸೋಣ ಎಂದು ಎಡಪಕ್ಷಗಳು ಭಾರತದ ಜನತೆಗೆ ಕರೆ ನೀಡಿವೆ.

1. ಕೊವಿಡ್–19 ಮಹಾಸೋಂಕು ಮತ್ತು ರಾಷ್ಟ್ರೀಯ ಲಾಕ್‌ಡೌನಿನ ಅವಧಿಯಲ್ಲಿ ಈ ಮಹಾಸೋಂಕನ್ನು ಎದುರಿಸಲು ಮತ್ತು ಜನಗಳಿಗೆ ಪರಿಹಾರ ಒದಗಿಸುವುದರ ಮೇಲೆ ಏಕಚಿತ್ತದಿಂದ ಗಮನ ಕೇಂದ್ರೀಕರಿಸುವ ಬದಲು, ಆರೆಸ್ಸೆಸ್ ನೇತೃತ್ವದ ಬಿಜೆಪಿ ಕೇಂದ್ರ ಸರಕಾರ ಭಾರತೀಯ ಸಂವಿಧಾನದ ಮೂಲತತ್ವಗಳನ್ನೇ ಆಕ್ರಮಣಕಾರೀ ರೀತಿಯಲ್ಲಿ ಶಿಥಿಲಗೊಳಿಸುತ್ತಿದೆ. ಇದರೊಂದಿಗೇ ತೀವ್ರ ಕೋಮುಧ್ರುವೀಕರಣವನ್ನು ಮತ್ತು ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯ ಮೇಲೆ ಗುರಿಯಿಡುವುದನ್ನು ಇನ್ನಷ್ಟು ತೀಕ್ಷ್ಣಗೊಳಿಸುತ್ತಿದೆ. ಪ್ರತಿಯೊಂದು ಸಂವಿಧಾನಿಕ ಸಂಸ್ಥೆಯೂ, ಸಂಸತ್ತಿನಿಂದ ಹಿಡಿದು, ನ್ಯಾಯಾಂಗ, ಚುನಾವಣಾ ಆಯೋಗ, ಸಿ.ಬಿ.ಐ., ಇ.ಡಿ. ಇತ್ಯಾದಿ ದಾಳಿಗೊಳಗಾಗಿವೆ, ಅವುಗಳ ಸ್ವಾಧೀನತೆಯನ್ನು ಶಿಥಿಲಗೊಳಿಸಲಾಗುತ್ತಿದೆ. ಅವೆಲ್ಲವನ್ನೂ ಭಾರತೀಯ ಸಂವಿಧಾನದ ರಕ್ಷಣೆಯಲ್ಲಿ ಸ್ವತಂತ್ರವಾಗಿ ಕ್ರಿಯೆಗಿಳಿಯದಂತೆ ಶಿಥಿಲಗೊಳಿಸಲಾಗುತ್ತಿದೆ. ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳು ತೀವ್ರ ದಾಳಿಗೊಳಗಾಗಿವೆ, ಮತ್ತು ಸರಕಾರದ ಧೋರಣೆಗಳ ವಿರುದ್ಧ ಯಾವುದೇ ಭಿನ್ನಮತ ವ್ಯಕ್ತಗೊಳಿಸುವುದನ್ನು 'ರಾಷ್ಟ್ರ–ವಿರೋಧಿ' ಎಂದು ಹೇಳಲಾಗುತ್ತಿದೆ, ಮತ್ತು ಜನಗಳು, ಕಾರ್ಯಕರ್ತರು ಹಾಗೂ ಚಿಂತಕರನ್ನು ಯು.ಎ.ಪಿ.ಎ., ರಾಜದ್ರೋಹ ಮುಂತಾದ ಕರಾಳ ಕಾಯ್ದೆಗಳಡಿಯಲ್ಲಿ ಶಿಕ್ಷಿಸಲಾಗುತ್ತಿದೆ. ಸಂವಿಧಾನದ ಒಂದು ಮೂಲ ಲಕ್ಷಣವಾದ ಒಕ್ಕೂಟ ತತ್ವದ ಸೂತ್ರಗಳ ನಿರಾಕರಣೆ ಮಾಡಿ ಎಲ್ಲ ಅಧಿಕಾರಗಳನ್ನು ಕೇಂದ್ರೀಕರಿಸುವ ಒಂದು ಪ್ರಯತ್ನ ನಡೆಯುತ್ತಿದೆ.

ಇಂತಹ ಸನ್ನಿವೇಶದಲ್ಲಿ, ಜನತೆ ನಮ್ಮ ಸಂವಿಧಾನವನ್ನು ಮತ್ತು ಇದರ ಅಡಿಯಲ್ಲಿ ಜನತೆಗೆ ಲಭ್ಯವಾಗಿರುವ ಖಾತ್ರಿಗಳನ್ನು ಸುರಕ್ಷಿತಗೊಳಿಸಿಕೊಳ್ಳಲು ಒಂದುಗೂಡುವುದು, ಈ ಮೂಲಕ ಭಾರತದ ಸ್ವಾತಂತ್ರ್ಯವನ್ನು ಗಟ್ಟಿಗೊಳಿಸುವುದು ಅಗತ್ಯವಾಗಿದೆ ಎಂದು ಎಡಪಕ್ಷಗಳು ಹೇಳಿವೆ.

2. **ಸಪ್ಟಂಬರ್ 1: 'ಆತ್ಮನಿರ್ಭರ್ ಭಾರತ್'ನ ನಿರಾಕರಣೆಗೆ ಪ್ರತಿಭಟನೆ:** ಅಮೆರಿಕ ಸಂಯುಕ್ತ ಸಂಸ್ಥಾನಗಳ ಆದೇಶಗಳಿಗೆ ಬಿಜೆಪಿ ಕೇಂದ್ರ ಸರಕಾರ ನಮ್ರ ಸೇವಕನಂತೆ ತಲೆ ಬಾಗುತ್ತಿರುವುದು, ಜಾಗತಿಕ ಆಧಿಪತ್ಯವನ್ನು ಬಲಗೊಳಿಸಿಕೊಳ್ಳುವ ಅಮೆರಿಕನ್ ಸಾಮರಿಕ ತಂತ್ರಗಳ ಒಂದು ಅಡಿಯಾಳು ಮಿತ್ರನ ಸ್ಥಾನಕ್ಕೆ ಭಾರತವನ್ನು ಇಳಿಸುವಂತಾಗಿದೆ. ಇದು ಭಾರತಕ್ಕೆ ಮತ್ತು ನಮ್ಮ ಜನತೆಗೆ ಹಿತಕಾರಿ ಅಲ್ಲ. ಭಾರತ ಸಮಯದ ಒರೆಗಲ್ಲಲ್ಲಿ ಸಾಬೀತಾಗಿರುವ ತನ್ನ ಸ್ವತಂತ್ರ ವಿದೇಶಾಂಗ ಧೋರಣೆಯನ್ನೇ ಅನುಸರಿಸಬೇಕು.

ಭಾರತ ತನ್ನ ವಿದೇಶಾಂಗ ಧೋರಣೆಯ ದಿಕ್ಕನ್ನು ಸರಿಪಡಿಸಿಕೊಳ್ಳಬೇಕು. ಅಮೆರಿಕಕ್ಕೆ ಮತ್ತು ಅಮೆರಿಕ–ಇಸ್ರೇಲ್ ಕೂಟಕ್ಕೆ ಅಡಿಯಾಳಾಗುವ ವಿದೇಶಾಂಗ ಧೋರಣೆ ಭಾರತದ ಸಾರ್ವಭೌಮತ್ವವನ್ನು ಶಿಥಿಲಗೊಳಿಸುತ್ತದೆ ಮತ್ತು ಅದು ಭಾರತದ ಸ್ವಾವಲಂಬನೆಯ, 'ಆತ್ಮನಿರ್ಭರ್ ಭಾರತ್'ನ ನಿರಾಕರಣೆಯಾಗುತ್ತದೆ ಎಂದಿರುವ ಎಡಪಕ್ಷಗಳು ಸಪ್ಟಂಬರ್ 1 ರಂದು ಈ ಅವಧಿಯಲ್ಲಿ ಅಡಿಯಾಳುತನವನ್ನು ಇನ್ನಷ್ಟು ಬೆಸೆದುಕೊಳ್ಳುತ್ತಿರುವುದನ್ನು ಪ್ರತಿಭಟಸಬೇಕು ಎಂದು ಕರೆ ನೀಡಿವೆ.

ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾ??? ಮತ್ತು ಆರ್ ಎಸ್ ಪಿ ಪ್ರಧಾನ ಕಾರ್ಯದರ್ಶಿಗಳು ಜಂಟಿ ಹೇಳಿಕೆಯೊಂದರಲ್ಲಿ ಈ ಮನವಿ ಮಾಡಿದ್ದಾರೆ.

ಕೊಹಿಕ್ಕೋಡ್ ವಿಮಾನ ನಿಲ್ದಾಣ ಅಫಘಾತ ಮತ್ತು ಇಡುಕ್ಕಿ ಭೂಕುಸಿತ

ಕೇರಳದಲ್ಲಿ ಆಗಸ್ಟ್ 8ರಂದು ಎರಡು ದುರ್ಘಟನೆಗಳು ನಡೆದವು. ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಕೊಹಿಕ್ಕೊಡ್‌ವಿಮಾನ ನಿಲ್ದಾಣದಲ್ಲಿ ಅಫಘಾತಕ್ಕೀಡಾಗಿ 19 ಪ್ರಯಾಣಿಕರು ಮತ್ತು ವಿಮಾನ ಸಿಬ್ಬಂದಿಗಳ ಸಾವು ಉಂಟಾಗಿದೆ. ಇತರ 123 ಮಂದಿ ಗಾಯಗೊಂಡಿದ್ದಾರೆ. ದುಬೈಯಿಂದ ಬಂದಿದ್ದ ವಿಮಾನ ಪ್ರತಿಕೂಲ ಹವಾಮಾನದಿಂದಾಗಿ ವಿಮಾನನಿಲ್ದಾಣದಲ್ಲಿ ಇಳಿಯುವ ಸಂದರ್ಭದಲ್ಲಿ ಈ ಅಪಘಾತ ಉಂಟಾಗಿದೆ. ಈ ಬಗ್ಗೆ ದುಃಖ ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ತಮ್ಮ ಪ್ರಿಯಜನರನ್ನು ಕಳಕೊಂಡಿರುವ ಕುಟುಂಬಗಳಿಗೆ ಹಾರ್ದಿಕ ಸಂತಾಪಗಳನ್ನು ವ್ಯಕ್ತಪಡಿಸಿದೆ.

ಈ ಅಪಘಾತ ನಡೆದಿರುವ ಸಂದರ್ಭ ಮತ್ತು ಕಾರಣದ ಬಗ್ಗೆ ಒಂದು ಪೂರ್ಣವಾದ ಮತ್ತು ತ್ವರಿತವಾದ ತನಿಖೆ ನಡೆಸಬೇಕಾಗಿದೆ. ಈ ಮೂಲಕ ಇಂತಹ ಅಪಘಾತಗಳು ಮರುಕಳಿಸದಂತೆ ಖಾತ್ರಿಪಡಿಸಬೇಕಾಗಿದೆ ಎಂದು ಅದು ಹೇಳಿದೆ.

ಧಾರಾಕಾರ ಮಳೆಯಿಂದಾಗಿ ಇಡುಕ್ಕಿ ಜಿಲ್ಲೆಯಲ್ಲೂ ಅದೇ ದಿನ 22 ಚಹಾತೋಟ ಕಾರ್ಮಿಕರು ಮತ್ತು ಅವರ ಕುಟುಂಬದವರು ಪ್ರಾಣಕಳಕೊಂಡರು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಬಗ್ಗೆ ತನ್ನ ದುಃಖವನ್ನು ವ್ಯಕ್ತಪಡಿಸಿದೆ. ವಿಪರೀತ ಮಳೆಯಿಂದಾಗಿ ನಡೆದ ಭೂಕುಸಿತ ಅವರ ವಾಸದ ಕಾಲನಿಯನ್ನು ಆವರಿಸಿದರಿಂದಾಗಿ ಈ ಅಪಘಾತ ಸಂಭವಿಸಿದೆ. ಸಾವುಗಳ ಸಂಖ್ಯೆ ಮರುದಿನ 43ಕ್ಕೆ ಏರಿದೆ ಎಂದು ವರದಿಯಾಗಿದೆ. ಬಾಧಿತ ಜನಗಳಿಗೆ ಪರಿಹಾರವನ್ನು ಒದಗಿಸಲು ಸರ್ವಪ್ರಯತ್ನಗಳನ್ನು ನಡೆಸಬೇಕು ಎಂದು ಸಿಪಿಐ(ಎಂ) ಹೇಳಿದೆ.

ಅಂಡಮಾನ್ –ನಿಕೋಬಾರ್ ನಲ್ಲಿ ಗಂಭೀರ ಆರೋಗ್ಯ ತುರ್ತು ಪರಿಸ್ಥಿತಿ: ಯುದ್ಧೋಪಾದಿಯಲ್ಲಿ ಕ್ರಮ ಕೈಗೊಳ್ಳಿ– ಪ್ರಧಾನ ಮಂತ್ರಿಗಳಿಗೆ ಯೆಚುರಿ ಪತ್ರ

ಅಂಡಮಾನ್ ಮತ್ತು ನಿಕೋಬಾರ್ ಹಲವಾರು ದ್ವೀಪಗಳಿರುವ ಪ್ರದೇಶ. ಒಂದು ದ್ವೀಪದಿಂದ ಇನ್ನೊಂದಕ್ಕೆ ಹೋಗಲು ಬಹಳ ಸಮಯ ತಗಲುತ್ತದೆ. ಕೊವಿಡ್–19 ಸೋಂಕು ತೀವ್ರವಾಗಿ ಹರಡುತ್ತಿರುವ ಇಂದಿನ ಸನ್ನಿವೇಶದಲ್ಲಿ ಇದು ಇಲ್ಲಿ ಬಹಳ ಸಮಸ್ಯೆಗಳನ್ನು ಉಂಟುಮಾಡುತ್ತಿದೆ. ಏಕೆಂದರೆ ಈ ಇಡೀ ಪ್ರದೇಶದಲ್ಲಿ ಪೋರ್ಟ್‌ಬ್ಲೇರ್ ನಲ್ಲಿ ಮಾತ್ರವೇ ಒಂದೇ ಒಂದು ಕೊವಿಡ್ ತಪಾಸಣೆ ಕೇಂದ್ರ ಮತ್ತು ಆಸ್ಪತ್ರೆ ಇರುವುದು. ಯಾವುದೇ ಕೊವಿಡ್ ತಪಾಸಣೆಯ ಫಲಿತಾಂಶ ಬರಲು ಎಂಟು ದಿನಗಳಾಗುತ್ತವೆ. ಆ ವೇಳೆಗೆ ರೋಗಿಯ ಸ್ಥಿತಿ ಸಂಪೂರ್ಣ ಹದಗೆಟ್ಟಿರುತ್ತದೆ. ಈ ದ್ವೀಪಸಮೂಹದ ಜನಸಂಖ್ಯೆಯ ಅರ್ಧದಷ್ಟು ಉತ್ತರ ಅಂಡಮಾನಿನಲ್ಲಿದೆ. ಅಲ್ಲಿಂದ ಪೋರ್ಟ್‌ಬ್ಲೇರ್‌ಗೆ ಬರಲು ಹಲವು ದಿನಗಳೇ ಹಿಡಿಸುತ್ತವೆ. ಅಲ್ಲದೆ ಈ ಆಸ್ಪತ್ರೆಯ 18 ಡಾಕ್ಟರುಗಳಿಗೆ ಕೊವಿಡ್ ಸೋಂಕು ತಗಲಿದೆ ಎಂದೂ ವರದಿಯಾಗಿದೆ.

ಇದು ಕೇಂದ್ರಾಡಳಿತ ಪ್ರದೇಶವಾಗಿದ್ದು ನೇರವಾಗಿ ಕೇಂದ್ರ ಗೃಹ ಮಂತ್ರಾಲಯದ ಆಡಳಿತ ಹತೋಟಿಯಲ್ಲಿದೆ. ಆದ್ದರಿಂದ ಅದು ಕೊವಿಡ್ ಪಿಡುಗು ಭರದಿಂದ ಹರಡುತ್ತಿರುವ ಸಮಯದಲ್ಲಿ ಜನಗಳಿಗೆ ತುರ್ತು ಪರಿಹಾರ ನೀಡಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ, ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ.

ಪ್ರಧಾನಮಂತ್ರಿಗಳು ಈ ದ್ವೀಪಸಮೂಹದಲ್ಲಿನ ತಮ್ಮ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತ ಈ ದ್ವೀಪಗಳಿಗೆ ಉನ್ನತ ವೇಗದ ಬ್ರಾಡ್ ಬ್ಯಾಂಡ್ ಸಂಪರ್ಕ ನೀಡುವುದಾಗಿ ಪ್ರಕಟಿಸಿದ್ದಾರೆಂದು ವರದಿಯಾಗಿದೆ. ಇದು ಹೊಸದೇನಲ್ಲ. ಹಲವು ವರ್ಷಗಳ ಹಿಂದೆಯೇ ಭಾರತ ಸರಕಾರ ನಿರ್ಧರಿಸಿರುವ ಸಂಗತಿ. ಈಗಾಗಲೇ ಚೆನ್ನೈನಿಂದ ನೀರಿನಡಿಯಲ್ಲಿ ಕೇಬಲ್‌ಗಳನ್ನು ಹಾಕುವ ಕೆಲಸವೂ ಆರಂಭವಾಗಿದೆ ಎನ್ನಲಾಗಿದೆ. ಅದೇನೇ ಇರಲಿ, ಈ ದ್ವೀಪಗಳ ಜನಗಳ ಜೀವನ ಪರಿಸ್ಥಿತಿಗಳನ್ನು ಸುಧಾರಿಸುವ ಯಾವುದೇ ಕ್ರಮ ಸ್ವಾಗತಾರ್ಹ. ಆದರೆ ಈಗ ತುರ್ತಾಗಿ ಕೇಂದ್ರ ಸರಕಾರ ಜನಗಳ ಬದುಕನ್ನು ಕಾಪಾಡಲು ಮತ್ತು ಪರಿಹಾರ ನೀಡಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ತಮ್ಮ ಪತ್ರದಲ್ಲಿ ಹೇಳಿರುವ ಯೆಚುರಿಯವರು ಕೊವಿಡ್ ತಪಾಸಣಾ ಕೇಂದ್ರಗಳನ್ನು ಎಷ್ಟು ಸಾಧ್ಯವೋ ಅಷ್ಟು ಹೆಚ್ಚಿಸಬೇಕು, ಕೊವಿಡ್ ರೋಗಿಗಳ ಆರೈಕೆಗೆ ಹೆಚ್ಚು ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು, ಮತ್ತು ಜನಗಳಿಗೆ ಪರಿಹಾರಗಳನ್ನು ಯುದ್ಧೋಪಾದಿಯಲ್ಲಿ ತಲುಪಿಸಬೇಕಾಗಿದೆ ಎಂದು ಬರೆದಿದ್ದಾರೆ.

ಈ ಕೇಂದ್ರಾಡಳಿತ ಪ್ರದೇಶದಲ್ಲಿ ಬೇರೆ ಚುನಾಯಿತ ಸಂಸ್ಥೆಗಳಿಲ್ಲ. ಆದ್ದರಿಂದ ಜನಗಳು ಕೇಂದ್ರ ಗೃಹ ಮಂತ್ರಾಲಯದತ್ತವೇ ನೋಡಬೇಕಾಗುತ್ತದೆ. ಆದ್ದರಿಂದ "ನಿಮ್ಮ ಸರಕಾರದ ನೇರ ಹತೋಟಿಗೆ ಬರುವ ಇಲ್ಲಿ ತುರ್ತಾಗಿ ಮಧ್ಯಪ್ರವೇಶಿಸಬೇಕು, ಮತ್ತು ಮೇಲೆ ಹೇಳಿದ ಅತ್ಯಗತ್ಯ ಕ್ರಮಗಳನ್ನಾದರೂ ಯುದ್ಧಸ್ತರದಲ್ಲಿ ಕೈಗೊಳ್ಳಬೇಕು" ಎಂದು ಪ್ರಧಾನ ಮಂತ್ರಿಗಳಿಗೆ ಬರೆದಿರುವ ಪತ್ರದಲ್ಲಿ ಸೀತಾರಾಮ್ ಯೆಚುರಿ ಮನವಿ ಮಾಡಿದ್ದಾರೆ.

ಎಲ್ಲ ಖಾಸಗಿಯವರಿಗೆ 4ಜಿ ಕೊಟ್ಟರೂ ಬಿಎಸ್‌ಎನ್‌ಎಲ್‌ಗೆ ಇನ್ನೂ ನಿರಾಕರಿಸುತ್ತಿರುವುದೇಕೆ?

'ದೇಶದ್ರೋಹಿ' 'ಖ್ಯಾತಿ'ಯ ಬಿಜೆಪಿ ಎಂಪಿಗೆ ಬಿಎಸ್‌ಎನ್‌ಎಲ್ ನೌಕರರ ಸಂಘಟನೆಗಳ ಸವಾಲು

ಬಿಎಸ್‌ಎನ್‌ಎಲ್ ನೌಕರರ ಸತತ ಹೋರಾಟಗಳು, ಪ್ರತಿಭಟನೆಗಳ ಪರಿಣಾಮವಾಗಿ ಅಕ್ಟೋಬರ್ 23, 2019ರಂದು ಕೇಂದ್ರ ಸರಕಾರ ಸಾರ್ವಜನಿಕ ವಲಯದಲ್ಲಿರುವ ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್‌ಗೆ ಒಂದು ಪುನರುಜ್ಜೀವನ ಪ್ಯಾಕೇಜನ್ನು ಪ್ರಕಟಿಸಿತ್ತು. ಇದರಲ್ಲಿ 4ಜಿ ತರಂಗಾಂತರವನ್ನು ನೀಡುವುದು ಪ್ರಧಾನ ಆಶ್ವಾಸನೆಯಾಗಿತ್ತು, ಆದರೆ ಈಗ ಹತ್ತು ತಿಂಗಳಾದರೂ ಆ ಆಶ್ವಾಸನೆ ಈಡೇರಿಲ್ಲ.

ಮಾತ್ರವಲ್ಲ, ಸರಕಾರದ ಆಶ್ವಾಸನೆಯ ಮೇರೆಗೆ ಬಿಎಸ್‌ಎಲ್‌ಎಲ್ ಮಾರ್ಚ 2020ರಲ್ಲಿ 4ಜಿ ಸೇವೆ ಒದಗಿಸಲು ಅಗತ್ಯವಾದ ಸಾಧನಗಳನ್ನು ಖರೀದಿಸಲು 9000 ಕೋಟಿ ರೂ.ಗಳ ಟೆಂಡರ್ ಪ್ರಕಟಿಸಿತ್ತು. ಆದರೆ ಯಾವುದೋ ಅನಾಮಧೇಯ ಸಂಸ್ಥೆಯೊಂದರ ಆಕ್ಷೇಪವನ್ನೇ ನೆಪ ಮಾಡಿಕೊಂಡು ಕೇಂದ್ರ ಸರಕಾರ ಈ ಟೆಂಡರನ್ನು ರದ್ದು ಮಾಡಿದೆ. ಈ ಮೂಲಕ ಮತ್ತೆ ಬಿಎಸ್‌ಎನ್‌ಎಲ್‌ಗೆ 4ಜಿ ಸೇವೆಯನ್ನು ವಂಚಿಸಲಾಗಿದೆ.

ಆದರೂ ಉತ್ತರ ಕನ್ನಡ ಜಿಲ್ಲೆಯ ಬಿಜೆಪಿ ಎಂಪಿ ಅನಂತಕುಮಾರ ಹೆಗ್ಡೆ ಬಿಎಸ್‌ಎನ್ ನೌಕರರು ಪ್ರಧಾನ ಮಂತ್ರಿಗಳು ಹಣ, ತಂತ್ರಜ್ಞಾನ ಕೊಟ್ಟರೂ ಕೆಲಸ ಮಾಡದ ಸೋಮಾರಿಗಳು, ದೇಶದ್ರೋಹಿಗಳು, ಎಂದು ಅಬ್ಬರಿಸಿದ್ದಾರೆ. ಆದರೆ 'ಪುನರುಜ್ಜೀವನ' ಪ್ಯಾಕೆಜಿನ ಭಾಗವಾಗಿ ಸರಕಾರ ಮಾಡಿರುವ ಏಕೈಕ ಕೆಲಸವೆಂದರೆ 79,000 ನೌಕರರನ್ನು ವಿಆರ್‌ಎಸ್ ಕೊಟ್ಟು ಮನೆಗೆ ಕಳಿಸಿದ್ದು. ಇದನ್ನು ಬಿಟ್ಟು 69,000 ಕೋಟಿ ರೂ. ಪ್ಯಾಕೇಜ್ ಎಂದು ಮೋದಿ ಸರಕಾರ ಪ್ರಕಟಿಸಿದ ಪ್ಯಾಕೇಜಿನಲ್ಲಿ ಒಂದು ಪೈಸೆಯೂ ಬಿಎಸ್‌ಎನ್‌ಎಲ್ ಗಾಗಲೀ, ಅದರ ನೌಕರರಿಗಾಗಲೀ ಸಿಕ್ಕಿಲ್ಲೆಂಬುದನ್ನು,' ಬಿಎಸ್‌ಎನ್‌ಎಲ್ ನ ನೌಕರರ ಸಂಯುಕ್ತ ವೇದಿಕೆ ಎ.ಯು.ಎ.ಬಿ. ಅನಂತಕುಮಾರ ಹೆಗ್ಡೆಯವರ ಗಮನಕ್ಕೆ ತಂದಿದೆ.

ಮೋದಿ ನೇತೃತ್ವದ ಎರಡು ಸರಕಾರಗಳು ಸೇರಿದಂತೆ ಕೇಂದ್ರದಲ್ಲಿ ಆಳ್ವಿಕೆ ನಡೆಸಿದ ಸರಕಾರಗಳು ಅನುಸರಿಸಿಕೊಂಡು ಬಂದಿರುವ ಬಿಎಸ್‌ಎನ್‌ಎಲ್–ವಿರೋಧಿ ಮತ್ತು ಖಾಸಗೀಪರ ಧೋರಣೆಗಳೇ ಬಿಎಸ್‌ಎನ್‌ಎಲ್ ನ್ನು ದುರ್ಬಲಗೊಳಿಸಿ ಅದು ನಷ್ಟ ಅನುಭವಿಸುವಂತೆ ಮಾಡಿರುವುದು ಎಂಬುದು ಯಾರೂ ನಿರಾಕರಿಸಲಾಗದ ಸಂಗತಿ. ತದ್ವಿರುದ್ಧವಾಗಿ ಪ್ರವಾಹ, ಸುಂಟರಗಾಳಿ ಮುಂತಾದವು ದೇಶವನ್ನು ಬಾಧಿಸಿದಾಗ ಸಂಪರ್ಕ ವ್ಯವಸ್ಥೆಗಳನ್ನು ಕಾಯ್ದುಕೊಂಡು ಜನರ ರಕ್ಷಣೆಗೆ ಧಾವಿಸಿರುವುದು ಬಿಎಸ್‌ಎನ್‌ಎಲ್ ಮಾತ್ರ, ಸರಕಾರದಿಂದ ಸದಾ ಉತ್ತೇಜನ ಪಡೆಯುತ್ತಿರುವ ಖಾಸಗಿಯವರು ತಮ್ಮ ಸೇವೆಗಳನ್ನು ನಿಲ್ಲಿಸಿಬಿಡುತ್ತಾರೆ ಎಂದು ಎ.ಯು.ಎ.ಬಿ. ಈ ಬಿಜೆಪಿ ಎಂಪಿಗೆ ನೆನಪಿಸಿದೆ.

ನೌಕರರು ಸೇವೆಗಳ ಗುಣಮಟ್ಟವನ್ನು ಉತ್ತಮ ಪಡಿಸಲು, ಗ್ರಾಹಕರ ಸಂತೃಪ್ತಿಗಾಗಿ ಹಲವು ದೇಶಪ್ರೇಮಿ ಆಂದೋಲನಗಳನ್ನು ನಡೆಸಿದ್ದಾರೆ. ಆದರೂ ಅವರನ್ನು ದೇಶದ್ರೋಹಿಗಳು ಎಂದು ಜರೆದಿರುವುದೂ ಅನಂತಕುಮಾರ ಹೆಗ್ಡೆಯವರ ಅಜ್ಞಾನವನ್ನು ಬಯಲಿಗೆ ತಂದಿದೆ ಎಂದು ಅವರ ಆಕ್ರೋಶಕಾರಿ ಹೇಳಿಕೆಯನ್ನು ಖಂಡಿಸುತ್ತ ಎ.ಯು.ಎ.ಬಿ. ಹೇಳಿದೆ. ಇನ್ನು ಮುಂದಾದರೂ ಈ ಸಂಸತ್ ಸದಸ್ಯರು ಇಂತಹ ಬೇಜವಾಬ್ದಾರಿ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಬೇಕು ಎಂದು ಅದು ಆಗ್ರಹಿಸಿದೆ.

ಮೋದಿ ಸರಕಾರ ನೌಕರರಿಗೆ ವಿಆರ್‌ಎಸ್ ಕೊಟ್ಟಿರುವುದು, ಆಶ್ವಾಸನೆಯಂತೆ 4ಜಿ ಕೊಡದೆ ನಿರಾಕರಿಸಿರುವುದರ ನಿಜ ಹುನ್ನಾರವನ್ನು ಈ ಹೇಳಿಕೆಯನ್ನು ನೀಡುವ ಭರದಲ್ಲಿ ಈ ಎಂಪಿ ಬಹಿರಂಗವಾಗಿಯೇ ಖಾಸಗೀಕರಣದ ಘೋಷಣೆ ಮಾಡಿ ಬಯಲು ಮಾಡಿದ್ದಾರೆ, ದೇಶದ್ರೋಹ ಮತ್ತು ಖಾಸಗೀಕರಣ ಈಗ ಒಟ್ಟೊಟ್ಟಿಗೇ ಕೇಳಬರುತ್ತಿರುವ ಪದಗಳು ಎಂದು ಹಲವು ಪ್ರಜಾಪ್ರಭುತ್ವವಾದಿಗಳೂ ಟಿಪ್ಪಣಿ ಮಾಡಿದ್ದಾರೆ.

ಬೆಂಗಳೂರು ಹಿಂಸಾಚಾರ ಯಾವ ಕಾರಣಕ್ಕೂ ಸಮರ್ಥನೀಯವಲ್ಲ

ಸಂಪಾದಕೀಯ

ಬೆಂಗಳೂರು ಕೆ.ಜಿ. ಹಳ್ಳಿ ಮತ್ತು ಡಿ. ಜೆ ಹಳ್ಳಿ ಪ್ರದೇಶದಲ್ಲಿ ಆಗಸ್ಟ್ 10 ರಾತ್ರಿ ಒಂದು ವಿಭಾಗದ ಜನ ನಡೆಸಿದ ದೊಂಬಿ ಮತ್ತು ಹಿಂಸಾಚಾರ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ಎಲ್ಲ ಶಾಂತಿಪ್ರಿಯ ಜನ ಈ ಭೀಕರ ದುಷ್ಕೃತ್ಯವನ್ನು ತೀವ್ರವಾಗಿ ಖಂಡಿಸಬೇಕಾಗಿದೆ. ಇದರ ಹಿಂದೆ ಯಾವುದೇ ರೀತಿಯ ಪ್ರಚೋದನೆ ಇದ್ದರೂ, ಅದು ಧಾರ್ಮಿಕವೂ ಅಥವಾ ಸಾಮಾಜಿಕವೂ ಆಗಿರಲಿ. ಇಂತಹ ಪ್ರಚೋದನೆಗೆ ಒಳಗಾಗಿ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಯನ್ನು ನಾಶ ಮಾಡುವುದು, ಮನೆಗಳಿಗೆ, ವಾಹನಗಳಿಗೆ ಬೆಂಕಿ ಹಚ್ಚಿ ಭಯೋತ್ಪಾದಕರಂತೆ ಜನರಲ್ಲಿ ಭಯ ಭೀತಿ ಉಂಟು ಮಾಡುವುದನ್ನು ಎಲ್ಲರೂ ಒಕ್ಕೊರಲಿನಿಂದ ತಿರಸ್ಕರಿಸಬೇಕಾಗಿದೆ. ಇವರು ನಮ್ಮವರು ಅವರು, ನಮ್ಮವರಲ್ಲ, ಇವರು ಅಲ್ಪಸಂಖ್ಯಾತರು, ಅವರು ಬಹುಸಂಖ್ಯಾತರು ಎಂಬ ಬೇದವಿಲ್ಲದೆ ಇವರು ಯಾವ ಪಕ್ಷದ ಬೆಂಬಲಿಗರು, ಅವರು ಯಾವ ಪಕ್ಷದ ಬೆಂಬಲಿಗರು ಎಂಬ ಎಳ್ಳಷ್ಟೂ ತಾರತಮ್ಯ ಮಾಡದೆ ಹಿಂಸಾಚಾರಿಗಳಿಗೆ ಧರ್ಮ ಎಂಬುದಿಲ್ಲ, ಅವರಿಗೆ ನಮ್ಮವರೆನ್ನುವವರಿಲ್ಲ ಎಂಬುದನ್ನು ಮರೆಯದ ಈ ಹಿಂಸಾವಾದಿಗಳನ್ನು ನಾವು ನಮ್ಮಿಂದ ಪ್ರತ್ಯೇಕಗೊಳಿಸಬೇಕು.

ಹಿಂಸಾಚಾರವನ್ನು ತಡೆಗಟ್ಟಲು ಪೊಲೀಸರು ಜನಜಂಗುಳಿಯ ಮೇಲೆ ಗುಂಡು ಹಾರಿಸಿದ್ದಾರೆ. ಮೂವರು ಗುಂಡಿಗೆ ಬಲಿಯಾಗಿ ಸಾವನ್ನಪ್ಪಿದ್ದಾರೆ. ಅವರು ಅಮಾಯಕರೇ ಆಗಿರಬಹುದು. ನೂರಾರು ಜನ ಗಾಯಗೊಂಡಿದಾರೆ. ಅವರಲ್ಲಿ ಕರ್ತವ್ಯ ಪಾಲನೆಗಾಗಿ ಹಾಜರಾದ ಪೊಲೀಸರು ಇರಬಹುದು. ಪೊಲೀಸರು ಸುಮಾರು 200 ಮಂದಿಯನ್ನು ಬಂದಿಸಿದ್ದಾರೆ. ಅವರಲ್ಲಿ ಕೆಲವರಾದರೂ ನಿರಪರಾಧಿಗಳಾಗಿರಬಹುದು. ಪ್ರತಿಸಲ ಇಂತಹ ಘಟನೆ ಜರುಗಿದಾಗ ಕೆಲವು ಜನ ನಿರಪರಾಧಿಗಳು ಪ್ರಾಣ ಕಳೆದುಕೊಳ್ಳುತ್ತಾರೆ, ಅಥವಾ ಬಂಧನಕ್ಕೆ ಒಳಗಾಗುತ್ತಾರೆ. ಹೀಗಾಗುವುದು ಬೇಕಾ?

ಪ್ರವಾದಿ ಪೈಗಂಬರ್ ಅವರ ಬಗ್ಗೆ ಫೇಸ್ ಬುಕ್ ನಲ್ಲಿ ಅವಹೇಳನಕಾರಿ ಪೋಸ್ಟ್ ಪ್ರಕಟಿಸಲಾಗಿದೆ ಎಂದು ವರದಿಯಾಗಿದ್ದು ಅದುವೇ ಬೆಂಗಳೂರಿನ ವ್ಯಾಪಕ ಹಿಂಸಾಚಾರಕ್ಕೆ ಕಾರಣ ಎನ್ನಲಾಗಿದೆ. ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಬಾರೀ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ದಿನಗಳಿಂದ ಧಾರ್ಮಿಕ ಅಲ್ಪಸಂಖ್ಯಾತರನ್ನು ಅವಮಾನಿಸುವ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ. ಬಿಜೆಪಿ ಮಾರ್ಗದರ್ಶನ ಪಡೆಯುತ್ತಿರುವ ಆರ್.ಎಸ್.ಎಸ್. ಇಂತಹ ಪ್ರಚೋದನೆಗಳನ್ನು ಬಡಿದೆಬ್ಬಿಸುವುದರಲ್ಲಿ ಎತ್ತಿದ ಕೈ.

ಆದರೆ ಆರೆಸ್ಸೆಸ್ ನಂತಹ ಸಂಘಟನೆಗಳಿಂದ ಪ್ರಚೋದಿಸಲ್ಪಟ್ಟು ಕಾನೂನು ಕೈಯಲ್ಲಿ ತೆಗೆದುಕೊಳ್ಳುವ ಪ್ರವೃತ್ತಿಯನ್ನು ಬೆಂಬಲಿಸಲಾಗದು, ಬೆಂಬಲಿಸಬಾರದು. ಆರೆಸ್ಸೆಸ್ ಹಿಂದೂ ಯುವಕರಲ್ಲಿ ದ್ವೇಷ ಬಿತ್ತುತ್ತಿರುವಂತೆ ಮುಸ್ಲಿಂ ಯುವಕರಲ್ಲಿ ದ್ವೇಷ ಬೆಳೆಸುವ ಕೆಲಸ ಮಾಡಲು ಎಸ್.ಡಿ.ಪಿ.ಐ. ಅಂತಹ ಸಂಘಟನೆಗಳು ಹುಟ್ಟಿವೆ. ಮೇಲ್ನೋಟಕೆ ಇವು ಪ್ರಗತಿಪರ ಜಾತ್ಯತೀತ ಸಂಘಟನೆಗಳಂತೆ ಕಾಣುತ್ತವೆ. ಮುಗ್ಧ ಯುವಕರು ಇವುಗಳಿಗೆ ಆಕರ್ಷಿತರಾಗುತ್ತಾರೆ. ನಿಧಾನವಾಗಿ ಹಾಗೂ ಗುಪ್ತವಾಗಿ ಈ ಯುವಕರು ಭಯೋತ್ಪಾದಕರ ಸಂಪರ್ಕಕ್ಕೆ ಬರುತ್ತಾರೆ. ಒಟ್ಟಾರೆಯಾಗಿ ಆರ್. ಎಸ್.ಎಸ್. ಮತ್ತು ಎಸ್.ಡಿ.ಪಿ.ಐ. ಎರಡೂ ಸಂಘಟನೆಗಳು ಒಂದೇ ನಾಣ್ಯದ ಎರಡು ಮುಖಗಳು. ಒಂದು ಇನ್ನೊಂದನ್ನು ನುಂಗಿ ಬೆಳೆಯುತ್ತಿರುತ್ತವೆ.

ಪೊಲೀಸರು ಪರಿಸ್ಥಿತಿ ಕೈಮೀರಿ ಹೋಗುವವರೆಗೂ ಸುಮ್ಮನಿದ್ದು ಆನಂತರ ಅನಿಯಂತ್ರಿತ ಜನಜಂಗುಳಿಯ ಮೇಲೆ ಗುಂಡು ಹಾರಿಸಿ ಸಾವು–ನೋವುಗಳಿಗೆ ಕಾರಣರಾಗುವುದೂ ಸಹ ಸರಿಯಲ್ಲ. ಕೆಲವು ಮುಸ್ಲಿಂ ಗುಂಪುಗಳು ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾದ ಅವಹೇಳನಕಾರಿ ಪೋಸ್ಟ್ ಬಗ್ಗೆ ಪೊಲೀಸರ ಗಮನಕ್ಕೆ ತಂದಾಗ ಪೊಲೀಸರು ಅದಕ್ಕೆ ಸ್ಪಂಧಿಸಲಿಲ್ಲ ಎಂಬ ವರದಿಯಿದೆ. ಪೊಲೀಸರ ವೈಫಲ್ಯದ ಕುರಿತೂ ತನಿಖೆಯಾಗಬೇಕು.

ರಾಜಕೀಯ ಪಕ್ಷಗಳು ಪರಸ್ಪರ ಆರೋಪ ಪ್ರತ್ಯಾರೋಪಗಳಲ್ಲಿ, ಕೆಸರೆರಚಾಟದಲ್ಲಿ ತೊಡಗಿರುವುದು ಕಂಡು ಬರುತ್ತದೆ. ನೈಜ ಆರೋಪಿಗಳನ್ನು ಪತ್ತೆಹಚ್ಚಿ ಶಿಕ್ಷಿಸುವುದು ಅಗತ್ಯವಾಗಿ ಆಗಬೇಕಾದದ್ದು. ಎಲ್ಲರೂ ಸೇರಿ ಕೊರೊನಾ ಹಾವಳಿ ವಿರುದ್ಧ ಹೋರಾಡಬೇಕಾದ ಸಮಯದಲ್ಲಿ ಇಂತಹ ಘಟನೆಗಳು ನಡೆದು ನಮ್ಮ ಐಕ್ಯತೆಯನ್ನು ಛಿಧ್ರ ಗೊಳಿಸಬಾರದು. ತಪ್ಪಿತಸ್ಥರನ್ನು ಶಿಕ್ಷಿಸುವ ವಿಷಯದಲ್ಲಿ ರಾಜಕೀಯ ಮಾಡುವುದು ಸಲ್ಲದು.

ಡಿ.ಜೆ.ಹಳ್ಳಿ–ಕೆ.ಜಿ.ಹಳ್ಳಿ ದಾಳಿ ಮತ್ತು ಅವಹೇಳನಕಾರಿ ಪೋಸ್ಟಿಂಗ್ಸ್: ಸಿಪಿಐ(ಎಂ) ಖಂಡನೆ

ಬೆಂಗಳೂರಿನ ಪೂರ್ವ ವಲಯದ ಪುಲಕೇಶಿನಗರದ ಶಾಸಕರ ಮನೆ, ಡಿ.ಜೆ. ಹಳ್ಳಿ ಪೋಲಿಸ್ ಠಾಣೆ ಮತ್ತು ಕೆ.ಜಿ.ಹಳ್ಳಿಯ ಹಲವೆಡೆ ಆಗಸ್ಟ್ 11 ರಂದು ನಡೆದಿರುವ ದಾಳಿಗಳನ್ನು ಹಾಗೂ ಅದಕ್ಕೆ ಕಾರಣವೆಂದು ಹೇಳಲಾಗುತ್ತಿರುವ ಫೇಸ್‌ಬುಕ್ ಅವಹೇಳನಕಾರಿ ಪೋಸ್ಟಿಂಗ್ ಅನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿ ಮತ್ತು ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ. ಜನತೆಯು ಊಹಾಪೋಹಗಳಿಗೆ ಹಾಗೂ ಕಿಡಿಗೇಡಿಗಳ ಅಪಪ್ರಚಾರಕ್ಕೆ ಕಿವಿಗೊಡದೆ ಶಾಂತಿ ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಪುಲಕೇಶಿನಗರದ ಶಾಸಕರಾದ ಶ್ರೀ ಅಖಂಡ ಶ್ರೀನಿವಾಸ್‌ಮೂರ್ತಿ ಅವರ ಸಂಬಂಧಿ ತನ್ನ ಫೇಸ್‌ಬುಕ್ ಖಾತೆಯಲ್ಲಿ ಹಾಕಿರುವ ಅವಹೇಳನಕಾರಿ ಪೋಸ್ಟಿಂಗ್ಸ್ ಆಧರಿಸಿ ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆಗಳ ಪ್ರಚೋದನಕಾರಿ ಹೇಳಿಕೆಗಳಿಂದಾಗಿ ಉಂಟಾಗಿರುವ ಪರಿಸ್ಥಿತಿಯನ್ನು ತಿಳಿಗೊಳಿಸಲು ರಾಜ್ಯ ಸರ್ಕಾರ ಮತ್ತು ಪೋಲಿಸ್ ಇಲಾಖೆ ಅಗತ್ಯ ಕ್ರಮಗಳನ್ನು ಸಂಯಮದಿಂದ ಕೈಗೊಳ್ಳಬೇಕೆಂದು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಮುತುವರ್ಜಿ ವಹಿಸಬೇಕೆಂದು ಸಿಪಿಐ(ಎಂ) ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ. ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವ ಆ ಮೂಲಕ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಉಂಟು ಮಾಡುವ ಎಲ್ಲಾ ವ್ಯಕ್ತಿಗಳು, ಶಕ್ತಿಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮವಹಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ರಾಜ್ಯ ಹಾಗೂ ಬೆಂಗಳೂರಿನ ಜನತೆ ಕೋವಿಡ್–19 ಸಾಂಕ್ರಾಮಿಕದಿಂದ ಬಾದಿತರಾಗಿ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಮುಚ್ಚಿ ಹಾಕುವ ನಿಟ್ಟಿನಲ್ಲಿ ವ್ಯವಸ್ಥಿತ ಸಂಚಿನ ಭಾಗವಾಗಿ ಅವಹೇಳನಕಾರಿ ಪೋಸ್ಟಿಂಗ್ ಅನ್ನು ಫೇಸ್‌ಬುಕ್ ನಲ್ಲಿ ಹಂಚಿಕೊಂಡಿರುವಂತೆ ಮೇಲ್ನೋಟಕ್ಕೆ ಪೋಸ್ಟಿಂಗ್ಸ್ ಆರಂಭಗೊಂಡಿರುವ ಬಂಧಿತ ವ್ಯಕ್ತಿಯ ಪೂರ್ವಾಪರಗಳನ್ನು ಗಮನಿಸಿದಲ್ಲಿ ಕಂಡುಬರುತ್ತದೆ. ಇಂತಹ ಪೋಸ್ಟಿಂಗ್ಸ್ ನಿಂದಾಗಿ ಅಮಾಯಕ ಜನತೆಯ ಭಾವನೆಗಳಿಗೆ ಉಂಟಾಗುವ ಘಾಸಿಯನ್ನು ದುರುಪಯೋಗ ಮಾಡಿಕೊಳ್ಳಲು ಹೊಂಚು ಹಾಕಿರುವ ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆಗಳು ಯುವಜನತೆಯ ಭಾವೋದ್ರೇಕವನ್ನು ಕೆರಳಿಸಿ ಗಲಭೆಗಳಿಗೆ ಕೊಡುಗೆ ನೀಡಿದೆ. ಇಂತಹ ಸೂಕ್ಷ್ಮ ಸಂದರ್ಭವನ್ನು ಸಂವೇದನಾಶೀಲವಾಗಿ ಪರಿಗಣಿಸಿ ಉಂಟಾಗಬಹುದಾದ ಅವಗಡಗಳನ್ನು ತಪ್ಪಿಸುವಲ್ಲಿ ರಾಜ್ಯ ಸರ್ಕಾರದ ಪೋಲಿಸ್ ಬೇಹುಗಾರಿಕೆ ಸಂಪೂರ್ಣವಾಗಿ ವಿಫಲವಾಗಿರುವುದನ್ನು ಈ ಗಲಭೆಗಳು ತೋರ್ಪಡಿಸುತ್ತವೆ.

ಫೇಸ್‌ಬುಕ್ ಪೋಸ್ಟಿಂಗ್ ಮಾಡಿರುವ ವ್ಯಕ್ತಿಯ ಹಲವು ಪೋಸ್ಟಿಂಗ್‌ಗಳು ಬಲಪಂಥೀಯ ಸಂಘಪರಿವಾರದ ಸಾಮಾಜಿಕ ಮಾಧ್ಯಮದ ಪ್ರಚಾರದ ಅಂಶಗಳನ್ನು ಒಳಗೊಂಡಿರುವುದನ್ನು ಗಮನಿಸಬಹುದಾಗಿದೆ. ಮುಂಬರುವ ಬಿಬಿಎಂಪಿ ಚುನಾವಣೆಗಳಲ್ಲಿ ಈ ದುರುದ್ದೇಶಪೂರಿತ ಪೋಸ್ಟಿಂಗ್ ನಿಂದ ಉಂಟಾಗುವ ಪರಿಸ್ಥಿತಿಯ ದುರ್ಲಾಭ ಪಡೆಯಲು ಸಂಘ ಪರಿವಾರ ಮತ್ತು ಬಿಜೆಪಿಯು ನಡೆಸುತ್ತಿರುವ ಯತ್ನವನ್ನು ಜನತೆ ಮನಗಾಣಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಅದೇ ವೇಳೆ ಇಂತಹ ಎಲ್ಲಾ ಸಂದರ್ಭದಲ್ಲೂ ಧರ್ಮಗಳ ನಡುವೆ ಕಂದಕ ಸೃಷ್ಠಿಸಿ ಅದರ ದುರ್ಲಾಭ ಪಡೆದು ತನ್ನ ರಾಜಕೀಯ ಇರುವಿಕೆಯನ್ನು ಸ್ಥಾಪಿಸಲು ಹೊರಟಿರುವ ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆಗಳ ದುರುದ್ದೇಶವನ್ನು ಜನತೆ ಅರಿಯಬೇಕೆಂದು ಹಾಗೂ ಈ ಎರಡೂ ಬಲಪಂಥೀಯ ಶಕ್ತಿಗಳ ವಿಭಜಕ ನೀತಿಗಳನ್ನು ಬೆಂಗಳೂರು ಹಾಗೂ ರಾಜ್ಯದ ಜನತೆ ತಿರಸ್ಕರಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಇಂತಹ ಘಟನೆಗೆ ಕಾರಣವಾಗಿರುವ ಎಲ್ಲರ ಮೇಲೆ ಬಿಗಿ ಕ್ರಮವಹಿಸಿ ಶಾಂತಿ ಸೌಹಾರ್ದತೆ ಸ್ಥಾಪಿಸಲು ರಾಜ್ಯ ಸರ್ಕಾರ ಅಗತ್ಯ ತುರ್ತು ಕ್ರಮ ವಹಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ. ಒಟ್ಟು ಪ್ರಕರಣದ ಹಿಂದಿರುವ ಶಕ್ತಿಗಳನ್ನು ಪತ್ತೆ ಹಚ್ಚಲು ಸ್ವತಂತ್ರ ನ್ಯಾಯಾಂಗ ತನಿಖೆಗೆ ಕ್ರಮ ವಹಿಸಬೇಕೆಂದು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯ ಸರ್ಕಾರದ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು, ಶಾಸಕರು ಮತ್ತು ಆಡಳಿತಾರೂಢ ಬಿಜೆಪಿ ಪಕ್ಷದ ನಾಯಕರು ಜವಾಬ್ದಾರಿಯುತ ನಡವಳಿಕೆಗಳನ್ನು ಪ್ರದರ್ಶಿಸಿ ಹೊಣೆಗಾರಿಕೆಯ ಹೇಳಿಕೆಗಳನ್ನು ನೀಡಬೇಕೇ ವಿನಃ ಪರಿಸ್ಥಿತಿಯನ್ನು ಹದಗೆಡಿಸುವ ನಿಟ್ಟಿನ ಹೇಳಿಕೆಗಳನ್ನು ನೀಡುವಂತಹ ಹೊಣೆಗೇಡಿತನವನ್ನು ಪ್ರದರ್ಶಿಸಬಾರದೆಂದು ಸಿಪಿಐ(ಎಂ) ಆಗ್ರಹಿಸಿದೆ.

ಬೇಜವಾಬ್ದಾರಿ ಪೋಸ್ಟಿಂಗ್ಸ್ ಮತ್ತು ಹೊಣೆಗೇಡಿತನದ ಭಾವೋದ್ರೇಕದ ಉತ್ತೇಜನಗಳು ಮೂರು ಜನರ ಸಾವಿಗೆ, ಹತ್ತಾರು ಜನರ ನೋವಿಗೆ ಹಾಗೂ ಲಕ್ಷಾಂತರ ರೂಪಾಯಿ ಆಸ್ತಿ–ಪಾಸ್ತಿ ನಷ್ಟಕ್ಕೆ ಕಾರಣವಾಗಿದೆ. ಇಂತಹ ಸಂದರ್ಭದಲ್ಲಿ ಶಾಂತಿ, ಸೌಹಾರ್ದತೆಯನ್ನು ಕಾಪಾಡಲು ಅತ್ಯಂತ ತುರ್ತಾಗಿ ಸಂಯಮದ ನಡವಳಿಕೆಯನ್ನು ಜನತೆ ಪ್ರದರ್ಶಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

__ಯು. ಬಸವರಾಜ,__ ಕಾರ್ಯದರ್ಶಿ,
ಸಿಪಿಐ(ಎಂ), ಕರ್ನಾಟಕ ರಾಜ್ಯ ಸಮಿತಿ
__ಕೆ.ಎನ್. ಉಮೇಶ್,__ ಕಾರ್ಯದರ್ಶಿ,
ಸಿಪಿಐ(ಎಂ), ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ
__ಎನ್. ಪ್ರತಾಪ್‌ಸಿಂಹ,__ ಕಾರ್ಯದರ್ಶಿ,
ಸಿಪಿಐ(ಎಂ), ಬೆಂಗಳೂರು ಉತ್ತರ ಜಿಲ್ಲಾ ಸಮಿತಿ





ಕರಾವಳಿ ಜಿಲ್ಲೆಗಳಲ್ಲಿ ಭಾರತ ಉಳಿಸಿ ದಿನಾಚರಣೆ

ವರದಿ: ವಾ.ಉ.

ರೈತ ಸಮೂಹಕ್ಕೆ ವಿನಾಶಕಾರಿಯಾದ ಭೂಸುಧಾರಣಾ ಕಾಯಿದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ವಿದ್ಯುತ್ ಕಾಯಿದೆ, ಅಗತ್ಯ ವಸ್ತುಗಳ ಕಾಯಿದೆ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿ, ಕಾರ್ಮಿಕ ಕಾಯ್ದೆಗಳಿಗೆ ತರಲಾಗುತ್ತಿರುವ ಪ್ರಗತಿ ವಿರೋಧಿ ತಿದ್ದುಪಡಿಗಳು ಹಾಗೂ ವ್ಯತ್ಯಸ್ತ ತುಟ್ಟಿಭತ್ತೆಯ ವ್ಎಎಂದ್ಊಡ್ಎವಿಕೆಂಎ ಆದೇಶಗಳನ್ನು ಕೂಡಲೇ ಹಿಂತೆಗೆಯಬೇಕೆಂದು ಆಗ್ರಹಿಸಿ, ಕೇಂದ್ರ ಸರಕಾರದ ನೀತಿಗಳಿಂದಾಗಿ ಹೆಚ್ಚುತ್ತಿರುವ ನಿರುದ್ಯೋಗಿಗಳಿಗೆ ಪರಿಹಾರ ಇಲ್ಲವೇ ಉದ್ಯೋಗ ಸೃಷ್ಟಿಸಬೇಕೆಂದು ಆಗ್ರಹಿಸಿ ಅಲ್ಲದೆ ಶಿಕ್ಷಣ ಕ್ಷೇತ್ರವನ್ನು ಖಾಸಗೀವಲಯಕ್ಕೆ ಹಸ್ತಾಂತರಿಸಲು ಉದ್ದೇಶಿಸಿರುವ ನೂತನ ಶಿಕ್ಷಣ ನೀತಿ–2020ನ್ನು ಜಾರಿಗೊಳಿಸುವುದರ ವಿರುದ್ಧ ಹಾಗೂ ಕೋವಿಡ್–19ನ್ನು ಭ್ರಷ್ಟಾಚಾರ ನಡೆಸದೆ ನಿಗ್ರಹಿಸಲು ಆಗ್ರಹಿಸಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಒಕ್ಕೂಟ, ಜಿಲ್ಲಾ ರೈತ ಸಂಘರ್ಷ ಸಮನ್ವಯ ಸಮಿತಿ, ಯುವಜನ ವಿದ್ಯಾರ್ಥಿ ಮಹಿಳಾ ಮತ್ತು ಸಾಂಸ್ಕೃತಿಕ ಸಂಘಟನೆಗಳು, ದಲಿತ ಮತ್ತು ಆದಿವಾಸಿ ಸಂಘಟನೆಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ನಗರ ಪಟ್ಟಣಗಳಲ್ಲಿ ಆಗಸ್ಟ್ 10 ರಂದು ಪ್ರತಿಭಟನಾ ಪ್ರದರ್ಶನ ನಡೆಸುವುದರ ಮೂಲಕ "ಭಾರತ ಉಳಿಸಿ" ದಿನಾಚರಣೆ ಆಚರಿಸಿದವು.

ಕ್ವಿಟ್ ಇಂಡಿಯಾ ದಿನದ ನೆನಪನ್ನು ಹುಟ್ಟಿಸುವಂತೆ, ಕೇಂದ್ರ ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳನ್ನು ಕೈಬಿಡುವಂತೆ ಆಗ್ರಹಿಸಿ "ಭಾರತ ಉಳಿಸಿ" ದಿನಾಚರಣೆಯನ್ನು ದೇಶಾದ್ಯಂತ ನಡೆಸಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಒಕ್ಕೂಟ, ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿಗಳು ಕರೆ ಕೊಟ್ಟ ಮೇರೆಗೆ ಈ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲಾಗಿತ್ತು. ಎರಡೂ ಜಿಲ್ಲೆಗಳಲ್ಲಿ ಆ ದಿನದಲ್ಲಿ ಬೆಳಗ್ಗಿನಿಂದ ಎಡೆಬಿಡದೆ ಧಾರಾಕಾರ ಮಳೆ ಸುರಿಯುತ್ತಿದ್ದರೂ, ಎಲ್ಲಾ ಊರುಗಳಲ್ಲೂ ನೂರಾರು ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಭಾಗವಹಿಸಿದ್ದರು. ಕೋವಿಡ್ ಪಿಡುಗಿನ ಹಿನ್ನಲೆಯಲ್ಲಿ ಮುಖಕ್ಕೆ ಮುಖಗವಸು ತೊಟ್ಟು ಹಾಗೂ ರೈನ್‌ಕೋಟ್ ಇಲ್ಲವೇ ಕೊಡೆ ಹಿಡಿದುಕೊಂಡೇ ಪ್ರತಿಭಟನಾಕಾರರು ಸತ್ಯಾಗ್ರಹ ನಡೆಸಿದರು.

ಕೋವಿಡ್–19ರ ಹಿನ್ನೆಲೆಯಲ್ಲಿ ಆದಾಯ ತೆರಿಗೆದಾರರಲ್ಲದ ಪ್ರತಿ ಕುಟುಂಬಕ್ಕೆ ಮಾಸಿಕ ರೂ.7500 ನೇರ ನಗದು ವರ್ಗಾವಣೆ ಮಾಡಬೇಕು, ಮನೆಯ ಪ್ರತಿ ಸದಸ್ಯನಿಗೆ ಪ್ರತಿ ತಿಂಗಳೂ 10 ಕೆ.ಜಿ.ಯಷ್ಟು ಉಚಿತ ಆಹಾರ ಧಾನ್ಯ ವಿತರಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರತಿ ಕೂಲಿಕಾರನಿಗೂ ವರ್ಷಕ್ಕೆ 200 ದಿನಗಳ ಕೆಲಸ ಹಾಗೂ ಹೆಚ್ಚಿಸಿದ ಕೂಲಿ ನೀಡಬೇಕು, ಮಹಿಳೆಯರು ದಲಿತರು ಆದಿವಾಸಿಗಳು ಹಾಗೂ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಬೇಕು ಎಂದು ಸತ್ಯಾಗ್ರಹಿಗಳು ಆಗ್ರಹಿಸಿದರು.

ಮಂಗಳೂರು:

ಮಿನಿ ವಿಧಾನಸೌಧದ ಎದುರು ನಡೆದ ಪ್ರದರ್ಶನವನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಮುಖಂಡ ವಾಸುದೇವ ಉಚ್ಚಿಲ, ಎಐಟಿಯುಸಿ ಜಿಲ್ಲಾ ಮುಖಂಡ ಸೀತಾರಾಮ ಬೇರಿಂಜೆ, ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಡಿವೈಎಫ್‌ಐನ ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ ಮತ್ತು ಎಸ್‌ಎಫ್‌ಐ ಜಿಲ್ಲಾಧ್ಯಕ್ಷರಾದ ಮಾಧುರಿ ಬೋಳಾರ್ ಮಾತನಾಡಿದರು. ಎಐಟಿಯುಸಿ ಜಿಲ್ಲಾಧ್ಯಕ್ಷರಾದ ಎಚ್.ವಿ. ರಾವ್ ಸ್ವಾಗತಿಸಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಧನ್ಯವಾದವಿತ್ತರು.

ಸಮುದಾಯ ಹಾಗೂ ಎಐಎಲ್‌ಯು ಜಿಲ್ಲಾ ಮುಖಂಡರಾದ ಯಶವಂತ ಮರೋಳಿ, ಸಿಐಟಿಯು, ಎಐಟಿಯುಸಿ ಜಿಲ್ಲಾ ಮುಖಂಡರು, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಮುಖಂಡರಾದ ಜಯಂತಿ ಬಿ.ಶೆಟ್ಟಿ ಮತ್ತು ಭಾರತಿ ಬೋಳಾರ್, ಡಿವೈಎಫ್‌ಐ ದ.ಕ.ಜಿಲ್ಲಾ ಮುಖಂಡರಾದ ಸಂತೋಷ್ ಬಜಾಲ್, ನವೀನ್ ಕೊಂಚಾಡಿ, ಎಸ್‌ಎಫ್‌ಐ ಜಿಲ್ಲಾ ಮುಖಂಡರಾದ ವಿಕಾಸ್ ಕುತ್ತಾರ್, ಡಿಎಚ್‌ಎಸ್ ಮುಖಂಡರಾದ ತಿಮ್ಮಯ್ಯ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ಬ್ಯಾಂಕ್ ನೌಕರ ಸಂಘಟನೆಯ ವಿನ್ಸೆಂಟ್ ಡಿಸೋಜ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಡುಪಿ:

ಪ್ರಧಾನ ಅಂಚೆ ಕಚೇರಿ ಎದುರು ಕಾರ್ಮಿಕ ಸಂಘಟಗಳ ಜಂಟಿ ಸಮಿತಿ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿಯಾದ ಬಾಲಕೃಷ್ಣ ಶೆಟ್ಟಿ ಮಾತನಾಡಿದರು.

ಬಳಿಕ ವಿವಿಧ ಬೇಡಿಕೆಗಳ ಮನವಿಯನ್ನು ಅಂಚೆ ಅಧೀಕ್ಷಕರ ಮೂಲಕ ಪ್ರಧಾನ ಮಂತ್ರಿಯವರಿಗೆ ಸಲ್ಲಿಸಲಾಯಿತು. ಉಡುಪಿ ಜಿಲ್ಲಾ ಸಿಐಟಿಯು ಮುಖಂಡರಾದ ಶಶಿಧರ ಗೊಲ್ಲ, ಉಮೇಶ್ ಕುಂದರ್, ಸಿಐಟಿಯು ಉಡುಪಿ ತಾಲೂಕು ಮುಖಂಡರಾದ ಕವಿರಾಜ್ ಎಸ್, ಮೋಹನ್, ವಿದ್ಯಾರಾಜ್, ಎಐಟಿಯುಸಿ ಜಿಲ್ಲಾಧ್ಯಕ್ಷ ಕೆ.ವಿ.ಭಟ್ ಮತ್ತು ಎಐಟಿಯುಸಿ ಜಿಲ್ಲಾ ಮುಖಂಡರು ಪ್ರತಿಭಟನಾ ಧರಣಿಯಲ್ಲಿ ಭಾಗವಹಿಸಿದ್ದರು.

ಮೂಡಬಿದ್ರಿ:

ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ ಕರ್ನಾಟಕ, ಬ್ಲಾಕ್ ಕಿಸಾನ್ ಕಾಂಗ್ರೆಸ್ ಮತ್ತು ಸಿಐಟಿಯು ಮೂಡಬಿದರೆ ತಾಲೂಕು ಸಂಘಟನೆಗಳು ಜಂಟಿಯಾಗಿ ನಡೆಸಿದವು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆಯ ದ.ಕ.ಜಿಲ್ಲಾ ಉಪಾಧ್ಯಕ್ಷ ಆಲ್ವಿನ್ ಮೆನೇಜಸ್, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಯಾದವ ಶೆಟ್ಟಿ ಮಾತನಾಡಿದರು.

ಬಳಿಕ ತಹಶೀಲ್ದಾರ್ ಮೂಲಕ ಬೇಡಿಕೆಗಳ ಮನವಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಲಾಯಿತು. ರಾಜ್ಯ ರೈತ ಸಂಘದ ಮೂಡಬಿದರೆ ತಾಲೂಕು ಮುಖಂಡರು, ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಮುಖಂಡರಾದ ಸುಂದರ ಶೆಟ್ಟಿ, ಕೃಷ್ಣಪ್ಪ ಕೊಣಾಜೆ, ಸಿಐಟಿಯು ತಾಲೂಕು ಮುಖಂಡರಾದ ರಮಣಿ ಮೂಡಬಿದ್ರಿ, ಗಿರಿಜಾ, ರಾಧಾ, ಶಂಕರ ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದರು.

ಬೆಳ್ತಂಗಡಿ:


ಇಲ್ಲಿನ ಮಿನಿ ವಿಧಾನಸೌಧದ ಎದುರು ನಡೆದ ಪ್ರತಿಭಟನಾ ಪ್ರದರ್ಶನವನ್ನು ಸಿಐಟಿಯು ಬೆಳ್ತಂಗಡಿ ತಾಲೂಕು ಸಮಿತಿ, ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿ ಹಾಗೂ ಕರ್ನಾಟಕ ರಾಜ್ಯ ರೈತ ಸಂಘ ಜೊತೆಯಾಗಿ ಸಂಘಟಿಸಿತ್ತು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ತಾಲೂಕು ಸಮಿತಿ ಅಧ್ಯಕ್ಷ ಶಿವಕುಮಾರ್ ಎಸ್.ಎಂ, ಮುಖಂಡರುಗಳಾದ ವಸಂತ ನಡ, ಶೇಖರ ಲಾಯಿಲ, ಸುಕನ್ಯಾ ಎಚ್, ಕರ್ನಾಟಕ ರಾಜ್ಯ ರೈತ ಸಂಘದ ದ.ಕ. ಜಿಲ್ಲಾಧ್ಯಕ್ಷ ಸುರೇಶ್ ಭಟ್ ಕೊಜಂಬೆ ಮಾತನಾಡಿದರು.

ಪ್ರತಿಭಟನೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ಸುಧಾ ಕೆ.ರಾವ್, ಮಾಲಿನಿ ಕೈಕಂಭ, ಪ್ರಾಂತ ರೈತ ಸಂಘದ ಮನೋಹರ ನಿಡ್ಲೆ, ಜಯನ್ ಮುಂಡಾಜೆ, ಡಿವೈಎಫ್‌ಐನ ಸುಜಿತ್ ಉಜಿರೆ, ಎಸ್‌ಎಫ್‌ಐ ಸಂಘಟನೆಯ ಸುಹಾಸ್, ಸುದೀಪ್ ಭಾಗವಹಿಸಿದ್ದರು.

ಬಂಟ್ವಾಳ:

ಬಿಸಿರೋಡ್‌ನಲ್ಲಿರುವ ಬಂಟ್ವಾಳ ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಎಐಟಿಯುಸಿ, ಸಿಐಟಿಯು, ಡಿವೈಎಫ್‌ಐ, ಎಐವೈಎಫ್ ಮತ್ತು ಎನ್‌ಎಫ್‌ಐಡಬ್ಲ್ಯೂನ ಬಂಟ್ವಾಳ ತಾಲೂಕು ಸಮಿತಿಗಳು ಸಂಯುಕ್ತವಾಗಿ ವಹಿಸಿದ್ದವು.

ಪ್ರತಿಭಟನೆಯನ್ನುದ್ದೇಶಿಸಿ ಎಐಟಿಯುಸಿ ತಾಲೂಕು ಮುಖಂಡರಾದ ಬಿ.ಶೇಖರ್, ಸುರೇಶ್ ಕುಮಾರ್, ಸಿಐಟಿಯು ತಾಲೂಕು ಮುಖಂಡರಾದ ರಾಮಣ್ಣ ವಿಟ್ಲ, ಉದಯಕುಮಾರ್, ಡಿವೈಎಫ್‌ಐನ ತುಳಸೀದಾಸ್ ವಿಟ್ಲ, ಎಐವೈಎಫ್‌ನ ಪ್ರೇಮನಾಥ್ ಮತ್ತು ಎನ್‌ಎಫ್‌ಐಡಬ್ಲ್ಯೂನ ಭಾರತೀ ಪ್ರಶಾಂತ್ ಮಾತನಾಡಿದರು.



ತೊಕ್ಕೊಟು:

ಉಳ್ಳಾಲ ವಲಯ ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘದ ಉಳ್ಳಾಲ ವಲಯ, ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ಮತ್ತು ಡಿಎಚ್‌ಎಸ್‌ಗಳ ಜಂಟಿ ನೇತೃತ್ವದಲ್ಲಿ "ಭಾರತ ಉಳಿಸಿ" ದಿನಾಚರಣೆಯ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಸಿಐಟಿಯು ದ.ಕ.ಜಿಲ್ಲಾ ಮುಖಂಡರಾದ ಪದ್ಮಾವತಿ ಶೆಟ್ಟಿ, ಯು.ಜಯಂತ ನಾಯಕ್, ಉಳ್ಳಾಲ ವಲಯ ಮುಖಂಡರಾದ ವಿಲಾಸಿನಿ, ಡಿವೈಎಫ್‌ಐ ಉಳ್ಳಾಲ ವಲಯ ಕಾರ್ಯದರ್ಶಿ ಅಶ್ರಫ್ ಕೆ.ಸಿ.ರೋಡ್, ಪ್ರಾಂತ ರೈತ ಸಂಘದ ವಲಯ ಕಾರ್ಯದರ್ಶಿ ಜಯಂತ ಅಂಬ್ಲಮೊಗರು ಮಾತನಾಡಿದರು. ಡಿವೈಎಫ್‌ಐ, ಜೆಎಂಎಸ್, ಡಿಎಚ್‌ಎಲ್, ಸಿಐಟಿಯು ಹಾಗೂ ಪ್ರಾಂತ ರೈತ ಸಂಘದ ಉಳ್ಳಾಲ ವಲಯದ ನಾಯಕರು, ಕಾರ್ಯಕರ್ತರು ಭಾಗವಹಿಸಿದ್ದರು.

ಗುರುಪುರ ಕೈಕಂಭ:

ಗುರುಪುರ ವಲಯ ಪ್ರಾಂತ ರೈತ ಸಂಘ ಮತ್ತು ಸಿಐಟಿಯು ಜಂಟಿ ನೇತೃತ್ವದಲ್ಲಿ ಕೈಕಂಭ ಪೇಟೆಯಲ್ಲಿ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಉಪಾಧ್ಯಕ್ಷ ಸದಾಶಿವದಾಸ್, ಸಿಐಟಿಯು ಗುರುಪುರ ವಲಯ ಕಾರ್ಯದರ್ಶಿ ನೋಣಯ್ಯ ಗೌಡ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಸಿಐಟಿಯು ವಲಯ ಸಮಿತಿ ಮುಖಂಡರಾದ ಆನಂದ ಇರುವೈಲ್ ಸ್ವಾಗತಿಸಿದರು. ಇನ್ನೊಬ್ಬ ಮುಖಂಡರಾದ ಗಂಗಯ್ಯ ಅಮೀನ್ ವಂದಿಸಿದರು.

ಕರಾವಳಿ ಜಿಲ್ಲೆಗಳಲ್ಲಿ ಸ್ಕೀಮ್ ನೌಕರರ ಪ್ರತಿಭಟನೆಗಳು:

ಆಗಸ್ಟ್ 7 ರಂದು ರಾಜ್ಯಾದ್ಯಂತ ಸ್ಕೀಮ್ ನೌಕರರು ಕೇಂದ್ರ ರಾಜ್ಯ ಸರಕಾರಗಳ ನೌಕರ ವಿರೋಧಿ ನೀತಿಯನ್ನು ಖಂಡಿಸಿ ಪ್ರತಿಭಟನಾ ಪ್ರದರ್ಶನ ನಡೆಸಲು ಕರೆ ನೀಡಿದ ಮೇರೆಗೆ ದ.ಕ.ಹಾಗೂ ಉಡುಪಿ ಜಿಲ್ಲೆಗಳ ವಿವಿದೆಡೆಗಳಲ್ಲಿ ಪ್ರದರ್ಶನಗಳು ನಡೆದವು.

ಉಡುಪಿ ಜಿಲ್ಲೆಯಲ್ಲಿ ಅಕ್ಷರದಾಸೋಹ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರ ಬೇಡಿಕೆಗಳನ್ನಿಟ್ಟು ನಡೆದ ಧರಣಿ ಸತ್ಯಾಗ್ರಹವನ್ನುದ್ದೇಶಿಸಿ ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಧರಣಿಯಲ್ಲಿ ಅಂಗನವಾಡಿ ನೌಕರರ ಸಂಘದ ತಾಲೂಕು ಮುಖಂಡರಾದ ಅಂಬಿಕಾ, ಭಾರತಿ, ಅಕ್ಷರದಾಸೋಹ ನೌಕರರ ಸಂಘದ ಸುನಂದಾ, ಕಮಲಾ, ಸಿಐಟಿಯು ತಾಲೂಕು ಮುಖಂಡರಾದ ರಾಮ ಕರ್ಕಡ, ಕವಿರಾಜ್, ಮೋಹನ್, ವಿದ್ಯಾರಾವ್ ಭಾಗವಹಿಸಿದ್ದರು.

ಕುಂದಾಪುರದಲ್ಲಿ ನಡೆದ ಪ್ರತಿಭಟನಾ ಧರಣಿಯನ್ನುದ್ದೇಶಿಸಿ ಅಂಗನವಾಡಿ ನೌಕರರ ಸಂಘದ ಉಡುಪಿ ಜಿಲ್ಲಾ ಕಾರ್ಯದರ್ಶಿ ಸುಶೀಲಾ ನಾಡ ಮಾತನಾಡಿದರು. ಸಿಐಟಿಯು ವಲಯ ಮುಖಂಡರಾದ ಎಚ್. ನರಸಿಂಹ, ಸುರೇಶ್ ಕಲ್ಲಾಗರ, ಅಂಗನವಾಡಿ ನೌಕರರ ಸಂಘದ ಹಾಗೂ ಅಕ್ಷರದಾಸೋಹ ಸಂಘದ ವಲಯ ಮುಖಂಡರು ಹಾಜರಿದ್ದರು.

ಉಡುಪಿ ತಾಲೂಕಿನ ಬ್ರಹ್ಮಾವರದಲ್ಲಿ ನಡೆದ ಧರಣಿಯನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಕೋಶಾಧಿಕಾರಿ ಶಶಿಧರ ಗೊಲ್ಲ, ಅಂಗನವಾಡಿ ನೌಕರರ ಸಂಘದ ಮುಖಂಡರಾದ ಸರೋಜ, ಹರಿಣಿ ಮಾತನಾಡಿದರು.

ಮಂಗಳೂರಿನಲ್ಲಿ ದ.ಕ.ಜಿಲ್ಲಾ ಪಂಚಾಯತ್ ಕಚೇರಿ ಎದುರು ದ.ಕ.ಜಿಲ್ಲಾ ಅಕ್ಷರದಾಸೋಹ ನೌಕರರ ಸಂಘದ ಸದಸ್ಯರು ನಡೆಸಿದ ಪ್ರತಿಭಟನೆಯನ್ನುದ್ದೇಶಿಸಿ ಜಿಲ್ಲಾ ಸಂಘದ ಅಧ್ಯಕ್ಷರಾದ ಪದ್ಮಾವತಿ ಶೆಟ್ಟಿ, ಅಕ್ಷರದಾಸೋಹ ಜಿಲ್ಲಾ ಮುಖಂಡರಾದ ಭವ್ಯಾ ಮುಚ್ಚೂರು ಮಾತನಾಡಿದರು. ಬಳಿಕ ಜಿ.ಪಂ. ಕಾರ್ಯ ನಿರ್ವಾಹಣಾಧಿಕಾರಿಗಳ ಮೂಲಕ ↗

ಬೈಂದೂರು: ರೈತ, ಕೃಷಿ ಕೂಲಿ, ಕಾರ್ಮಿಕರ ಬೃಹತ್ ಪ್ರತಿಭಟನೆ
ಕೊರೊನಾ ಖರೀದಿ ಭ್ರಷ್ಟಾಚಾರ ಹಗರಣದ ತನಿಖೆಯಾಗಲಿ–ಕೆ. ಶಂಕರ್

ಕೇಂದ್ರ ಕಾರ್ಮಿಕ ಸಂಘಗಳಿಂದ ದೇಶ ವ್ಯಾಪಿ ಪ್ರತಿರೋಧ ಪ್ರತಿಭಟನೆಯ ಕೆರೆಯ ಮೇರೆಗೆ ಬೈಂದೂರು ಅಂಚೆ ಕಚೇರಿ ಎದುರು ರೈತ, ಕೃಷಿ ಕೂಲಿ, ಕಾರ್ಮಿಕರ ಬೃಹತ್ ಪ್ರತಿಭಟನೆಯನ್ನು 10 ಆಗಸ್ಟ್ 2020 ಜರುಗಿತು. ಸಿಐಟಿಯು ಕಾರ್ಮಿಕ ಸಂಘದ ಉಡುಪಿ ಜಿಲ್ಲಾಧ್ಯಕ್ಷ ಕೆ. ಶಂಕರ ರವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಾ, ಮುಂಚೂಣಿಯ ಆರೋಗ್ಯ ವಾರಿಯರ್ಸರನ್ನು ಖಾಯಂ ಗೊಳಿಸಬೇಕು ಮತ್ತು ಪೂರ್ಣ ವೇತನ ನೀಡಬೇಕು, ಕಾರ್ಮಿಕರಿಗೆ ಪೂರ್ಣ ವೇತನ ದೊಂದಿಗೆ ಉದ್ಯೋಗ ನೀಡಿ, ಲಾಕ್‌ಡೌನ್ ಅವಧಿಗೆ ಸಂಬಳ ನೀವು ಪಾವತಿಸಬೇಕು. ಎಂದು ಸರ್ಕಾರವನ್ನು ಆಗ್ರಹಿಸಿದರು. ಇದಕ್ಕೂ ಮೊದಲು ಬೈಂದೂರು ಸಿಐಟಿಯು ಕಚೇರಿಯಲ್ಲಿ ಜರುಗಿದ ಕಾರ್ಮಿಕರ ಸಭೆಯಲ್ಲಿ ರಾಜೀವ್ ಪಡುಕೋಣೆ, ವೆಂಕಟೇಶ್ ಕೋಣಿ, ಗಣೇಶ ದೇವಾಡಿಗ ತೊಂಡೆಮಕ್ಕಿ, ಉದಯ ಗಾಣಿಗ ಮೊಗೇರಿ ಮಾತನಾಡಿದರು. ಕಾರ್ಮಿಕ ಮುಖಂಡರಾದ ಮಾಧವ ದೇವಾಡಿಗ ಉಪ್ಪುಂದ, ಶ್ರೀಧರ್ ಉಪ್ಪುಂದ, ವಿಜಯ ಕೊಯಾನಗರ, ನಾಗರತ್ನ ನಾಡ, ಜನವಾದಿ ಮಹಿಳಾ ಸಂಘದ ಶೀಲಾವತಿ ಉಪಸ್ಥಿತರಿದ್ದರು. ರೋನಾಲ್ಡ್ ರಾಜೇಶ್ ಕ್ವಾಡ್ರ ಪ್ರಧಾನ ಮಂತ್ರಿಗೆ ಸಲ್ಲಿಸುವ ಮನವಿ ಓದಿದರು.



ಬೈಂದೂರು: ಕಟ್ಟಡ ಕಾರ್ಮಿಕರ ಸಮಾವೇಶ

ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ಸಿಐಟಿಯು) ನೇತೃತ್ವದಲ್ಲಿ ಪಡುವರಿ, ಕೆರ್ಗಾಲ್ ಮೊಗೇರಿ ಪ್ರದೇಶದ ಕಟ್ಟಡ ಕಾರ್ಮಿಕರ ಸಮಾವೇಶವು ಬೈಂದೂರು ಸಿಐಟಿಯು ಕಚೇರಿಯಲ್ಲಿ ಯಶಸ್ವಿಯಾಗಿ ಜರುಗಿತು. ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಗಣೇಶ ದೇವಾಡಿಗ ತೊಂಡೆಮಕ್ಕಿ ರವರು ಮಾತನಾಡುತ್ತಾ, ಕಾರ್ಮಿಕರ ಸಂಘದಲ್ಲಿ ಸೇರ್ಪಡೆಯಾಗಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸಿಗುವ ಸುಮಾರು ಹನ್ನೆರಡು ರೀತಿಯ ವಿವಿಧ ಸೌಲಭ್ಯದ ಸಹಾಯ ಧನ ಪಡೆಯಲು ಸಂಘದ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ, ಸಂಘಟನೆ ಬಲಪಡಿಸಬೇಕು ಎಂದು ಹೇಳಿದರು. ಕಾರ್ಮಿಕ ಮುಖಂಡರಾದ ವೆಂಕಟೇಶ್ ಕೋಣಿ, ರೊನಾಲ್ಡ್ ರಾಜೇಶ್ ಕ್ವಾಡ್ರಸ್, ಉದಯ ಗಾಣಿಗ ಮೊಗೇರಿ, ಮಂಜು ಪಡುವರಿ ಸಭೆಯಲ್ಲಿ ಮಾತನಾಡಿದರು. ಮೊಗೇರಿ ಘಟಕದ ಕಾರ್ಯದರ್ಶಿ ಸುರೇಶ್ ದೇವಾಡಿಗ, ಪಡುವರಿ ಘಟಕದ ಕಾರ್ಯದರ್ಶಿ ನಾಗರತ್ನ ಉಪಸ್ಥಿತರಿದ್ದರು.

ಹೇರೂರು: ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೂಲಿಕಾರರ ಸಮಾವೇಶ

ಹೇರೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಸಮಾವೇಶವು 12 ಆಗಸ್ಟ್ 2020 ರಂದು ಹೇರೂರು ಗ್ರಾಮ ಪಂಚಾಯತ್ ಕಚೇರಿ ಬಳಿ ಜರಗಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಕೂಲಿಕಾರರನ್ನುದ್ದೇಶಿಸಿ ಮಾತನಾಡುತ್ತಾ, ಕೊರೊನಾ ಸೊಂಕಿನ ಸಂಕಷ್ಟದ ಈ ಸಮಯದಲ್ಲಿ ನಿರುದ್ಯೋಗಿಗಳಾಗಿರುವ ಕೂಲಿ ಕಾರ್ಮಿಕರಿಗೆ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿ ಮಾಡಲು ದಿನಕ್ಕೆ ರೂಪಾಯಿ 600 ರೂ. ಗಳಂತೆ ವೇತನ ಹಾಗೂ ಕುಟುಂಬ ಒಂದರ ವಾರ್ಷಿಕ 200 ದಿನಗಳ ಕೆಲಸ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಸಭೆಯಲ್ಲಿ 1) ರಾಗಿಹಕ್ಲು, ಮೆಡ್ಲಗೇರಿ ಪ್ರದೇಶ ಮತ್ತು 2) ಯರುಕೋಣೆ ಪ್ರದೇಶ ವ್ಯಾಪ್ತಿಯ 101 ಕೂಲಿಕಾರರನ್ನು ಒಳಗೊಂಡ ಎರಡು ಕಾಯಕ ಸಂಘಗಳನ್ನು ರಚನೆ ಮಾಡಲಾಯಿತು. ಯರುಕೋಣೆ ಬೇಬಿ ಮತ್ತು ರಾಧಾ ಮೆಡ್ಲಗೇರಿ ಇವರನ್ನು ಕಾಯಕ ಸಂಘಗಳ ಎರಡು ಗುಂಪುಗಳಿಗೆ ಕಾಯಕ ಬಂಧುಗಳನ್ನಾಗಿ ಆಯ್ಕೆ ಮಾಡಲಾಯಿತು. ಸ್ಥಳೀಯ ಕಾರ್ಮಿಕ ಮುಖಂಡ ಗಣಪತಿ ಪೂಜಾರಿ ಯರುಕೋಣೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಚಂದ್ರ ಪೂಜಾರಿ ಮೆಡ್ಲಗೇರಿ ಎಲ್ಲರನ್ನು ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ

ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬೆಳ್ತಂಗಡಿ ಮಿನಿ ವಿಧಾನಸೌಧದ ಎದುರು ಅಕ್ಷರದಾಸೋಹ ನೌಕರರ ಸಂಘದ ವತಿಯಿಂದ ಪ್ರತಿಭಟನೆ ನಡೆಯಿತು. ಸಿಐಟಿಯು ತಾಲೂಕು ಅಧ್ಯಕ್ಷರಾದ ಶಿವಕುಮಾರ್ ಎಸ್.ಎಂ. ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಪುತ್ತೂರಿನಲ್ಲಿ ತಾಲೂಕು ಕಚೇರಿ ಮುಂದೆ ಅಕ್ಷರದಾಸೋಹ ನೌಕರರ ತಾಲೂಕು ಸಂಘದ ವತಿಯಿಂದ ನಡೆದ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ಸಿಐಟಿಯು ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಜಿಲ್ಲಾ ಮುಖಂಡರಾದ ರಾಮಣ್ಣ ವಿಟ್ಲ ಮಾತನಾಡಿದರು. ತಹಶೀಲ್ದಾರರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಮೂಡಬಿದರೆ ತಾಲೂಕು ಕಚೇರಿ ಎದುರು ಮೂಡಬಿದ್ರೆ ತಾಲೂಕು ಅಕ್ಷರದಾಸೋಹ ಸಂಘದ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಸಂಘಟನೆಯ ಮುಖಂಡರಾದ ರಾಧಾ ಮೂಡಬಿದರೆ, ಸಿಐಟಿಯು ಮುಖಂಡರಾದ ರಮಣಿ ಮೂಡಬಿದರೆ ಮಾತನಾಡಿದರು. ಬಳಿಕ ತಹಶೀಲ್ದಾರರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬಿ.ಸಿ. ರೋಡಿನಲ್ಲಿ ಬಂಟ್ವಾಳ ತಾಲೂಕು ಮಿನಿ ವಿಧಾನಸೌಧದ ಎದುರು ಅಕ್ಷರದಾಸೋಹ ತಾಲೂಕು ಸಂಘದ ವತಿಯಿಂದ ನಡೆದ ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಅಕ್ಷರದಾಸೋಹ ಬಂಟ್ವಾಳ ತಾಲೂಕು ಸಂಘದ ಗೌರವಾಧ್ಯಕ್ಷರಾದ ರಾಮಣ್ಣ ವಿಟ್ಲ ಮಾತನಾಡಿದರು. ಡಿವೈಎಫ್‌ಐ ಕಾರ್ಯಕರ್ತರು ಕೂಡಾ ತಮ್ಮ ಬಾವುಟಗಳೊಂದಿಗೆ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು. ●

ಜನವಿರೋಧಿಯಾದ ತಿದ್ದುಪಡಿ ಕಾಯ್ದೆಗಳ ಸುಗ್ರೀವಾಜ್ಞೆಗಳನ್ನು ವಾಪಾಸು ಪಡೆಯಲು ಹಾಗೂ ಇತರೇ ಹಕ್ಕೊತ್ತಾಯಗಳನ್ನು ಈಡೇರಿಸಲು ಒತ್ತಾಯ

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ, ದೌರ್ಜನ್ಯದ ದೇವದಾಸಿ ಪದ್ಧತಿ, ಲಿಂಗ ಹಾಗೂ ಜಾತಿ ತಾರತಮ್ಯ, ಅಸ್ಪೃಶ್ಯಾಚರಣೆಯನ್ನು ತೊಲಗಿಸಲು ಹೋರಾಡುತ್ತಿದೆ. ಅದೇ ಸಂದರ್ಭದಲ್ಲಿ, ಸದರಿ ಅಮಾನವೀಯ ಪರಿಸ್ಥಿತಿಯನ್ನು ತೊಲಗಿಸಲು, ದೇವದಾಸಿ ಮಹಿಳೆಯರು ಹಾಗೂ ಅವರ ಕುಟುಂಬದ ಸದಸ್ಯರು, ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಗಳು, ಹಿಂದುಳಿದ ವರ್ಗದ ಸಮುದಾಯಗಳ ಜನರು, ಎಲ್ಲಾ ಮಹಿಳೆಯರು, ಮೊದಲು ಸ್ವಾವಲಂಬಿಗಳಾಗಬೇಕೆಂದು ನಂಬಿ ದೌರ್ಜನ್ಯದ ದೇವದಾಸಿ ಪದ್ಧತಿಗೆ ಬಲಿಯಾದ ಮಹಿಳೆಯರ ನಡುವೆ ಜಾಗೃತಿಯನ್ನ ಮೂಡಿಸುತ್ತ ಚಳುವಳಿ ನಡೆಸುತ್ತಿದೆ. ತಮ್ಮ ಸರಕಾರದ ಮುಂದೆ ಅದಾಗಲೇ ಹಲವಾರು ಬಾರಿ ಹಕ್ಕೊತ್ತಾಯಗಳನ್ನು ಮಂಡಿಸುತ್ತಾ ಬಂದಿದೆ.

ಈ ಎಲ್ಲರಲ್ಲಿ ಬಹುತೇಕರು ಅವರ ಬದುಕು ನಿರ್ವಹಿಸಲು, ಅವರು ತಿಳಿದಿರುವುದು ವ್ಯವಸಾಯ ಮಾತ್ರವೇ ಆಗಿದೆ. ಅವರ ಸ್ವಾವಲಂಬನೆಗೆ ಜಮೀನು ಹಾಗೂ ಖಾಯಂ ಉದ್ಯೋಗ ಒದಗಿಸುವುದು ಮಾತ್ರವೇ, ಈ ಎಲ್ಲರನ್ನು ಅವರ ಪಾಳೆಯಗಾರಿ ಶೋಷಣೆಯಿಂದ ಮುಕ್ತಿ ಹೊಂದಲು ಅಗತ್ಯ ದಾರಿಯನ್ನು ತೆರೆಯಲಿದೆ.

ಆ ಕಾರಣದಿಂದಲೇ, ನಮ್ಮ ಸಂಘಟನೆ ನಿರಂತರವಾಗಿ ದೇವದಾಸಿ ಮಹಿಳೆಯರಿಗೆ ಮತ್ತು ನಮ್ಮ ಕುಟುಂಬದ ಸದಸ್ಯರಿಗೆ ಕನಿಷ್ಠ ಐದು ಎಕರೆ ಜಮೀನು ಸಮಯ ಮಿತಿಯಲ್ಲಿ ದೊರೆಯುವಂತೆ ಕ್ರಮ ವಹಿಸಲು ಒತ್ತಾಯಿಸುತ್ತಿದೆ.

ಇದು ಹಾಗೂ ಕೃಷಿಯನ್ನು ಲಾಭದಾಯಕ ಗೊಳಿಸುವ ಕ್ರಮಗಳು ರಾಜ್ಯದ ಒಟ್ಟು ಆದಾಯ ಹಾಗೂ ನಮ್ಮಗಳ ಸರಾಸರಿ ಆದಾಯವನ್ನು ಗಣನೀಯವಾಗಿ ಹೆಚ್ಚಿಸಿ, ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಿ ಕೈಗಾರಿಕೆಗಳ ಬೆಳವಣಿಗೆಗೆ ಅಗತ್ಯ ಬುನಾದಿಯನ್ನು, ವಿದ್ಯಾವಂತ ನಿರುದ್ಯೋಗಿಗಳ ಉದ್ಯೋಗಾವಕಾಶಗಳನ್ನು ತೆರೆಯಲಿದೆ.

ಆದರೇ, ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೊಳಿಸಲಿರುವ, ಕೃಷಿ ಉತ್ಪನ್ನಗಳ ಮಾರುಕಟ್ಟೆಯ ತಿದ್ದುಪಡಿ ಕಾಯ್ದೆ, ಭೂ ಸುಧಾರಣೆ ತಿದ್ದುಪಡಿ ಕಾಯ್ದೆಗಳು, ಕಾರ್ಪೋರೇಟ್ ಕಂಪನಿಗಳ ಮುಂಗಡ ವ್ಯಾಪಾರಕ್ಕೆ ಮತ್ತು ಗುತ್ತಿಗೆ ಹಾಗೂ ನೇರ ಬೇಸಾಯಕ್ಕೆ ಅವಕಾಶ ನೀಡುವ ತಿದ್ದುಪಡಿ ಕಾಯ್ದೆಗಳು, ಬೀಜ ಕಾಯ್ದೆ ಮತ್ತು ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆಗಳು, ಕಾರ್ಮಿಕ ಕಾಯ್ದೆಗಳ ಅಮಾನತು, ಅಗತ್ಯ ವಸ್ತು ತಿದ್ದುಪಡಿ ಕಾಯ್ದೆ, ಈ ಎಲ್ಲಾ ಸುಗ್ರೀವಾಜ್ಞೆಯ ಕ್ರಮಗಳು ನಮಗಿರುವ ಸ್ವಾವಲಂಬಿ ಬದುಕಿನ ಆಶಯಗಳನ್ನು ಮತ್ತು ಕನಸುಗಳನ್ನು ಹೊಸಕಿಹಾಕಿವೆ. ಮಾತ್ರವಲ್ಲಾ, ನಮ್ಮೆಲ್ಲರನ್ನು ಹಸಿವಿನ ಹಾಗೂ ಅಪೌಷ್ಠಿಕತೆಯ ಸಾವಿಗೆ ದೂಡಲಿವೆ. ಹಾಲಿ ಇರುವ ನಮ್ಮ ಮೇಲಿನ ದೌರ್ಜನ್ಯಗಳನ್ನು ಇವು ಹಲವು ಪಟ್ಟು ಹೆಚ್ಚಿಸಲಿವೆ.

ಸಾವಿರಾರು ವರ್ಷಗಳಿಂದ ಉಳುಮೆಯ ಜವಾಬ್ದಾರಿ ಹೊತ್ತ ನಮ್ಮ ಕೈನಲ್ಲಿ ಜಮೀನು ಹಾಗೂ ವ್ಯವಸಾಯ ಉಳಿಯುವಂತೆ ಕ್ರಮ ವಹಿಸುವ ಬದಲು, ಕಪ್ಪುಹಣವುಳ್ಳ ಖದೀಮರು ಹಾಗೂ ಕಾರ್ಪೋರೇಟ್ ಕಂಪನಿಗಳ ಕೈಗೆ ಜಮೀನು ಹಾಗೂ ವ್ಯವಸಾಯ ವರ್ಗಾವಣೆ ಮಾಡುವ, ದಲಿತರ ಹಾಗೂ ಉಳುಮೆದಾರರ ಮತ್ತು ಮಹಿಳೆಯರ ವಿರೋಧಿಯಾದ ಈ ತಿದ್ದುಪಡಿ ಕಾಯ್ದೆಗಳನ್ನು, ಅವುಗಳ ಸರ್ವಾಧಿಕಾರಿಯಾದ ಸುಗ್ರೀವಾಜ್ಞೆಗಳನ್ನು ನಾವು ಒಪ್ಪುವುದಿಲ್ಲ. ಆದ್ದರಿಂದ ಈ ಕೂಡಲೇ ಸುಗ್ರೀವಾಜ್ಞೆಗಳನ್ನು ವಾಪಾಸು ಪಡೆಯಲು ಒತ್ತಾಯಿಸುತ್ತೇವೆ.

ಆರ್ಥಿಕವಾಗಿ ಅತ್ಯಂತ ದುರ್ಬಲರು ಹಾಗೂ ಪರಾವಲಂಬಿಗಳು, ಅತ್ಯಂತ ತೀವ್ರ ಶೋಷಣೆಗೆ, ದಬ್ಬಾಳಿಕೆಗೊಳಗಾದ ನಾವುಗಳು ಕೋವಿಡ್ – 19 ಹಾಗೂ ಪೂರ್ವ ಭಾವಿ ಯೋಜಿಸದೆ ಜಾರಿಗೆ ತಂದ ಲಾಕ್ ಡೌನ್, ಸೀಲ್ ಡೌನ್ ಗಳಿಂದ ಮತ್ತಷ್ಟು ಸಂಕಷ್ಟವನ್ನು ಎದುರಿಸುತ್ತಿದ್ದೇವೆ ಮತ್ತು ವೈರಾಣುವಿನ ವಿರುದ್ಧದ ಹೋರಾಟದಲ್ಲಿ ತೊಡಗಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೋವಿಡ್ – 19 ರ ವಿರುದ್ದ ಅತ್ಯಂತ ಸಂಕಷ್ಟದಲ್ಲಿಯೂ ಎದುರಿಸಿ ಹೋರಾಡುವ ನಮಗೆ ಅಗತ್ಯ ರೋಗ ನಿರೋಧಕ ಶಕ್ತಿ ಗಳಿಸಿಕೊಳ್ಳಲು ಮತ್ತು ದೇಶದ ಹಾಗೂ ರಾಜ್ಯದ ಆರ್ಥಿಕ ಪುನಶ್ಚೇತನಕ್ಕೆ ಅಗತ್ಯವಾದ ನೆರವನ್ನು ನೀಡದೇ, ಜವಾಬ್ದಾರಿ ಹೀನವಾಗಿ ವರ್ತಿಸುತ್ತಿರುವುದು ತೀವ್ರ ಖಂಡನೀಯವಾಗಿದೆ. ಮಾತ್ರವಲ್ಲಾ, ದೇಶದ ಸಾರ್ವಜನಿಕ ಸಂಪನ್ಮೂಲ ಹಾಗೂ ಬಜೆಟ್ ಹಣವನ್ನು ನಮ್ಮಂತಹ ದುರ್ಬಲರಿಗೆ ಬಳಸದೇ ಭಾರಿ ಶ್ರೀಮಂತರಿಗೆ ಧಾರೆ ಎರೆದು ಕೊಡುವ ಕೊಳಕುತನ ಸಹಿಸದಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ನಮ್ಮ ವಿಮೋಚನೆಗೆ ಇರುವ ಹಾದಿಯನ್ನೆ ಸುಗ್ರೀವಾಜ್ಞೆಗಳ ಮೂಲಕ ರದ್ದು ಮಾಡುವ ಕ್ರೌರ್ಯವು ಅಕ್ಷಮ್ಯವಾಗಿದೆ.

ಕೂಡಲೇ, ಈಗ ಹಿಡಿದಿರುವ ಹಾದಿಯನ್ನು ಬದಲಾಯಿಸಿ, ಸಾರ್ವಜನಿಕ ಸಂಪನ್ಮೂಲಗಳನ್ನು ನಮ್ಮ ಏಳಿಗೆಗೆ ಬಳಸುವಂತೆ ಕ್ರಮ ವಹಿಸಲು ಒತ್ತಾಯಿಸುವೆವು.

ಹಕ್ಕೊತ್ತಾಯಗಳು:

1) ಸುಗ್ರೀವಾಜ್ಞೆ ವಾಪಾಸು ಪಡೆಯಿರಿ:

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೊರಡಿಸಿರುವ 2020 ರ, ಭೂ ಸುಧಾರಣೆ ತಿದ್ದುಪಡಿ ಕಾಯ್ದೆಗಳು, ಕೃಷಿ ಉತ್ಪನ್ನ ಮಾರುಕಟ್ಟೆ ತಿದ್ದುಪಡಿ ಕಾಯ್ದೆ, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ, ವಿದ್ಯುಚ್ಛಕ್ತಿ ತಿದ್ದುಪಡಿ ಮಸೂದೆ, ಬೀಜ ಕಾಯ್ದೆ, ಕಾರ್ಮಿಕ ಕಾಯ್ದೆಗಳ ಅಮಾನತು, ಕಾರ್ಪೋರೇಟ್ ಕಂಪನಿಗಳಿಗೆ ಮುಂಗಡ ವ್ಯಾಪಾರ ಹಾಗೂ ಗುತ್ತಿಗೆ ಬೇಸಾಯ ಮತ್ತು ನೇರ ಬೇಸಾಯಕ್ಕೆ ಅವಕಾಶ ನೀಡುವ, ದೇಶ ವಿರೋಧಿ ಹಾಗೂ ವ್ಯವಸಾಯ ಮತ್ತು ಉಳುಮೆದಾರರ, ದಲಿತರ, ಮಹಿಳೆಯರ ವಿರೋಧಿಯಾದ ಈ ಸುಗ್ರೀವಾಜ್ಞೆ ಮತ್ತು ಕಾಯ್ದೆಗಳನ್ನು ತಕ್ಷಣವೇ ವಾಪಾಸು ಪಡೆಯಬೇಕು.

2) ಜಮೀನು ಒದಗಿಸಿರಿ:

ದೇವದಾಸಿ ಮಹಿಳೆಯರು ಹಾಗೂ ಅವರ ಕುಟುಂಬದ ಎಲ್ಲಾ ವಯಸ್ಕ ಸದಸ್ಯರಿಗೆ ತಲಾ ಐದು ಎಕರೆ ನೀರಾವರಿ ಜಮೀನುಗಳನ್ನು ನೀಡಲು ಅಗತ್ಯ ಸಂಪನ್ಮೂಲ ಹಾಗೂ ಕಾನೂನಿನ ಕ್ರಮಗಳನ್ನು ಸಮಯದ ಮಿತಿಯೊಳಗೆ ಕೈಗೊಳ್ಳಬೇಕು.


3) ಕೋವಿಡ್ –19 ಎದುರಿಸಲು ವಿಶೇಷ ಪರಿಹಾರ ನೀಡಿ:

ಕೋವಿಡ್ –19 ನ್ನು ಪರಿಣಾಮಕಾರಿಯಾಗಿ ಎದುರಿಸಲು ಎಲ್ಲಾ ದೇವದಾಸಿ ಮಹಿಳೆಯರು ಹಾಗೂ ಆದಾಯ ತೆರಿಗೆ ವ್ಯಾಪ್ತಿಗೆ ಬಾರದ ಎಲ್ಲಾ ಕುಟುಂಬಗಳಿಗೆ ಕಳೆದ ಮಾರ್ಚ ತಿಂಗಳಿಂದಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಕೋವಿಡ್ – 18 ನಿವಾರಣೆಯ ದಿನಗಳು / ತಿಂಗಳವರೆಗೆ ಕನಿಷ್ಠ ಮಾಸಿಕ 7,500 ರೂಗಳ ಸಹಾಯಧನವನ್ನು ಒದಗಿಸಬೇಕು. ಅದೇ ರೀತಿ, ದೇವದಾಸಿ ಮಹಿಳೆಯರಿಗೆ ನೀಡಲಾಗುವ ಮಾಸಿಕ ಸಹಾಯಧನದ ಬಾಕಿಯನ್ನು ಕೂಡಲೇ ಬಿಡುಗಡೆ ಮಾಡಬೇಕು.

4) ಭ್ರಷ್ಟಾಚಾರ ತಡೆಯಿರಿ:

ಸಾಲ ಸೌಲಭ್ಯ ಹಾಗೂ ಭೂಮಿ ನೀಡಿಕೆ ಮುಂತಾದ ವಿಚಾರಗಳಲ್ಲಿ, ದೇವದಾಸಿ ಮಹಿಳೆಯರ ಪುನರ್ವಸತಿ ನಿಗಮದಲ್ಲಿ ನಡೆಯುವ ವ್ಯಾಪಕ ಭ್ರಷ್ಟಾಚಾರವನ್ನು ತನಿಖೆ ಮಾಡಿ ಕ್ರಮ ವಹಿಸಲು ತನಿಖಾ ಸಮಿತಿಯನ್ನು ನೇಮಿಸಬೇಕು. ಪಾರದರ್ಶಕವಾಗಿ ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಲು ಮತ್ತು ಅದನ್ನು ಪ್ರತಿ ವರ್ಷವೂ ಸಾರ್ವಜನಿಕವಾಗಿ ಪ್ರಕಟಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ದೇವದಾಸಿ ಪುನರ್ವಸತಿ ನಿಗಮದ ತಾಲೂಕಾ ಹಾಗೂ ಜಿಲ್ಲಾಧಿಕಾರಿಗಳನ್ನು ಕನಿಷ್ಠ ಎರಡು ವರ್ಷಗಳಿಗೊಮ್ಮೆ ಬೇರೆ, ಬೇರೆ ತಾಲೂಕು ಹಾಗೂ ಜಿಲ್ಲೆಗಳಿಗೆ ವರ್ಗಾವಣೆ ಮಾಡಬೇಕು.

ಯು. ಬಸವರಾಜ, *ಗೌರವಾಧ್ಯಕ್ಷರು*
ಟಿ.ವಿ. ರೇಣುಕಮ್ಮ, *ಅಧ್ಯಕ್ಷರು*
ಬಿ. ಮಾಳಮ್ಮ, *ಪ್ರಧಾನ ಕಾರ್ಯದರ್ಶಿಗಳು*



'ಹೊಸ ಭಾರತ'ದ ಕಥನ: ಭಾರತೀಯ ಸಂವಿಧಾನದ ವಿನಾಶ



ಮೋದಿ ಮತ್ತು ಬಿಜೆಪಿ/ಆರೆಸ್ಸೆಸ್‌ನ 'ಹೊಸ ಭಾರತ'ಕ್ಕೆ ಮೊದಲು ಮತ್ತು ಅತ್ಯಂತ ಮುಖ್ಯವಾಗಿ ಬೇಕಾಗಿರುವುದು ಭಾರತೀಯ ಸಂವಿಧಾನದಲ್ಲಿ ನಿರೂಪಿಸಿದ ಮತ್ತು ಮೂರ್ತಗೊಂಡಿರುವ ಹಳೇ ಭಾರತದ ನಾಶ. ಈ ಬಿಜೆಪಿ ಸರಕಾರದ ಕಳೆದ ಆರು ವರ್ಷಗಳಲ್ಲಿ ನಮ್ಮ ಸಂವಿಧಾನದ ಪ್ರತಿಯೊಂದು ಬುನಾದಿ ಸ್ಥಂಭಗಳನ್ನು–ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟತತ್ವ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು– ಶಿಥಿಲಗೊಳಿಸಿ ಸಂವಿಧಾನದ ಮೇಲೆ ಈ ಪ್ರಹಾರ ತೀವ್ರಗೊಂಡಿರುವುದನ್ನು ನೋಡಿದ್ದೇವೆ, ಕಳೆದ ಆರು ವರ್ಷಗಳಲ್ಲಿ ಭಾರತದ ಆರ್ಥಿಕ ಸ್ವಾವಲಂಬನೆಯನ್ನು ಮತ್ತು ಬುನಾದಿಗಳನ್ನು ಕೂಡ ಶಿಥಿಲಗೊಳಿಸಿದ್ದನ್ನು ಕೂಡ ನೋಡಿದ್ದೇವೆ. ಈ 'ಹೊಸ ಭಾರತ'ದ ಈ ಅಪಾ'ಯಗಳನ್ನು ಪ್ರತಿರೋಧಿಸಬೇಕಾಗಿದೆ, ಸೋಲಿಸಬೇಕಾಗಿದೆ. ಇದು ಈ ಸ್ವಾತಂತ್ರ್ಯ ದಿನದಂದು ಭಾರತೀಯ ಜನತೆ ಕೈಗೊಳ್ಳುವ ಯಾವುದೇ ಪ್ರತಿಜ್ಞೆಯ ಅರ್ಥ.



ಸೀತಾರಾಮ್ ಯೆಚುರಿ

ನಮ್ಮ 73ನೇ ಸ್ವಾತಂತ್ರ್ಯ ವಾರ್ಷಿಕೋತ್ಸವ ಸಮೀಪಿಸುತ್ತಿರುವಂತೆ ಭಾರತದ ಭವಿಷ್ಯದ ಬಗ್ಗೆ ಒಂದು ಹೊಸ ರಾಷ್ಟ್ರೀಯ ಕಥನವನ್ನು ನಮಗೆ ಬರೆದು ಕೊಡಲಾಗುತ್ತಿದೆ. 'ಹೊಸ ಭಾರತ'ದ ಈ ಕಥನದ ಪ್ರಕಾರ ಆಗಸ್ಟ್ 15, 1947 ಭಾರತ ಸ್ವಾತಂತ್ರ್ಯ ಗಳಿಸಿದ ದಿನ, ಆಗಸ್ಟ್ 5, 2019 ಸಂವಿಧಾನದ ಕಲಮು 370 ಮತ್ತು 35ಎ ರದ್ದುಗೊಳಿಸಿದ ದಿನ; ಮತ್ತು ಆಗಸ್ಟ್ 5, 2020, ಪ್ರಧಾನ ಮಂತ್ರಿಗಳು ಔಪಚಾರಿಕವಾಗಿ ರಾಮಮಂದಿರ ನಿರ್ಮಾಣವನ್ನು ಆರಂಭಿಸಿದ ದಿನ, ಭಾರತದ ನಿಜವಾದ ಸ್ವಾತಂತ್ರ್ಯದ ದಿನ.

ಈ ಹೊಸ ಕಥನ ಭಾರತದ ಸ್ವಾತಂತ್ರ್ಯ ಗಾಥೆಯ ಮತ್ತು ಭಾರತೀಯ ಸಂವಿಧಾನದ ಅಡಿಯಲ್ಲಿ ಮೂಡಿಬಂದ ಗಣತಂತ್ರದ ಸಂಪೂರ್ಣ ನಿರಾಕರಣೆಯಾಗಿದೆ, ಅದಕ್ಕೆ ತದ್ವಿರುದ್ಧವಾಗಿದೆ. ಇದು ಪ್ರಧಾನ ಮಂತ್ರಿ ಮೋದಿಯ ಭಾಷಣದ ಸಾರ. ಈ ಬಗ್ಗೆ ಮುಂದೆ ನೋಡೋಣ.

ಭಾರತೀಯ ಸಂವಿಧಾನ ನಮ್ಮ ಜನಗಳು ಮತ್ತು ನಮ್ಮ ದೇಶದ ಜೀವಾಳವಾದ ಶ್ರೀಮಂತ ಬಹುಳತೆ ಮತ್ತು ವೈವಿಧ್ಯತೆಯನ್ನು ಬಿಂಬಿಸುತ್ತದೆ. ಈ ವೈವಿಧ್ಯತೆಯಲ್ಲಿ ಸರ್ವಸಾಮಾನ್ಯತೆಯ ಎಳೆಗಳನ್ನು ಗಟ್ಟಿಗೊಳಿಸಿದಾಗ ಮತ್ತು ಈ ಬಹುಳತೆಯ ಪ್ರತಿಯೊಂದು ಆಯಾಮವನ್ನು–ಭಾಷಿಕ, ಜನಾಂಗೀಯ, ಧಾರ್ಮಿಕ ಇತ್ಯಾದಿಗಳನ್ನು–ಗೌರವಿಸಿದಾಗ ಹಾಗೂ ಸಮಾನತೆಯ ಆಧಾರದಲ್ಲಿ ಕಂಡಾಗ ಮಾತ್ರವೇ ಭಾರತದ ಐಕ್ಯತೆಯನ್ನು ಕ್ರೋಡೀಕರಿಸಲು ಸಾಧ್ಯ. ಈ ವೈವಿಧ್ಯತೆಯ ಮೇಲೆ, ಯಾವುದೇ ತೆರನ ಏಕರೂಪತೆಯನ್ನು ಹೇರುವ ಪ್ರಯತ್ನ ಒಂದು ಸಾಮಾಜಿಕ ಅಂತಃಸ್ಫೋಟಕ್ಕೆ ದಾರಿ ಮಾಡಿಕೊಡುತ್ತದಷ್ಟೇ. ಆರೆಸ್ಸೆಸ್ ಮತ್ತು ಅದರ ರಾಜಕೀಯ ಅಂಗವಾದ ಬಿಜೆಪಿಯು ಸರಕಾರವನ್ನು ಮತ್ತು ಪ್ರಭುತ್ವವನ್ನು ಬಳಸಿಕೊಂಡು ಹೇರಬಯಸುವ ಇಂತಹ ಒಂದು ಧಾರ್ಮಿಕ ಏಕರೂಪತೆ, ಅಗತ್ಯವಾಗಿಯೇ ಪ್ರಜಾಪ್ರಭುತ್ವ, ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಹೊರಗೆಸೆದೇ ಬರಲು ಸಾಧ್ಯ. ಇದು ಒಂದು ಸರ್ವಾಧಿಕಾರಶಾಹಿ/ನಿರಂಕುಶಾಧಿಕಾರದ ಅಡಿಯಲ್ಲಿ, ಅದು ತನ್ನ 'ಆಂತರಿಕ ಶತ್ರುಗಳು' ಎಂದು ನಿರೂಪಿಸುವವರ ವಿರುದ್ಧ ಫ್ಯಾಸಿಸ್ಟ್ ತೆರನ ವಿಧಾನಗಳನ್ನು ಬಳಸಿಕೊಂಡು ಬರುತ್ತದೆ.

ಇಂತಹ ಒಂದು 'ಹೊಸ ಭಾರತ'ದ ಸ್ಥಾಪನೆ ಮೋದಿ ಸರಕಾರದ ಉತ್ಪನ್ನವೇನೂ ಅಲ್ಲ, ಅದಕ್ಕೆ ಸುಮಾರು ಒಂದು ಶತಮಾನದ ಚರಿತ್ರೆಯಿದೆ– 1925ರಲ್ಲಿ ಆರೆಸ್ಸೆಸ್‌ನ ಸ್ಥಾಪನೆಯಿಂದ ಆರಂಭಿಸಿ, ಹಿಂದುತ್ವದ ಬಗ್ಗೆ ಸಾವರ್ಕರ್ ಸಿದ್ಧಾಂತಗಳು ಮತ್ತು 1939ರಲ್ಲಿ ಗೋಲ್ವಾಲ್ಕರ್‌ರವರ ಒಂದು ಫ್ಯಾಸಿಸ್ಟ್ ತೆರನ 'ಹಿಂದೂರಾಷ್ಟ್ರ'ವನ್ನು ಸಾಧಿಸುವ ಸೈದ್ಧಾಂತಿಕ ಹಾಗೂ ಸಂಘಟನಾ ರಚನೆಯ ವರೆಗಿನ ಚರಿತ್ರೆ.

ಭಾರತೀಯ ಜನತೆ ಈ ಕಣ್ಣೋಟವನ್ನು ಮತ್ತೆ-ಮತ್ತೆ ತಿರಸ್ಕರಿಸಿದ್ದಾರೆ, ಸ್ವಾತಂತ್ರ್ಯ ಆಂದೋಲನ ಇದನ್ನು ಸ್ವತಂತ್ರ ಭಾರತ ಒಂದು ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರ ಎಂದು ಸಾರುವ ಮೂಲಕ ದೃಢವಾಗಿ ತಿರಸ್ಕರಿಸಿದೆ. ಇದು 1947ರಲ್ಲಿ ದೇಶದ ವಿಭಜನೆ ಮತ್ತು ಪಾಕಿಸ್ತಾನದ ರಚನೆಯೊಂದಿಗೆ ಈಡೇರಿದ ಇಸ್ಲಾಮೀ ಗಣತಂತ್ರದ ಕಣ್ಣೋಟಕ್ಕಿಂತಲೂ ಸಂಪೂರ್ಣ ಭಿನ್ನವಾಗಿತ್ತು. ಆದರೂ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪದ ಬದಲು ಆರೆಸ್ಸೆಸ್ ಕಣ್ಣೋಟವನ್ನು ಸ್ಥಾಪಿಸುವ ಪ್ರಯತ್ನ ಈ ಎಲ್ಲ ದಶಕಗಳಲ್ಲೂ ಮುಂದುವರೆದು ಈಗಿನ ಸ್ಥಿತಿಯನ್ನು ತಲುಪಿದೆ.

ಭಾರತೀಯ ಸಂವಿಧಾನದ ಮೇಲೆ ಪ್ರಹಾರಗಳು

ಈ 'ಹೊಸ ಭಾರತ'ಕ್ಕೆ ಮೊದಲು ಮತ್ತು ಅತ್ಯಂತ ಮುಖ್ಯವಾಗಿ ಬೇಕಾಗಿರುವುದು ಭಾರತೀಯ ಸಂವಿಧಾನದಲ್ಲಿ ನಿರೂಪಿಸಿದ ಮತ್ತು ಮೂರ್ತಗೊಂಡಿರುವ ಹಳೇ ಭಾರತದ ನಾಶ. ಮೋದಿ ಪ್ರಧಾನ ಮಂತ್ರಿಯಾಗಿರುವ ಈ ಬಿಜೆಪಿ ಸರಕಾರದ ಕಳೆದ ಆರು ವರ್ಷಗಳಲ್ಲಿ ನಮ್ಮ ಸಂವಿಧಾನದ ಪ್ರತಿಯೊಂದು ಬುನಾದಿ ಸ್ಥಂಭಗಳನ್ನು–ಜಾತ್ಯತೀತ ಪ್ರಜಾಪ್ರಭುತ್ವ, ಒಕ್ಕೂಟತತ್ವ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸ್ವಾವಲಂಬನೆಯನ್ನು– ಶಿಥಿಲಗೊಳಿಸಿ ಸಂವಿಧಾನದ ಮೇಲೆ ಈ ಪ್ರಹಾರ ತೀವ್ರಗೊಂಡಿರುವುದನ್ನು ನೋಡಿದ್ದೇವೆ.

ಸಂವಿಧಾನದ ಮೇಲೆ ಈ ಪ್ರಹಾರದೊಂದಿಗೆ ಅಗತ್ಯವಾಗಿಯೇ ಎಲ್ಲ ಸಂವಿಧಾನಿಕ ಸಂಸ್ಥೆಗಳನ್ನು, ಪ್ರಾಧಿಕಾರಗಳನ್ನು ಶಿಥಿಲಗೊಳಿಸಲಾಗಿದೆ, ಅವನ್ನು ನಿಷ್ಪ್ರಯೋಜಕಗೊಳಿಸಲಾಗಿದೆ. ಇವು ಸಂವಿಧಾನದ ಕಾರ್ಯನಿರ್ವಹಣೆ ಮತ್ತು ಜನಗಳಿಗೆ ಸಂವಿಧಾನಿಕ ಖಾತ್ರಿಗಳನ್ನು ಕಾಯ್ದುಕೊಳ್ಳುವುದಕ್ಕಾಗಿ ರೂಪಿಸಿದ್ದ ತಡೆ ಸಾಧನಗಳು. ನಮ್ಮ ಗಣತಂತ್ರದ ಮೂರು ಅಂಗಗಳನ್ನು ಸಂವಿಧಾನ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಎಂದು ನಿರೂಪಿಸಿದೆ. ಇವುಗಳಲ್ಲಿ ಪ್ರತಿಯೊಂದೂ ತಮ್ಮ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಪ್ರತ್ಯೇಕವಾಗಿವೆ, ಆದರೆ ಪರಸ್ಪರ ಪೂರಕವಾಗಿವೆ.

ಶಾಸಕಾಂಗ

ಶಾಸಕಾಂಗ, ಅಂದರೆ ಸಂಸತ್ತನ್ನು ತೀವ್ರವಾಗಿ ಶಿಥಿಲಗೊಳಿಸಿ, ಅದನ್ನು 'ಬಹುಮತದ ದಬ್ಬಾಳಿಕೆ'ಯ ಮಟ್ಟಕ್ಕೆ ಇಳಿಸಲಾಗಿದೆ. ಸಂಸದೀಯ ವಿಧಿ–ವಿಧಾನಗಳು, ಸಮಿತಿಗಳ ನಿರ್ವಹಣೆಯ ವಿಧಾನಗಳು ಮತ್ತು ಕಲಾಪಗಳು ಎಲ್ಲವನ್ನೂ ಶಿಥಿಲಗೊಳಿಸಲಾಗಿದೆ.


ಜನತೆಯ ಸಾರ್ವಭೌಮತ್ವವನ್ನು ಜನತೆಗೆ ಜವಾಬುದಾರರಾದ ಶಾಸಕರು ಚಲಾಯಿಸುತ್ತಾರೆ ಮತ್ತು ಸರಕಾರ ಈ ಶಾಸಕಾಂಗಕ್ಕೆ ಜವಾಬುದಾರವಾಗಿರುತ್ತದೆ ಎಂಬುದು ಭಾರತೀಯ ಸಂವಿಧಾನದ ಕೇಂದ್ರ ಅಂಶ, 'ನಾವು, ಜನತೆ' ನಮ್ಮ ಸಾರ್ವಭೌಮತ್ವವನ್ನು ಹೀಗೆ ಚಲಾಯಿಸುತ್ತೇವೆ. ಇದನ್ನು ಈಗ ಶಿಥಿಲಗೊಳಿಸಲಾಗುತ್ತಿದೆ ಎಂಬರ್ಥದಲ್ಲಿ ಇದು ಅಪಾಯಕಾರಿ. ಸಂಸತ್ತು ಕ್ರಿಯಾಹೀನವಾದರೆ, ಜನತೆಗೆ ಉತ್ತರದಾಯಿ ಯಾಗುವುದನ್ನು ಕೈಬಿಡಲಾಗುತ್ತದೆ ಮತ್ತು ಸರಕಾರ ಶಾಸಕಾಂಗಕ್ಕೆ ಉತ್ತರದಾಯಿಯಾಗದೆ ತಪ್ಪಿಸಿಕೊಳ್ಳುತ್ತದೆ.

ನ್ಯಾಯಾಂಗ


ಒಂದು ಸ್ವತಂತ್ರ ನ್ಯಾಯಾಂಗವನ್ನು ಸ್ಥಾಪಿಸಿರುವುದು ಕಾರ್ಯಾಂಗದ ಕ್ರಿಯೆಗಳ ಮೂಲಕ ಸಂವಿಧಾನಿಕ ಅಂಶಗಳ ಉಲ್ಲಂಘನೆಯಾಗುವುದಿಲ್ಲ ಎಂದು ಖಾತ್ರಿಪಡಿಸಲು ಮತ್ತು ಸಂವಿಧಾನ ಜನತೆಗೆ ನೀಡಿರುವ ಮೂಲಭೂತ ಹಕ್ಕುಗಳು ಮತ್ತು ಖಾತ್ರಿಗಳನ್ನು ಎತ್ತಿ ಹಿಡಿಯಲು. ಕಳೆದ ಆರು ವರ್ಷಗಳಲ್ಲಿ ಆತಂಕ ಉಂಟುಮಾಡುವ ರೀತಿಯಲ್ಲಿ ಗಮನಕ್ಕೆ ಬಂದಿರುವಂತೆ, ನ್ಯಾಯಾಂಗದ ನಿಷ್ಪಕ್ಷಪಾತತೆ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆಯಾದರೆ, ನ್ಯಾಯಾಂಗದ ಮೇಲ್ವಿಚಾರಣೆ, ಅದರ ಜತೆಗೆ ಜನತೆಯ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಯೂ ಅಸ್ತಿತ್ವವನ್ನು ಕಳಕೊಳ್ಳುತ್ತವೆ.

ಚುನಾವಣಾ ಆಯೋಗ

ಭಾರತದ ಚುನಾವಣಾ ಅಯೋಗದ ಸ್ವಾತಂತ್ರ್ಯ ಮತ್ತು ನಿಷ್ಪಕ್ಷಪಾತತೆ ನಮ್ಮ ಪ್ರಜಾಪ್ರಭುತ್ವದ ಆರೋಗ್ಯವನ್ನು ಕಾಪಾಡುವ ಮೂಲಾಧಾರ. ಇದನ್ನು ಅದು ಎಲ್ಲ ಸ್ಪರ್ಧಿಗಳಿಗೆ ಸಮಾನ →→



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ



→→ ವ್ಯಂಗ್ಯಚಿತ್ರ: ಶೇಖರ್ ಗುರೇರ

ಅವಕಾಶಗಳನ್ನು ಒದಗಿಸು ಒಂದು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳನ್ನು ನಡೆಸುವ ಮೂಲಕ ಮಾಡುತ್ತದೆ. ಇದಕ್ಕೆ ಧಕ್ಕೆಯಾದರೆ, ಆಗ ಸರಕಾರಗಳು ಜನತೆಯ ತೀರ್ಪು ಅಥವ ಜನಾದೇಶವಾಗಿ ಉಳಿಯುವುದಿಲ್ಲ.

ಸಿಬಿಐ, ಜಾರಿ ನಿರ್ದೇಶನಾಲಯ, ವಿಚಕ್ಷಣಾ ಆಯೋಗ ಮುಂತಾದ ಸಂವಿಧಾನಿಕ ಪ್ರಾಧಿಕಾರಗಳನ್ನು ರೂಪಿಸಿರುವುದು ಕ್ರಿಮಿನಲ್ ಮತ್ತು ಸಿವಿಲ್ ಅಪರಾಧಗಳ ಸರಿಯಾದ ತನಿಖೆಯಾಗಬೇಕು ಮತ್ತು ತಪ್ಪಿತಸ್ಥರನ್ನು ಸಂವಿಧಾನ ಸ್ಥಾಪಿಸಿರುವ ನಾಡಿನ ಕಾನೂನಿನ ಅಡಿಯಲ್ಲಿ ಶಿಕ್ಷಿಸಬೇಕು ಎಂದು. ಇವುಗಳಿಗೆ ಧಕ್ಕೆಯಾದರೆ, ಇವು ಸರಕಾರದ ರಾಜಕೀಯ ಅಂಗಗಳಂತೆ ಕೆಲಸ ಮಾಡಲಾರಂಭಿಸಿದರೆ, ಆಗ ಆಳುವ ಪಕ್ಷ ಮತ್ತು ಅದರ ಸದಸ್ಯರ ಎಲ್ಲ ಅಪರಾಧಗಳು ಮತ್ತು ಭ್ರಷ್ಟಾಚಾರಗಳು ರಕ್ಷಣೆ ಪಡೆಯುತ್ತವೆ, ಅವುಗಳ ವಿರುದ್ಧ ಯಾವ ಕ್ರಮವೂ ಇರುವುದಿಲ್ಲ, ಅದೇ ವೇಳೆಯಲ್ಲಿ ವಿರೋಧಿಗಳಿಗೆ ಕಿರುಕುಳ ಕೊಡಲಾಗುತ್ತದೆ, ಅವರನ್ನು ಬೆದರಿಸಲಾಗುತ್ತದೆ ಮತ್ತು ಅವರ ಬಾಯಿ ಮುಚ್ಚಿಸಲಾಗುತ್ತದೆ.

ಸಂವಿಧಾನ ಮತ್ತು ಅದರ ಸಂಸ್ಥೆಗಳ ಇಂತಹ ಒಂದು ಸರ್ವಾಂಗೀಣ ಸವೆತ ವ್ಯಾಪಕವಾದ ಭ್ರಷ್ಟಾಚಾರ ಮತ್ತು 'ಬಂಟ ಬಂಡವಾಳಶಾಹಿ'(ಕ್ರೋನಿ ಕ್ಯಾಪಿಟಲಿಸಂ)ಗೆ ದಾರಿ ಮಾಡಿಕೊಡುತ್ತದೆ. ಇದು ಆಳುವ ಪಕ್ಷಕ್ಕೆ ಬೃಹತ್ ಪ್ರಮಾಣದಲ್ಲಿ ಹಣಬಲದ ಶೇಖರಣೆಯ ದಾರಿಯಾಗುತ್ತದೆ. ಇದು ಒಂದೇ ಹೊಡೆತದಲ್ಲಿ ಪ್ರಜಾಪ್ರಭುತ್ವದ ಗುಣಮಟ್ಟವನ್ನು ಶಿಥಿಲಗೊಳಿಸುತ್ತದೆ. ಇದು ಯಾವುದೇ ಚುನವಣೆಯಲ್ಲಿ ಒಂದು ಸರಕಾರಕ್ಕೆ ಸಿಕ್ಕ ಜನಾದೇಶವನ್ನು ಕುದುರೆ ವ್ಯಾಪಾರದ ಮೂಲಕ ಉಲ್ಲಂಘಿಸುವ ಪರಿಸ್ಥಿತಿಗಳನ್ನು ನಿರ್ಮಿಸುತ್ತದೆ. ಈ ಮೂಲಕ ಈಗ ಕೇಳಬರುವ 'ಬಿಜೆಪಿ ಚುನಾವಣೆ ಸೋಲಬಹುದು, ಆದರೂ ಸರಕಾರ ರಚನೆ ಅದರದ್ದೇ' ಎಂಬ ರಾಗಾಲಾಪನೆ ನಡೆಯುವಂತಾಗುತ್ತದೆ.

ವಿವೇಚನೆಯ ಮೇಲೆ ಪ್ರಹಾರ

ಇಂತಹ 'ಹೊಸ ಭಾರತ'ದ ಒಂದು ಕಥನ ಯಶಸ್ವಿಯಾಗಬೇಕಾದರೆ ಭಾರತದ ಚರಿತ್ರೆಯನ್ನು, ಅದು ಈ ಕಥನದ ಸೈದ್ಧಾಂತಿಕ ಹೂರಣವನ್ನು ಪೋಷಿಸುವಂತೆ ಮಾಡಲು ಹೊಸದಾಗಿ ಬರೆಯಬೇಕಾಗುತ್ತದೆ. ಇದಕ್ಕನುಗುಣವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಯನ್ನು, ಅದು ವಿಚಾರ ಮತ್ತು ಆಚರಣೆಯಲ್ಲಿ ವಿವೇಚನಾಶೂನ್ಯತೆಯನ್ನು ಪ್ರೋತ್ಸಾಹಿಸುವಂತೆ, ವೈಜ್ಞಾನಿಕ ಮನೋಭಾವವನ್ನು ಪೋಷಿಸುವ ಬದಲು ಕಂದಾಚಾರ/ ಪುರಾಣ/ಕುರುಡ ನಂಬಿಕೆಯನ್ನು ಪ್ರೋತ್ಸಾಹಿಸುವಂತೆ ಪುನರ್ರೂಪಿಸಬೇಕಾಗುತ್ತದೆ. ಸಾಂಸ್ಕೃತಿಕ ರಂಗದಲ್ಲಿ ಸಂಸ್ಥೆಗಳು ಮತ್ತು ಅಕಾಡೆಮಿಗಳ ಸ್ವರೂಪವನ್ನು, ಅವು ಭಾರತೀಯ ಸಂಸ್ಕೃತಿಯ ಸಮ್ಮಿಶ್ರ ವಿಕಾಸವನ್ನು ಮರೆಮಾಚುವಂತೆ ಬದಲಿಸಬೇಕು, ಇದಕ್ಕಾಗಿ ಒಂದು ಏಕರೂಪತೆಯನ್ನು ಮತ್ತು ಏಕ-ಸಂಸ್ಕೃತಿ ಕಥನವನ್ನು ಹೇರಲಾಗುತ್ತದೆ. ಇದು ಭಾರತದ ವೈವಿಧ್ಯಮಯ ಮತ್ತು ಬಹುತ್ವದ ಸ್ವರೂಪದಿಂದ ವಿಕಾಸಗೊಂಡ ಸಂಸ್ಕೃತಿಗೆ ಸಂಪೂರ್ಣ ವಿರುದ್ಧವಾಗಿದೆ. ಇತಿಹಾಸದ ಪುನರ್ಲೇಖನ ಮತ್ತು ಪುನರ್ರಚನೆ ಮಾಡಬೇಕಾಗುತ್ತದೆ. ಭಾರತದ ಸಮ್ಮಿಶ್ರ ಇತಿಹಾಸದ ಅಧ್ಯಯನದ ಸ್ಥಾನದಲ್ಲಿ ಭಾರತೀಯ ಪೌರಾಣಿಕ ಗ್ರಂಥಗಳು ಬರುತ್ತವೆ. ಪುರಾತತ್ವಶಾಸ್ತ್ರ ನಮ್ಮ ಇತಿಹಾಸದ ಒಂದು ವೈಜ್ಞಾನಿಕ ಅಧ್ಯಯನವನ್ನು ನಡೆಸುವ ಬದಲಾಗಿ ಹಿಂದುತ್ವದ ಅವೈಜ್ಞಾನಿಕ ಹೇಳಿಕೆಗಳನ್ನು , ಚರಿತ್ರೆಯನ್ನು ಸಾಬೀತು ಮಾಡಲು ಸಾಕ್ಷ್ಯಗಳನ್ನು ಉತ್ಪಾದಿಸಬೇಕಾಗುತ್ತದೆ.

ಹೊಸ ಸಾಂಕೇತಿಕತೆ

ಇಂತಹ 'ಹೊಸ ಭಾರತ'ದ ಯಶಸ್ಸನ್ನು ನಮ್ಮ ಸಮಾಜದಲ್ಲಿ ಒಂದು ಹೊಸ ಸಾಂಕೇತಿಕತೆಯನ್ನು ನಿರ್ಮಿಸುವ ಮೂಲಕ ಮಾತ್ರವೇ ಕಾಯ್ದುಕೊಳ್ಳಲು ಸಾಧ್ಯ. ಇದಕ್ಕೆ ನೆಹರೂರವರ 'ಆಧುನಿಕ ಭಾರತದ ಮಂದಿರ'ಗಳಿಗೆ ಪ್ರತಿಯಾಗಿ ಮಹಾಸೋಂಕಿನ ಸಮಯದಲ್ಲಿ ಭಾರೀ ವೆಚ್ಚದಲ್ಲಿ, ಹಿಟ್ಲರನ ಕುಖ್ಯಾತ ಬರ್ಲಿನ್ ಗುಮ್ಮಟವನ್ನು ಹೋಲುವಂತಹ ಸೆಂಟ್ರಲ್ ವಿಸ್ತಾ, ಭಾರೀ ಪ್ರತಿಮೆಗಳು, ಬುಲೆಟ್ ರೈಲುಗಳು ಮತ್ತು ಇಂತಹುದೇ ಭ್ರಾಮಕ ಉತ್ಪನ್ನಗಳು ಬರುತ್ತವೆ.

ಅಲ್ಲದೆ, ಈ 'ಹೊಸ ಭಾರತ'ದ ಕಥನ ಜನಗಳ ಮೇಲೆ ಪ್ರಜ್ಞೆಯ ಮೇಲೆ ಸುಳ್ಳು ಸುದ್ದಿಗಳನ್ನು ಸುರಿಯುವ, ಹುಸಿ ಕಥನಗಳನ್ನು ಹೆಣೆಯುವ ಮತ್ತು ಭಾರತೀಯ ಜನತೆಯನ್ನು ಪೀಡಿಸುತ್ತಿರುವ ನಿಜವಾದ ಸಮಸ್ಯೆಗಳು ಮತ್ತು ಅದು ಉಂಟುಮಾಡುವ ಸಂಕಟಗಳನ್ನು ಹಿನ್ನೆಲೆಗೆ ತಳ್ಳುವಲ್ಲಿ ಶಾಮೀಲಾಗುವ ಒಂದು ಮಾಧ್ಯಮವಿಲ್ಲದೆ ಬಹಳ ದಿನ ಉಳಿಯಲಾರದು.

ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಪ್ರಚಾರಗಳು ಮತ್ತು ಹಿಂಸಾಚಾರದ ಮೂಲಕ ಸಾಮಾಜಿಕ ಉದ್ವಿಗ್ನತೆಗಳನ್ನು ಹರಡಿಸುವುದು ಈ 'ಹೊಸ ಭಾರತ'ದ ಭಾಗವಾಗಿ ಬರಬೇಕು, ಇಲ್ಲವಾದರೆ, ಕೋಮುವಾದಿ ಹಿಂದುತ್ವ ವೋಟ್ ಬ್ಯಾಂಕನ್ನು ತನ್ನ ಜೀವನಾಡಿಯಾಗಿ ಕ್ರೋಡೀಕರಿಸಲು ಅದಕ್ಕೆ ಸಾಧ್ಯವಾಗದು.

ಆಗಸ್ಟ್ 5ರ ಅಯೋಧ್ಯೆ ಭಾಷಣ

ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣದ ಕೆಲಸವನ್ನು ಆರಂಭಿಸಿದ ಮೋದಿ ಭಾಷಣದಲ್ಲಿ, ಒಂದರ್ಥದಲ್ಲಿ, 'ಹೊಸ ಭಾರತ'ದ ಈ ಕಣ್ಣೋಟ ಮೂರ್ತೀಭವಿಸಿತ್ತು.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ವಾರ್ತಾಭಾರತಿ

ಸುಪ್ರಿಂ ಕೋರ್ಟ್ ಅಯೋಧ್ಯಾ ವಿವಾದದ ಮೇಲೆ ಒಂದು ತೀರ್ಪು ನೀಡಿತು, ಆದರೆ ನ್ಯಾಯವನ್ನಲ್ಲ. ಅದು ಬಾಬ್ರಿ ಮಸೀದಿ ಧ್ವಂಸ ಒಂದು ಕಾನೂನಿನ ಕ್ರಿಮಿನಲ್ ಉಲ್ಲಂಘನೆ ಎಂದು ಹೇಳಿತು, ಅದರಲ್ಲಿ ತೊಡಗಿದ್ದವರನ್ನು ತ್ವರಿತವಾಗಿ ಶಿಕ್ಷಿಸಬೇಕು ಎಂದಿತು. ವಿವಾದಿತ ಸ್ಥಳದಲ್ಲಿ ಮಂದಿರ ನಿರ್ಮಾಣದ ಕೆಲಸವನ್ನು ಮಸೀದಿಯ ಧ್ವಂಸದಲ್ಲಿ ತೊಡಗಿದ್ದವರಿಗೇ ಒಪ್ಪಿಸಿತು. ಆದರೆ ಈ ನಿರ್ಮಾಣವನ್ನು ಒಂದು ಟ್ರಸ್ಟ್ ಕೈಗೊಳ್ಳಬೇಕಿತ್ತು.

ಪ್ರಧಾನ ಮಂತ್ರಿಗಳು ಮತ್ತು ಸರಕಾರ ಈ ಕೆಲಸವನ್ನು ಭಂಡತನದಿಂದ ತಾವೇ ವಹಿಸಿಕೊಂಡರು, ಮಂದಿರ ನಿರ್ಮಾಣದ ಆರಂಭವನ್ನು ಒಂದು ಅಧಿಕೃತ ಸರಕಾರೀ ಸಮಾರಂಭವಾಗಿ ಪರಿವರ್ತಿಸಿದರು. ಜಾತ್ಯತೀತ ಪ್ರಜಾಸತ್ತಾತ್ಮಕ ಸಂವಿಧಾನದ ಅಡಿಯಲ್ಲಿ ಪ್ರತಿಜ್ಞೆ ಕೈಗೊಂಡು ಅಧಿಕಾರದಲ್ಲಿರುವ ಪ್ರಧಾನ ಮಂತ್ರಿ ಅದನ್ನೇ ಉಲ್ಲಂಘಿಸಲು ಮುಂದಾದರು. . ಪ್ರತಿಯೊಬ್ಬ ನಾಗರಿಕರಿಗೆ ಸಂವಿಧಾನ ಧರ್ಮದ ಆಯ್ಕೆಯ ಖಾತ್ರಿಯನ್ನು ಕೊಟ್ಟಿದೆ. ಸರಕಾರ ಅದನ್ನು ರಕ್ಷಿಸಬೇಕು ಮತ್ತು ಖಾತ್ರಿಪಡಿಸಬೇಕು. ಸರಕಾರಕ್ಕೆ ತನ್ನದೇ ಆದ ಧರ್ಮ ಎಂಬುದಿಲ್ಲ. ಈ ಅನುಲ್ಲಂಘನೀಯ ಸಂವಿಧಾನಿಕ ಪ್ರತಿಪಾದನೆಯನ್ನು ಸ್ವತಃ ಪ್ರಧಾನ ಮಂತ್ರಿಗಳೇ ಗಾಳಿಗೆ ತೂರಿದರು. ಈ ಬಹಿರಂಗ ಉಲ್ಲಂಘನೆ 'ಹೊಸ ಭಾರತ'ವನ್ನು ಆರೆಸ್ಸೆಸ್‌ನ ರಾಜಕೀಯ ಯೋಜನೆಯ ಲಾಂಛನವಾಗಿಸುವ ಸಂಕೇತವಾಗಿದೆ.

ಅವರ ಭಾಷಣದ ಅತ್ಯಂತ ಕೆಟ್ಟ ಅಂಶವೆಂದರೆ ಈ ಮಂದಿರ ನಿರ್ಮಾಣದ ಆಂದೋಲನವನ್ನು ರಾಷ್ಟ್ರೀಯ ಆಂದೋಲನದೊಂದಿಗೆ ಹೋಲಿಸಿದ್ದು. "ನಮ್ಮ ದೇಶದಲ್ಲಿ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥ ತ್ಯಾಗವಿಲ್ಲದ ಸ್ಥಳವೇ ಇಲ್ಲ. ಆಗಸ್ಟ್ 15 ಲಕ್ಷಾಂತರ ಜನಗಳ ತ್ಯಾಗಗಳು ಮತ್ತು ಸ್ವಾತಂತ್ರ್ಯದ ಆಳವಾದ ಹಂಬಲದ ಸಾಕಾರ.

ಅದೇ ರೀತಿಯಲ್ಲಿ, ರಾಮಮಂದಿರದ ನಿರ್ಮಾಣಕ್ಕಾಗಿ ಹಲವು ಪೀಳಿಗೆಗಳವರು ಹಲವು ಶತಮಾನಗಳ ಕಾಲ ನಿಸ್ವಾರ್ಥ ತ್ಯಾಗಗಳನ್ನು ಮಾಡಿದ್ದಾರೆ"ಎಂದು ಅವರು ಹೇಳಿದರು.

ಸ್ವಾತಂತ್ರ್ಯ ಹೋರಾಟ ಎಲ್ಲರನ್ನೂ ಒಳಗೊಳ್ಳುವ ಒಂದು ಭಾರತದ ಕಣ್ಣೋಟವನ್ನು ಹೊಂದಿತ್ತು, ತದ್ವಿರುದ್ಧವಾಗಿ, ಆರೆಸ್ಸೆಸ್‌ನದ್ದು ಹಲವರನ್ನು ಹೊರಗಿಡುವ ಒಂದು ಭಾರತದ ಕಣ್ಣೋಟ. ಈ ಎಲ್ಲರನ್ನೂ ಒಳಗೊಳ್ಳುವ ಕಣ್ಣೋಟ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾನ್ ಪ್ರಮಾಣದಲ್ಲಿ ಸಾಮೂಹಿಕ ಅಣಿನೆರಿಕೆಗೆ ಸ್ಫೂರ್ತಿ ನೀಡಿತು. ಅದರ ಅಂತಿಮ ಫಲಶ್ರುತಿ ಆಗಸ್ಟ್ 15, 1947ರ ಸ್ವಾತಂತ್ರ್ಯ. ಹಲವರನ್ನು ಹೊರಗಿಡುವ 'ಹೊಸ ಭಾರತ'ದ ಪ್ರಸಕ್ತ ಕಥನ ಭಾರತದ ಸ್ವಾತಂತ್ರ್ಯ ಹೋರಾಟ ಪ್ರತಿನಿಧಿಸಿದ ಪ್ರತಿಯೊಂದು ತತ್ವದ ನೇರ ನಿರಾಕರಣೆಯಾಗಿದೆ.

ಮಹತ್ವದ ಸಂಗತಿಯೆಂದರೆ, ಆರೆಸ್ಸೆಸ್ ಎಂದೂ ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿರಲಿಲ್ಲ. ಆರೆಸ್ಸೆಸ್‌ನ ಬಗ್ಗೆ ಸಹಾನುಭೂತಿಪರ ವ್ಯಾಖ್ಯಾನಗಳು (ವಾಲ್ಟರ್ ಕೆ ಆಂಡರ್ಸನ್ ಮತ್ತು ಶ್ರೀಧರ ದಾಮ್ಲೆಯವರ 'ದಿ ಬ್ರದರ್‌ಹುಡ್ ಇನ್ ಸ್ಯಾಫ್ರನ್' ಇವುಗಳಲ್ಲೊಂದು) ಕೂಡ ಸ್ವಾತಂತ್ರ್ಯ ಆಂದೋಲನದಲ್ಲಿ ಆರೆಸ್ಸೆಸ್‌ನ ಸಂಪೂರ್ಣ ಗೈರು ಹಾಜರಿ ಎಂದೇ ಹೇಳಬಹುದಾದನ್ನು, ಮತ್ತು ಅದರಿಂದಾಗಿ ಅದು ಬ್ರಿಟಿಶರಿಂದ ಗಳಿಸಿದ ರಿಯಾಯ್ತಿಗಳನ್ನು ವಿವರವಾಗಿ ಕೊಟ್ಟಿವೆ. ಆರೆಸ್ಸೆಸ್‌ನ ಸಿದ್ಧಾಂತಿ, ದಿವಂಗತ ನಾನಾಜಿ ದೇಶಮುಖ್ ಕೂಡ "ಆರೆಸ್ಸೆಸ್ ಒಂದು ಸಂಘಟನೆಯಾಗಿ ವಿಮೋಚನಾ ಹೋರಾಟದಲ್ಲಿ ಪಾತ್ರ ವಹಿಸಲಿಲ್ಲ ಏಕೆ?" ಎಂಬ ಪ್ರಶ್ನೆಯನ್ನು ಎತ್ತಿದರು.

1942ರ ಕ್ವಿಟ್ ಇಂಡಿಯಾ ಆಂದೋಲನದ ವೇಳೆಯಲ್ಲಿ ಬಾಂಬೆ ಗೃಹ ಇಲಾಖೆ "ಸಂಘ ಕಟ್ಟುನಿಟ್ಟಾಗಿ ಕಾನೂನಿನ ಒಳಗೇ ತನ್ನನ್ನು ಇರಿಸಿಕೊಂಡಿತು, ನಿರ್ದಿಷ್ಟವಾಗಿ, ಆಗಸ್ಟ್ 1942ರಲ್ಲಿ ಭುಗಿಲೆದ್ದ ಗಲಭೆಗಳಲ್ಲಿ ಭಾಗವಹಿಸದೆ ದೂರವೇ ಉಳಿಯಿತು" ಎಂದು ದಾಖಲಿಸಿದೆ.

ಈ ಸತ್ಯಗಳನ್ನು ಮರೆಮಾಚಲು, ಆರೆಸೆಸ್/ಬಿಜೆಪಿ ಕಮ್ಯುನಿಸ್ಟರ ವಿರುದ್ಧ, ಅವರು 1942ರ ಕ್ವಿಟ್ ಇಂಡಿಯಾ ಚಳುವಳಿಗೆ ವಿಶ್ವಾಸಘಾತ ಮಾಡಿದರು ಎಂದು ನಿಂದಿಸುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಕ್ವಿಟ್ ಇಂಡಿಯ ಆಂದೋಲನದ 50ನೇ ವಾರ್ಷಿಕೋತ್ಸವದ ಸ್ಮರಣಾರ್ಥ, ಆಗಸ್ಟ್ 9, 1942ರಂದು ನಡೆದ ಸಂಸತ್ತಿನ ಮಧ್ಯರಾತ್ರಿಯ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತ ಆಗಿನ ರಾಷ್ಟ್ರಪತಿ ಶಂಕರ್ ದಯಾಲ್ ಶರ್ಮರವರು ಏನು ಹೇಳಿದ್ದರು ಎಂದು ನೆನಪಿಸಿಕೊಳ್ಳುವುದು ಒಳ್ಳೆಯದು.: "ಕಾನ್ಪುರ, ಜಮಷೇದ್‌ಪುರ ಮತ್ತು ಅಹಮದಾಬಾದಿನ ಗಿರಣಿಗಳಲ್ಲಿ ವ್ಯಾಪಕವಾದ ಮುಷ್ಕರಗಳ ನಂತರ, ದಿಲ್ಲಿಯಿಂದ ಲಂಡನಿನಲ್ಲಿದ್ದ ಗೃಹ ಕಾರ್ಯದರ್ಶಿಗೆ ಕಳಿಸಿದ ಸಪ್ಟಂಬರ್ 5, 1942ರ ಒಂದು ಟಿಪ್ಪಣಿ ಭಾರತ ಕಮ್ಯುನಿಸ್ಟ್ ಪಕ್ಷದ ಬಗ್ಗೆ ವರದಿ ಮಾಡುತ್ತ ಅದರ ಹಲವಾರು ಸದಸ್ಯರ ವರ್ತನೆ, ಅದು ಬ್ರಿಟಿಶ್-ವಿರೋಧಿ ಕ್ರಾಂತಿಕಾರಿಗಳಿಂದ ಕೂಡಿದೆ ಎಂದು ಸದಾ ಸ್ಪಷ್ಟವಾಗಿರುವ ಸಂಗತಿಯನ್ನು ಸಾಬೀತು ಮಾಡುತ್ತದೆ ಎಂದಿತು" ಎಂದು ರಾಷ್ಟ್ರಪತಿ ಶರ್ಮ ಅವರು ಹೇಳಿದರು.

ಈ ಬಗ್ಗೆ ಬೇರೇನಾದರೂ ಹೇಳುವ ಅಗತ್ಯವಿದೆಯೇ?

ಭಾರತದ ಭವಿಷ್ಯದ ನಾಶವನ್ನು ತಡೆಯಬೇಕು

ಈ 'ಹೊಸಭಾರತ' ಭಾರತೀಯ ಇತಿಹಾಸದ ಪುನರ್ಲೇಖನ ಮಾಡುತ್ತದಷ್ಟೇ ಅಲ್ಲ, ಭಾರತೀಯ ಸಂವಿಧಾನ, ಅದರ ಸಹಯೋಗಿ ಸಂಸ್ಥೆಗಳು, ಪ್ರಾಧಿಕಾರಗಳು, ಅದು ಜನರಿಗೆ ನೀಡಿರುವ ಖಾತ್ರಿಗಳು, ಜನರ ಬದುಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ನಾಶಮಾಡುತ್ತದಷ್ಟೇ ಅಲ್ಲ, ಘರ್ಷಣೆ ಮತ್ತು ದ್ವೇಷವನ್ನು ಪ್ರೋತ್ಸಾಹಿಸಿ ಹಾಗೂ ದಲಿತರು, ಆದಿವಾಸಿಗಳು, ಮಹಿಳೆಯರು ಮತ್ತು ಧರ್ಮಿಕ ಅಲ್ಪಸಂಖ್ಯಾತರ ಮೇಲೆ ಹೆಚ್ಚೆಚ್ಚು ದಾಳಿಗಳನ್ನು ನಡೆಸಿ ಭಾರತದ ಭವಿಷ್ಯವನ್ನು ಕೂಡ ಶಿಥಿಲಗೊಳಿಸುತ್ತದೆ.

ಈ 'ಹೊಸ ಭಾರತ' ಭಾರತದ ಆರ್ಥಿಕ ಸ್ವಾವಲಂಬನೆಯನ್ನು ಮತ್ತು ಬುನಾದಿಗಳನ್ನು ಕೂಡ ಶಿಥಿಲಗೊಳಿಸುತ್ತದೆ. ಕಳೆದ ಆರು ವರ್ಷಗಳಲ್ಲಿ ಬಾರತದ ಅರ್ಥವ್ಯವಸ್ಥೆಯ ನಾಶ ಇದಕ್ಕೆ ಸಾಕ್ಷಿ. ರಾಷ್ಟ್ರೀಯ ಆಸ್ತಿಗಳ ಲೂಟಿ, ಸಾರ್ವಜನಿಕ ವಲಯದ ಸಾರಾಸಗಟು ಖಾಸಗೀಕರಣ, ಭಾರತದ ಖನಿಜ ಸಂಪತ್ತಿನ, ಭಾರತದ ಅರಣ್ಯಗಳ , ಹಸಿರು ಆವರಣದ ಲೂಟಿ, ಮತ್ತು ಕಾರ್ಮಿಕ ವರ್ಗ ಹಾಗೂ ದುಡಿಯುವ ಜನರ ಸಂವಿಧಾನಿಕ ಹಕ್ಕುಗಳ ರದ್ಧತಿಯ ಪ್ರಸಕ್ತ ಆರ್ಥಿಕ ನೀಲನಕ್ಷೆ ಭಾರತದ ಸಂಪತ್ತನ್ನು ಸಾರಾಸಗಟಾಗಿ ವಿದೇಶಿ ಮತ್ತು ದೇಶೀ ಕಾರ್ಪೊರೇಟ್‌ಗಳ ಗರಿಷ್ಟ ಲಾಭಗಳಿಗಾಗಿ ಬಿಟ್ಟುಕೊಡುವುದನ್ನು ತೋರಿಸುತ್ತದೆ. ಭಾರತದ ಕೃಷಿಯ ಕಂಪನೀಕರಣ, ಅಗತ್ಯ ಸರಕುಗಳ ಕಾಯ್ದೆಯನ್ನು, ರೈತರಿಗೆ ದೊರೆತಿರುವ ಕನಿಷ್ಟ ಬೆಂಬಲ ಬೆಲೆ, ಬೆಲೆ ಹತೋಟಿಗಳು, ಖರೀದಿ ಮುಂತಾದ ಕನಿಷ್ಟ ರಕ್ಷಣೆಗಳನ್ನೂ ರದ್ದು ಮಾಡುವ ಈಗಿನ ಸುಗ್ರೀವಾಜ್ಞೆಗಳು ಯಾವುದೇ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸಂಪೂರ್ಣ ನಾಶಕ್ಕೆ ದಾರಿ ಮಾಡಿಕೊಡುತ್ತವೆ, ಕೃಷಿ ವ್ಯಾಪಾರೀ ಕಾರ್ಪೊರೇಟ್‌ಗಳ ಲಾಭಗಳನ್ನು ಹಿಗ್ಗಿಸಿ ಆಹಾರ ಕೊರತೆಯ ಅಪಾಯವನ್ನು ಸೃಷ್ಟಿಸುತ್ತಿವೆ. ಇದು ನಮ್ಮ ಅನ್ನದಾತರ ವಿನಾಶ.

ಈ 'ಹೊಸ ಭಾರತ', ಹೀಗೆ, ನಮ್ಮ ಸಂವಿಧಾನಿಕ ವ್ಯವಸ್ಥೆಯ ಅಸ್ತಿತ್ವಕ್ಕೇ ಬಿಕ್ಕಟ್ಟನ್ನು ತರುತ್ತದೆ. ಇದು ವಿಶಾಲ ಭಾರತೀಯ ಜನಸ್ತೋಮಗಳ ಜೀವನೋಪಾಯ, ಸ್ವಾತಂತ್ರ್ಯ, ಘನತೆ ಮತ್ತು ಸಮೃದ್ಧಿಯ ಅಸ್ತಿತ್ವವನ್ನೂ ಬಿಕ್ಕಟ್ಟಿಗೆ ಒಳಗಾಗಿಸುತ್ತದೆ, ಭಾರತೀಯ ಬಹುತ್ವ, ಅದರ ಭಾಷಾ ವೈವಿಧ್ಯತೆ ಹಾಗೂ ಒಕ್ಕೂಟ ತತ್ವದ ಅಸ್ತಿತ್ವಕ್ಕೂ ಸಂಚಕಾರ ತರುತ್ತದೆ, ಮತ್ತು ಪ್ರಜಾಪ್ರಭುತ್ವ, ಜನತೆಯ ಹಕ್ಕುಗಳು ಹಾಗೂ ವಿವೇಚನಾಶೀಲತೆ ಮತ್ತು ತರ್ಕಶೀಲತೆಗೂ ಬಿಕ್ಕಟ್ಟು ತರುತ್ತದೆ.

ಈ 'ಹೊಸ ಭಾರತ'ದ ಈ ಅಪಾಯಗಳನ್ನು ಪ್ರತಿರೋಧಿಸಬೇಕಾಗಿದೆ, ಸೋಲಿಸಬೇಕಾಗಿದೆ. ಇದು ಈ ಸ್ವಾತಂತ್ರ್ಯ ದಿನದಂದು ಭಾರತೀಯ ಜನತೆ ಕೈಗೊಳ್ಳುವ ಯಾವುದೇ ಪ್ರತಿಜ್ಞೆಯ ಅರ್ಥ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್











ಭಾರತ ರಕ್ಷಿಸಿ ಆಂದೋಲನಕ್ಕೆ ವ್ಯಾಪಕ ಬೆಂಬಲ

ಭಾರತದ ಜನರೆಲ್ಲರೂ ಒಟ್ಟಾಗಿ ಬ್ರಿಟೀಷ್ ವಸಹಾತುಶಾಹಿಗಳನ್ನು ಭಾರತದಿಂದ ಹೊರ ಹಾಕಲು "ಭಾರತ ಬಿಟ್ಟು ತೊಲಗಿ ಎಂಬ ಆಂದೋಲದ ಮೂಲಕ ಬ್ರಿಟೀಷ್ ರಿಗೆ ಎಚ್ಚರಿಕೆ ನೀಡಿದರು. ಎಪ್ಪತ್ತೆಂಟು ವರ್ಷಗಳ ಹಿಂದೆ ನಡೆದ ಈ ಹೋರಾಟವನ್ನು ಅಂದು "ಕ್ವಿಟ್ ಇಂಡಿಯಾ" ಚಳುವಳಿ ಎಂಬ ಹೆಸರಿನಿಂದ ಮಾಡಲಾಗಿತ್ತು ಆದರಿಂದು "ಸೇವ್ ಇಂಡಿಯಾ" ಚಳುವಳಿಯೂ ಕೋವಿಡ್ ಪಿಡುಗಿನ ಮರೆಯಲ್ಲಿ ಮತ್ತೊಮ್ಮೆ ಭಾರತದ ಸ್ವಾತಂತ್ರ್ಯವನ್ನು ವಿದೇಶಿ ಶೋಷಕರಿಗೆ ವಹಿಸಿಕೊಡುವ ಕೇಂದ್ರ ಸರ್ಕಾರದ ಹುನ್ನಾರವಾಗಿದೆ.

ಇದಕ್ಕೆ ನಾವು ಅವಕಾಶ ಕೊಡುವುದಿಲ್ಲವೆಂದು ಕರ್ನಾಟಕದ ಕಾರ್ಮಿಕ ಸಂಘಟನೆಗಳು ಮತ್ತು ರೈತ ಸಂಘಟನೆಗಳ ಆಗಸ್ಟ್ 9 ನ್ನು ಭಾರತ ರಕ್ಷಿಸಿ ಎಂಬ ದಿನವನ್ನಾಗಿ ಆಚರಿಸುತ್ತೆವೆಂದು ಸವಾಲ ಹಾಕಿದ್ದರು. ಕೊರೊನಾ ರೋಗದಿಂದಾಗಿ ಇಡೀ ದೇಶದ ಜನತೆ ನಲುಗಿದೆ. ನಮ್ಮ ದೇಶದ ಕಾರ್ಮಿಕರು ಬದುಕಿನಲ್ಲಿ ಹಿಂದೆಂದೂ ಕಾಣದಂತಹ ಬೀರುಗಾಳಿಯನ್ನು ಎಬ್ಬಿಸಿದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕನಾಮಿ (ಸಿ ಎಮ್ ಐ ಇ) ವರದಿಯ ಪ್ರಕಾರ ನಗರ ಪ್ರದೇಶದಲ್ಲಿ ನಿರುದ್ಯೋಗದ ಪ್ರಮಾಣ ಶೇ. 30ಕ್ಕೆ ಏರಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರಗತಿವಿರೋಧಿ, ಕಾರ್ಮಿಕ ವಿರೋಧಿ, ಮತ್ತು ರೈತ ವಿರೋಧಿ ನೀತಿಗಳನ್ನು ಖಂಡಿಸಿ ಕಾರ್ಮಿಕ ಸಂಘಟನೆಯ ಸಹಭಾಗಿತ್ವದಲ್ಲಿ ರೈತ ಸಂಘಟನೆಗಳು ಸೇರಿದಂತೆ ಕ್ವಿಟ್ ಇಂಡಿಯಾ ಚಳುವಳಿಯ ಚಾರಿತ್ರಿಕ ಸ್ಮರಣೆಯಲ್ಲಿ ಹಾಗೂ ಕಾರ್ಖಾನೆಗಳ ಕಾಯಿದೆ, ಕೈಗಾರಿಕ ವಿವಾದ ಕಾಯ್ದೆ, ಗುತ್ತಿಗೆ ಕಾರ್ಮಿಕರ ಕಾಯ್ದೆಗಳಿಗೆ ಮಾದರಿ ಸ್ಥಾಯಿ ಆದೇಶಗಳಲ್ಲಿ ನಿಗದಿತ ಅವಧಿ ಕೆಲಸ ಅಳವಡಿಸಲು ತರಲಾಗಿರುವ ಪ್ರಗತಿವಿರೋಧಿ ತಿದ್ದುಪಡಿಗಳು ಹಾಗೂ ವ್ಯತ್ಯಸ್ಥ ತುಟ್ಟಿಭತ್ಯೆ ಮುಂದೂಡುವಿಕೆಯ ಆದೇಶಗಳನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿ, ಭೂಸಂಬಂಧಿ ಕಾನೂನುಗಳು, ಎ ಪಿ ಎಂ ಪಿ ಕಾಯ್ದೆ ಮತ್ತು ಅಗತ್ಯ ಸಾಮಗ್ರಿ ಕಾಯ್ದೆಗಳಿಗೆ ತಿದ್ದುಪಡಿ ತರಲು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಖಂಡಿಸಿ, ಮುಂದಿನ ಆರು ತಿಂಗಳ ಅವಧಿಗೆ ಆದಾಯ ತೆರಿಗೆ ಪಾವತಿಸದ ಕುಟುಂಬಗಳಿಗೆ ಪ್ರತಿ ತಿಂಗಳೂ ರೂ. 7,500/– ಪಾವತಿಸುವ ಮೂಲಕ ಸಾರ್ವತ್ರಿಕ ಅಗತ್ಯ ಮೂಲ ಆದಾಯ ಯೋಜನೆಯನ್ನು ಜಾರಿಗೊಳಿಸುವ ಮೂಲಕ ದುಡಿಯುವ ಜನರ ನೈಜ ವರಮಾನವನ್ನು ಹಾಗೂ ಅನುಭೋಗ ವೆಚ್ಚವನ್ನು ಹೆಚ್ಚಿಸಿ ದೇಶದ ಅರ್ಥವ್ಯವಸ್ಥೆಗೆ ಪುನಶ್ಚೇತನ ಒದಗಿಸುವಂತೆ ಮತ್ತು ಅಸಂಘಟಿತ ಕ್ಷೇತ್ರದ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯಿದೆ 2008 ರ ಅಡಿಯಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರವು ಪ್ರತಿ ವರ್ಷ 10,000 ಕೋಟಿ ರೂಪಾಯಿಗಳ ವರ್ತುಲ ನಿಧಿಯನ್ನು ಸ್ಥಾಪಿಸಬೇಕು.

ಕೇಂದ್ರ ಸರ್ಕಾರವು ರಕ್ಷಣಾ ವಲಯ, ರಕ್ಷಣಾ ಉಪಕರಣ ಕಾರ್ಖಾನೆಗಳು, ಸಾರಿಗೆ, ರೈಲ್ವೆ, ಜೀವ ವಿಮಾ ನಿಗಮ, ಸಾಮಾನ್ಯ ವಿಮಾ ನಿಗಮ, ಬ್ಯಾಂಕುಗಳು, ಬಂದರು, ವಿಮಾನ ನಿಲ್ದಾಣಗಳು ಮತ್ತಿತರ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುವುದನ್ನು ಕೂಡಲೇ ನಿಲ್ಲಿಸಬೇಕೆಂದು ಒತ್ತಾಯಿಸಿ ಇನ್ನು ಮುಂತಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯದ ಬೆಂಗಳೂರು, ಉಡುಪಿ, ಮೈಸೂರು, ದಕ್ಷಿಣ ಕನ್ನಡ, ಬಳ್ಳಾರಿ, ಧಾರವಾಡ, ಉಡುಪಿ, ಕೊಪ್ಪಳ, ಯಾದಗಿರಿ, ಮಂಡ್ಯ, ಕಲಬುರಗಿ, ಹಾವೇರಿ, ಗದಗ, ರಾಯಚೂರು, ಬೆಂಗಳೂರು ಗ್ರಾಮಾಂತರ, ಉತ್ತರ ಕನ್ನಡ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ ಸೇರಿದಂತೆ ನಾನಾ ಜಿಲ್ಲೆಗಳಲ್ಲಿ ಕೇಂದ್ರ ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ, ಕೃಷಿ ವಿರೋಧಿ ಹಾಗು ಕಾರ್ಪೊರೇಟ್ ಪರ ಆರ್ಥಿಕ ನೀತಿಗಳ ವಿರುದ್ಧ, ದೇಶದ ಸಾಮಾನ್ಯರಪರ ಬೇಡಿಕೆಗಳನ್ನು ಈಡೇರಿಸಲು "ಭಾರತ ರಕ್ಷಿಸಿ" ಎಂಬ ಘೋಷಣೆಯೊಂದಿಗೆ ಪ್ರತಿಭಟನೆ ನಡೆಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ "ಭಾರತ ಉಳಿಸಿ" ಚಳುವಳಿಯು ಸುಮಾರು 110 ಕೇಂದ್ರಗಳಲ್ಲಿ 15000ಕ್ಕು ಹೆಚ್ಚು ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು, ವಿಧ್ಯಾರ್ಥಿ–ಯುವಜನ–ಮಹಿಳಾ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿರುವ ವರದಿಗಳಿವೆ.

ಜನಪರ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸಲು ಶ್ರಮಿಸೋಣ... ಹಾಗೂ ದೇಶದ ಉಳಿವಿಗೆ ಧ್ವನಿಗೂಡಿಸೋಣ....

ಪುಟ 16 ಕ್ಕೆ









ನೂತನ ಶಿಕ್ಷಣ ನೀತಿ 2020

ಸದಾಶಯಗಳು ಮತ್ತು ಹುನ್ನಾರಗಳು

–ಪ್ರೊ. ಮಾಲಿನಿ ಭಟ್ಟಾಚಾರ್ಯ





ಡಾ. ಕಸ್ತೂರಿರಂಗನ್ ಅಧ್ಯಕ್ಷತೆಯ ಸಮಿತಿ ಮೇ 2019ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡನ್ನು ಸರಕಾರಕ್ಕೆ ಸಲ್ಲಿಸಿತು. ಇದಕ್ಕೆ ವ್ಯಾಪಕ ವಿಮರ್ಶೆಗಳು ಬಂದವು. ಈಗ ಇದನ್ನು ಸಂಸತ್ತಿನಲ್ಲಿ ಚರ್ಚಿಸದೆ, ಶಿಕ್ಷಣ ಸಮವರ್ತಿ ಪಟ್ಟಿಯಲ್ಲಿದ್ದರೂ ರಾಜ್ಯಗಳೊಡನೆಯೂ ಚರ್ಚಿಸದೆ ಕೇಂದ್ರ ಸಂಪುಟ ಕೊವಿಡ್ ಮಹಾಸೋಂಕಿನ ಪರಿಸ್ಥಿತಿಯ ನಡುವೆಯೂ ಅಂಗೀಕರಿಸಿಯೇ ಬಿಟ್ಟಿದೆ. ಏಕೆ ಈ ತರಾತುರಿ? ಈ ನೂತನ ನೀತಿ ತರಬೇಕೆಂದಿರುವ ಬದಲಾವಣೆಗಳೇನು, ಏತಕ್ಕಾಗಿ? ಕೊಲ್ಕತಾದ ಜಾಧವ್‌ಪುರ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದ, ಸಂಸತ್ ಸದಸ್ಯರೂ ಆಗಿದ್ದ ಪ್ರೊ, ಮಾಲಿನ ಭಟ್ಟಾಚಾರ್ಯ ಈ ಲೇಖನದಲ್ಲಿ ವಿಮರ್ಶಿಸಿದ್ದಾರೆ. ಪುಟ 11 ರಲ್ಲಿರುವ ಇನ್ನೊಂದು ಲೇಖನದಲ್ಲಿ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್ ಈ ನೀತಿಯ ಮತ್ತೊಂದು ಮಗ್ಗುಲನ್ನು ವಿಶ್ಲೇಷಿಸಿದ್ದಾರೆ.

ಅನು: ಶ್ರುಂಸೋನಾ

ನೂತನ ಶಿಕ್ಷಣ ನೀತಿ 2020 ಕಸ್ತೂರಿರಂಗನ್ ವರದಿಗಿಂತಲೂ ಹೆಚ್ಚು ಸಂಗ್ರಹವಾಗಿ ಎಚ್ಚರಿಕೆಯಿಂದ ಬರೆದ ದಸ್ತಾವೇಜು ಆಗಿದೆ. ಆ ವರದಿಯನ್ನು ನುಣುಪುಗೊಳಿಸಲಾಗಿದೆ, ಅದರಲ್ಲಿ ಸೇರಿರದಿದ್ದ ಎಲ್ಲ ರಾಜಕೀಯವಾಗಿ ಸರಿಯಾದ ಹೇಳಿಕೆಗಳು ಇದರಲ್ಲಿ ಅಡಕವಾಗಿವೆ. ಆದರೆ ನಾವು ಆಳವಾಗಿ ಅಧ್ಯಯನ ಮಾಡಿ ತುಲನೆ ಮಾಡದಿದ್ದರೆ ಈ ದಸ್ತಾವೇಜಿನ ತಿರುಳು ಕಸ್ತೂರಿರಂಗನ್ ವರದಿಗಿಂತ ಬಹಳವೇನೂ ಭಿನ್ನವಾಗಿಲ್ಲ ಎಂಬುದನ್ನು ಕಾಣದೇ ಹೋಗಬಹುದು.

ಕಸ್ತೂರಿರಂಗನ್ ವರದಿ ಹಿಂದಿನ ನೀತಿಗಳು ಸಮಾನತ್ವಕ್ಕೆ ಒತ್ತು ನೀಡುವ ಭರದಲ್ಲಿ ಗುಣಮಟ್ಟವನ್ನು ಕಡೆಗಣಿಸಿದ್ದವು ಎಂದು ನಿಂದನೆ ಮಾಡಿತ್ತು. ಆದರೆ ಈ ದಸ್ತಾವೇಜಿನಲ್ಲಿ ಅಂತಹ ಕಟು ಮಾತುಗಳಿಲ್ಲ. ಇದು ಸಮಾನತ್ವ ಮತ್ತು ಒಳಗೊಳ್ಳುವಿಕೆ ಎಂಬುದನ್ನು ಹಲವು ಬಾರಿ ಹೇಳುತ್ತದೆ, 1986ರ ಶಿಕ್ಷಣ ನೀತಿಯ ಅಪೂರ್ಣ ಅಜೆಂಡಾವನ್ನು ಸಮರ್ಪಕವಾಗಿ ನಿರ್ವಹಿಸಿರುವುದಾಗಿ ಹೇಳುತ್ತಿದೆ. ಚಿಂತನೆ, ವೈಜ್ಞಾನಿಕ ಮನೋಭಾವದ ಬಗ್ಗೆ ಕಸ್ತೂರಿರಂಗನ್ ವರದಿಗಿಂತ ಹೆಚ್ಚು ಬಾರಿ ಹೇಳಿದೆ. ನಡುವೆಯೇ ಶಾಲೆ ಬಿಡುವವರ ಪ್ರಮಾಣ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸುತ್ತಾ ಇವರುಗಳನ್ನು ಮುಖ್ಯವಾಹಿನಿಗೆ ವಾಪಾಸು ತರಲು ಪರ್ಯಾಯ ಶಿಕ್ಷಣ ಕೇಂದ್ರಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಬೆಳಗಿನ ತಿಂಡಿ ಮಧ್ಯಾಹ್ನದ ಊಟವನ್ನು ಶಾಲಾ–ಪೂರ್ವ ಹಂತದಿಂದಲೇ ನೀಡುವ ಪ್ರಸ್ತಾಪವಿದೆ. ವೃತ್ತಿಪರ ಶಿಕ್ಷಣವನ್ನು ಮುಖ್ಯವಾಹಿನಿಯಲ್ಲಿ ಒಳಗೊಳ್ಳಲಾಗುವುದು. ಸಾಮಾಜಿಕ–ಆರ್ಥಿಕವಾಗಿ ಅವಕಾಶ ವಂಚಿತ ಗುಂಪು(ಎಸ್.ಇ.ಡಿ.ಜಿ)ಗಳ ಬಗ್ಗೆ ಕಾಳಜಿಯೂ ಇದೆ. ಈ ದಿಕ್ಕಿನಲ್ಲಿ ಪ್ರಯತ್ನಗಳನ್ನು ಮತ್ತು ಸಂಪನ್ಮೂಲ ಒದಗಿಸುವುದನ್ನು ಹೆಚ್ಚಿಸುವ ಬಗ್ಗೆ ಹೇಳುತ್ತದೆ. ಹಿಂದಿನ ಕಸ್ತೂರಿರಂಗನ್ ವರದಿ 'ಎಸ್‌ಇಡಿಜಿ' ಎನ್ನುವಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳು, ಮಹಿಳೆಯರು ಮತ್ತು ವಿಶೇಷ ಚೇತನ ಇರುವ ವಿದ್ಯಾರ್ಥಿಗಳನ್ನು ನಿರ್ದಿಷ್ಟವಾಗಿ ಗುರುತಿಸಿರಲಿಲ್ಲ. ಇದು ಗುರುತಿಸಿದೆ. ಎಸಿಡಿಜಿ ಜನಗಳು 'ಲಿಂಗ ಒಳಗೊಳ್ಳುವಿಕೆ ನಿಧಿ', ಮತ್ತು 'ವಿಶೇಷ ಶಿಕ್ಷಣ ವಲಯ'ದ ಮಾತಾಡುತ್ತಿದೆ. ನ್ಯೂನತೆಗಳಿರುವ ಮಕ್ಕಳಿಗೆ ವಿಶೇಷ ಶಿಕ್ಷಕರ ಬಗ್ಗೆಯೂ ಹೇಳುತ್ತದೆ. ಶಾಲಾ ಮಟ್ಟದಲ್ಲಿ ಇರುವ ಎಲ್ಲ ಖಾಲಿ ಹುದ್ದೆಗಳನ್ನು ಶಿಕ್ಷಕರ ನೇಮಕಾತಿಯ ಮೂಲಕ ಭರ್ತಿ ಮಾಡುವ ಮತ್ತು ಶಿಕ್ಷಕರನ್ನು ಶಿಕ್ಷಣೇತರ ಕಾರ್ಯಕ್ಕೆ ಬಳಸದಿರುವ ಅಗತ್ಯತೆ ಬಗ್ಗೆ ಒತ್ತಿ ಹೇಳುತ್ತಿದೆ. ಶಿಕ್ಷಣದಲ್ಲಿ ಮನೆಭಾಷೆಗೆ ಒತ್ತು ನೀಡುವುದರ ಜೊತೆ ಶಿಕ್ಷಣವು ಒಂದು ಸಾರ್ವಜನಿಕ ಸೇವೆಯಾಗಿದ್ದು ಇದು ವಾಣಿಜ್ಯೀಕರಣಗೊಳಿಸುವಂಥದ್ದಲ್ಲ ಅಥವಾ ಲಾಭಕ್ಕಾಗಿ ಬಳಸುವಂತದ್ದಲ್ಲ ಎಂದು ಕೂಡ ಹೇಳಿದೆ.

ಇವೆಲ್ಲವೂ ಒಪ್ಪತಕ್ಕಂತವೇ. ಆದರೆ ಈ ದಸ್ತಾವೇಜು ನೀಡಿರುವ ಒಟ್ಟಾರೆ ನಿಲುವನ್ನು ಆಳವಾಗಿ ಅಭ್ಯಾಸ ಮಾಡಿದರೆ ಮೇಲ್ಕಾಣಿಸಿದ ಹಲವಾರು ಸದಾಶಯಗಳು ಈಡೇರದೆಯೇ ಉಳಿದುಬಿಡುತ್ತವೆ ಎಂಬ ಸಂಶಯ ಮೂಡುತ್ತದೆ.

ಹಣಕಾಸು

ಈ ಪೊಳ್ಳುತನ ಹಣಕಾಸಿಗೆ ಸಂಬಂಧಿಸಿದ ಸಣ್ಣ ಭಾಗದಲ್ಲಿ ತಿಳಿಯುತ್ತದೆ. ಬಾಲಶಿಕ್ಷಣ/ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ/ಶಾಲಾ ಸಂಕೀರ್ಣಗಳ ಸಂಪನ್ಮೂಲ/ಆಹಾರ ಮತ್ತು ಪೌಷ್ಠಿಕತೆ/ಶಿಕ್ಷಕರ ಶಿಕ್ಷಣಕ್ಕೆ ಹೂಡಿಕೆ/ಉತ್ಕೃಷ್ಟತೆಯನ್ನು ಪೋಷಿಸಲು ಉನ್ನತ ಶಿಕ್ಷಣ ಸಂಸ್ಥೆಗಳ ನವೀಕರಣ/ಸಂಶೋಧನೆಗೆ ಉತ್ತೇಜನ ಇತ್ಯಾದಿಗಳನ್ನು ಸಂಪನ್ಮೂಲ ನೀಡಿಕೆಗೆ ಒತ್ತು ನೀಡಬೇಕಾದ ವಲಯಗಳು ಎಂದು ಗುರುತಿಸುತ್ತದೆ(ಪರಿಚ್ಛೇದ 25.4). ಅದೇನೋ ಒಳ್ಳೆಯದೇ. ಆದರೆ ಈ ಎಲ್ಲದಕ್ಕೆ ಸಂಪನ್ಮೂಲ ಒದಗಿಸಲು ಹಣಕಾಸು ಎಲ್ಲಿಂದ ಬರುತ್ತದೆ? ಶಿಕ್ಷಣಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿನಿಯೋಗ ಜಿಡಿಪಿಯ 6ಶೇ.ವನ್ನು ಆದಷ್ಟು ಬೇಗನೆ ತಲುಪಬೇಕು ಮತ್ತು ಮುಂದಿನ ಹತ್ತು ವರ್ಷಗಳಲ್ಲಿ ಸಾರ್ವಜನಿಕ ವೆಚ್ಚದ ಶೇ. 20 ರಷ್ಟನ್ನು ಒದಗಿಸಬೇಕು ಎಂದು ಅನುಮೋದಿಸುವುದು ಮತ್ತು ಕಂಡರಿಸುವುದು ಇಷ್ಟನ್ನೇ ಈ ದಸ್ತಾವೇಜು ಮಾಡಿರುವುದು (ಪರಿಚ್ಛೇದ 25.2). ಈ ವಿನಿಯೋಗವನ್ನು ನಿಜವಾಗಿಯೂ ಮಾಡದಿದ್ದರೆ ಇದು ಕೇವಲ ಹಿಂದಿನ ದಸ್ತಾವೇಜುಗಳಲ್ಲಿ ನೀಡಿದ ಆಶ್ವಾಸನೆಗಳ ನಕಲಾಗಿ ಉಳಿಯುತ್ತದೆ. ಶಿಕ್ಷಣದ ವಾಣಿಜ್ಯೀಕರಣವಾಗಬಾರದು ಎಂದು ಹೇಳುವ ಈ ದಸ್ತಾವೇಜು ಸಾರ್ವಜನಿಕ ಸಂಸ್ಥೆಗಳು ಖಾಸಗಿ ದಾನಗಳಿಂದ ಹಣ ಹೊಂದಿಸುವಂತೆ ಪ್ರೋತ್ಸಾಹಿಸುತ್ತಿದೆ. (ಪರಿಚ್ಛೇದ 25.6). ಸರ್ಕಾರವೇ ಅಗತ್ಯವಿರುವಷ್ಟು ಹೂಡಿಕೆ ಮಾಡಿದರೆ 'ಪರೋಪಕಾರಿ ಮೂಲಗಳಿಗೆ' ಪ್ರಾಜೆಕ್ಟ್‌ಗಳು ಮತ್ತು ಸ್ಕೀಮುಗಳಿಗೆ ಹಣಕ್ಕಾಗಿ ಜೋಳಿಗೆ ಹಿಡಿದುಕೊಂಡು ಹೋಗಬೇಕಾದ, ಅಗತ್ಯತೆ ಯಾಕೆ ಬೇಕಾಗುತ್ತದೆ? ಬೋಧಕರು ಇಂತಹ ಬೋಧಕೇತರ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವುದು ಎಷ್ಟು ಸರಿ?

ಸರ್ಕಾರವೇ ಅಗತ್ಯವಿರುವಷ್ಟು ಹೂಡಿಕೆ ಮಾಡಿದರೆ 'ಪರೋಪಕಾರಿ ಮೂಲಗಳಿಗೆ' ಪ್ರಾಜೆಕ್ಟ್‌ಗಳು ಮತ್ತು ಸ್ಕೀಮುಗಳಿಗೆ ಹಣಕ್ಕಾಗಿ ಜೋಳಿಗೆ ಹಿಡಿದುಕೊಂಡು ಹೋಗಬೇಕಾದ, ಅಗತ್ಯತೆ ಯಾಕೆ ಬೇಕಾಗುತ್ತದೆ? ಬೋಧಕರು ಇಂತಹ ಬೋಧಕೇತರ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡುವುದು ಎಷ್ಟು ಸರಿ?

'ಪಾರಂಪರಿಕ ಶಿಕ್ಷಣ'

ಶಿಕ್ಷಣ ವ್ಯವಸ್ಥೆಯಲ್ಲಿ ಈ ತೀವ್ರಗಾಮಿ ಬದಲಾವಣೆಗಳಿಗೆ ಸುಸ್ಥಿರ ಅಭಿವೃದ್ಧಿಯ 2030 ರ ಅಜೆಂಡಾವನ್ನು ಹಿನ್ನೆಲೆಯಾಗಿಟ್ಟು ಕೊಂಡಿರುವುದಾಗಿ ಈ ದಸ್ತಾವೇಜು ಹೇಳುತ್ತದೆ. ಸಹಜವಾಗಿಯೇ ಭಾರತೀಯ ಸಂದರ್ಭದಲ್ಲಿ ಇದನ್ನು ಭಾರತೀಯ ಅಗತ್ಯತೆಗಳಿಗೆ ಅನುಗುಣವಾಗಿಯೇ ಮಾಡಬೇಕು. ಆದರೆ ಈ ಹಿಂದಿನ ಕಸ್ತೂರಿ ರಂಗನ್ ವರದಿಯಂತೆ 'ಭಾರತೀಯ ಕಲಿಕಾ ಪರಂಪರೆ'ಗಳತ್ತ ಹಿಂದಿರುಗಿ ನೋಡುವಾಗ ಅದು ತಕ್ಷಶಿಲಾ ಮತ್ತು ನಳಂದ, ಚರಕ ಮತ್ತು ಆರ್ಯಭಟರ 'ಸಂಸ್ಕೃತ ಜ್ಞಾನ ಪದ್ಧತಿ'ಯ ಬಗ್ಗೆ ದೊಡ್ಡ ಮಾತುಗಳನ್ನಾಡುತ್ತದೆ, ಆದರೆ ಮಧ್ಯಯುಗ ಮತ್ತು ಇಸ್ಲಾಮಿ ಜ್ಞಾನ ಪದ್ಧತಿಯ ಬಗ್ಗೆಯಾಗಲೀ, ಮತ್ತು ಆಧುನಿಕ ಯುಗದಲ್ಲಿ ವಸಾಹತುಶಾಹಿ ವಿರೋಧಿ ಹೋರಾಟದ ಭಾಗವಾಗಿ ಬಂದ ರಾಷ್ಟ್ರೀಯ ಶಿಕ್ಷಣದ ಬೆಳವಣಿಗೆಯ ಬಗ್ಗೆಯಾಗಲೀ ಉಲ್ಲೇಖಿಸುವುದಿಲ್ಲ (ಪುಟ4). ಪ್ರತಿ ಬಾರಿ ಭಾರತೀಯ ಪರಂಪರೆ, ಭಾರತೀಯ ಕಲೆ, ಸಂಸ್ಕೃತಿಗಳ ಬಗ್ಗೆ ಹೇಳುವಾಗ ಭಾರತದ ಒಂದು ಅತ್ಯಂತ ಸೀಮಿತ ಕಲ್ಪನೆಯ ಬಗ್ಗೆಯಷ್ಟೇ ದಸ್ತಾವೇಜು ಹೇಳುತ್ತದೆ, ಭಾರತದ ಶ್ರೀಮಂತ ಸಮ್ಮಿಶ್ರ ಪರಂಪರೆಯನ್ನು ಬಿಟ್ಟು ಬಿಡುತ್ತದೆ. ಚೈತನ್ಯಶೀಲ ಭಾಷಾ ಪರಂಪರೆಯನ್ನು ಹಾಡಿ ಹೊಗಳುವಾಗ, ಅದು ಒಂದು ಬಾರಿಯಾದರೂ ಉರ್ದು ಭಾಷೆಯ ಕೊಡುಗೆಯನ್ನು ನೆನಪಿಸಿಕೊಳ್ಳುವುದಿಲ್ಲ. ಎಲ್ಲಕ್ಕಿಂತ ಮೇಲಾಗಿ ಈ 'ಭಾರತದಲ್ಲಿ ಬೇರೂರಿರುವುದು ಮತ್ತು ಹೆಮ್ಮೆ'(ಪುಟ 6) ಎನ್ನುವ ಮಂತ್ರವನ್ನು ಅವೈಜ್ಞಾನಿಕ, ಅಸ್ಪಷ್ಟ, ಮೇಲುಮೇಲಿನ, ಅಷ್ಟೇ ಅಲ್ಲ, 'ಹುಸಿ' ಬೋಧನಾ ವಿಷಯಗಳನ್ನು 'ಮೌಲ್ಯಾಧಾರಿತ ಶಿಕ್ಷಣ' (11.8) ಅಥವಾ 'ಭಾರತ ಕುರಿತ ಜ್ಞಾನ'ದ ಹೆಸರಿನಲ್ಲಿ ಪರಿಚಯಿಸಲು, ವಿದ್ಯಾರ್ಥಿ ಯಾವುದೇ ಕಡೆಯಿಂದ ಹೆಚ್ಚಿನ ಪ್ರಯತ್ನವಿಲ್ಲದೆ ಸುಲಭದ 'ಕ್ರೆಡಿಟ್'ಗಳನ್ನು ಪಡೆಯುವ ಆಯ್ಕೆಗಾಗಿ ಬಳಸಿಕೊಳ್ಳುವುದು ಸಾಧ್ಯವಿದೆ.

ಪ್ರತಿ ಬಾರಿ ಭಾರತೀಯ ಪರಂಪರೆ, ಭಾರತೀಯ ಕಲೆ, ಸಂಸ್ಕೃತಿಗಳ ಬಗ್ಗೆ ಹೇಳುವಾಗ ಭಾರತದ ಒಂದು ಅತ್ಯಂತ ಸೀಮಿತ ಕಲ್ಪನೆಯ ಬಗ್ಗೆಯಷ್ಟೇ ದಸ್ತಾವೇಜು ಹೇಳುತ್ತದೆ, ಭಾರತದ ಶ್ರೀಮಂತ ಸಮ್ಮಿಶ್ರ ಪರಂಪರೆಯನ್ನು ಬಿಟ್ಟು ಬಿಡುತ್ತದೆ.

ಶಿಶುವಿಹಾರ, ಮಧ್ಯಾಹ್ನದ ಊಟ

ಪ್ರಾಥಮಿಕ ಪೂರ್ವ ಹಂತದಿಂದ 12ನೇ ತರಗತಿಯವರೆಗೆ ಒಂದು 'ಸಮಗ್ರವಾದ' ವ್ಯವಸ್ಥೆಯ ಬಗ್ಗೆ ದಸ್ತಾವೇಜು ಹೇಳುತ್ತದೆ. ಈಗಾಗಲೇ ಅಂಗನವಾಡಿ ಮತ್ತು ಬಾಲವಾಡಿಗಳಲ್ಲಿ ಶಾಲಾ–ಪೂರ್ವ ಹಂತದಲ್ಲಿ ಶಿಶುವಿಹಾರಗಳು ಮತ್ತು ಆಟ–ಪಾಟದ ಒಂದು ಪರಿಯೋಜನೆ ಕಾರ್ಯ ನಿರ್ವಹಿಸುತ್ತಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಅಡಿಯಲ್ಲಿರುವ ಇದನ್ನು ಬಲಪಡಿಸಬಹುದಾಗಿತ್ತು ಮತ್ತು ಒಂದು ಸಾರ್ವತ್ರಿಕ ಶಿಶುವಿಹಾರ ವ್ಯವಸ್ಥೆಯನ್ನು ರೂಪಿಸಬಹುದಿತ್ತು. ಮೂರು ವರ್ಷದ ಮಕ್ಕಳನ್ನು ಶಾಲಾ ವ್ಯವಸ್ಥೆಯ ಪರಿಧಿಯ ಒಳಗೆ ಅಷ್ಟು ಬೇಗನೇ ತಂದು ಅವರನ್ನು ಆರು ವರ್ಷಗಳಾಗುವಷ್ಟು ಹೊತ್ತಿಗೆ 'ಶಾಲೆಗೆ ತಯಾರಿ' ಮಾಡುವ ಅಗತ್ಯವಾದರೂ ಏನಿದೆ? ಇದು ಮಕ್ಕಳ ಮೇಲೆ ಅನಗತ್ಯ ಒತ್ತಡ ಹೇರುತ್ತದೆ ಎಂದು ಹಲವು ಶಿಕ್ಷಣ ತಜ್ಞರು ಹೇಳುತ್ತಾರೆ. ಅಂಗನವಾಡಿ ಕೇಂದ್ರಗಳು ಪೌಷ್ಠಿಕತೆ ಮತ್ತು ಗರ್ಭಿಣಿಯರ ಮತ್ತು ನವಜಾತ ಶಿಶುವಿನ ಆರೈಕೆಯನ್ನು ಶಾಲೆಗೆ ಹೋಗುವ ವಯಸ್ಸು ಆಗುವ ವರೆಗೆ ನೋಡಿಕೊಳ್ಳುವ ಒಂದು ಸಮಗ್ರ ಯೋಜನೆ. ಇದರಲ್ಲಿ ಒಂದು ಭಾಗವನ್ನು ಶಾಲಾ ವ್ಯವಸ್ಥೆ ವಹಿಸಿಕೊಂಡರೆ ಮತ್ತು ಶಾಲಾ ಸಂಕೀರ್ಣದೊಳಕ್ಕೆ ಸಮಗ್ರೀಕರಿಸಿದರೆ (ಪರಿಚ್ಛೇದ 1.6) ಉಳಿದ ಜವಾಬ್ದಾರಿಗಳ ಕಥೆ ಏನು? ಇದು ಪೌಷ್ಠಿಕತೆ ಮತ್ತು ಶಿಶು ಕಲ್ಯಾಣದ ಸಮಗ್ರ ಯೋಜನೆಯನ್ನು ಕಳಚಿ ಹಾಕಲು ಅಥವ ಛಿದ್ರಗೊಳಿಸಲು ಒಂದು ನೆಪವೇ?

ಅಂಗನವಾಡಿ ಕೇಂದ್ರಗಳು ಪೌಷ್ಠಿಕತೆ ಮತ್ತು ಗರ್ಭಿಣಿಯರ ಮತ್ತು ನವಜಾತ ಶಿಶು'ವಿನ ಆರೈಕೆಯನ್ನು ಶಾಲೆಗೆ ಹೋಗುವ ವಯಸ್ಸು ಆಗುವ ವರೆಗೆ ನೋಡಿಕೊಳ್ಳುವ ಸಮಗ್ರ ಯೋಜನೆಯಲ್ಲಿ ಒಂದು ಭಾಗವನ್ನು ಶಾಲಾಸಂಕೀರ್ಣದೊಳಕ್ಕೆ ಸಮಗ್ರೀಕರಿಸಿದರೆ ಉಳಿದ ಜವಾಬ್ದಾರಿಗಳ ಕಥೆ ಏನು? ಇದು ಈ ಸಮಗ್ರ ಯೋಜನೆಯನ್ನು ಕಳಚಿ ಹಾಕಲು ಒಂದು ನೆಪವೇ?

ಈಗಿರುವ ಬಿಸಿಯೂಟ ವ್ಯವಸ್ಥೆಯನ್ನು ಶಾಲಾ–ಪೂರ್ವ ಹಂತಕ್ಕೆ ವಿಸ್ತರಿಸಿ ಬೆಳಗಿನ ಉಪಾಹಾರ ಮತ್ತು ಮಧ್ಯಾಹ್ನದ ಊಟವನ್ನು ಬುನಾದಿ ಹಂತದಲ್ಲಿ ಒದಗಿಸಲಾಗುವುದು ಎನ್ನಲಾಗಿದೆ. ಆದರೆ ಇದನ್ನು ನಗರ ಪ್ರದೇಶಗಳಲ್ಲಿ ಮತ್ತು ಗುರುತಿಸಲ್ಪಟ್ಟ ಗ್ರಾಮೀಣ ಸಮೂಹಗಳಲ್ಲಿ ಕೇಂದ್ರೀಕೃತ ಅಡುಗೆಕೇಂದ್ರಗಳಿಂದ, ಇಲ್ಲವಾದರೆ ಒಂದು 'ಸರಳ ಆದರೆ ಪೌಷ್ಠಿಕಾಂಶವುಳ್ಳ' ಸಿದ್ಧ ಊಟ ಒದಗಿಸಲಾಗುವುದು(ಪರಿಚ್ಛೇದ 2.9). ಹೀಗೆ ಬಿಸಿಯೂಟ ಮತ್ತು ಅದನ್ನು ಒದಗಿಸುವ ನಿಯಮಿತ ಸಿಬ್ಬಂದಿಯನ್ನು ಖಾತ್ರಿಗೊಳಿಸುವ ಬದಲು, ಮತ್ತೆ ಸಿದ್ಧ ಆಹಾರವನ್ನು ಒದಗಿಸುವ ಅಥವ ಅದನ್ನು ಹೊರಗುತ್ತಿಗೆಗೆ ಕೊಡುವ ಚರ್ಚಾಸ್ಪದ ಕ್ರಮವನ್ನು ತರಲಾಗುತ್ತಿದೆ. ಶಾಲಾ ಊಟವನ್ನು ದೊಡ್ಡ ಎನ್‌ಜಿಓಗಳು ಅಥವಾ ದೊಡ್ಡ ಧಾರ್ಮಿಕ ಸಂಸ್ಥೆಗಳು ವಹಿಸಿಕೊಂಡರೆ, ಸ್ಥಳೀಯ ಸಮುದಾಯದಿಂದ ಇವನ್ನು ಕಿತ್ತುಕೊಂಡು ಸರ್ಕಾರದ ಹಣದಲ್ಲಿ ನಡೆಯುವ ಒಂದು ವ್ಯವಹಾರವನ್ನಾಗಿ ಮಾರ್ಪಡಿಸಿದಂತಾಗುತ್ತದೆ. ಇದು ಅಪೇಕ್ಷಣೀಯವೇ?

'ಬಹುಭಾಷಿತ್ವ'

ಶಾಲಾಪೂರ್ವ ಮಟ್ಟದಲ್ಲಿ ಮಕ್ಕಳ ಬಹುಭಾಷಿತ್ವದ ಬಗ್ಗೆ ನೋಡೋಣ. ಈ ದಸ್ತಾವೇಜು ಇದನ್ನು ಹಿಂದಿನ ಕಸ್ತೂರಿರಂಗನ್ ವರದಿಯಲ್ಲಿ ಹೇಳಿರುವುದಕ್ಕಿಂತ ಮೆತ್ತಗೆ ಹೇಳಿದರೂ, ಆ ಹಂತದಲ್ಲಿ ಮಗು ಪರಿಸರದಿಂದ ಭಾಷೆಗಳನ್ನು ಕಲಿತುಕೊಳ್ಳುವ ಸಾಮರ್ಥ್ಯವನ್ನು(ಪರಿಚ್ಛೇದ 2.8)ನ್ನು ಭಾಷಾ ಕಲಿಕೆ (4.12, 4.13) ಯೊಂದಿಗೆ ಕಲ್ಪಿಸಿಕೊಂಡು ಗೊಂದಲಮಯ ಮಾಡಿದೆ, ಮತ್ತು 'ಮಕ್ಕಳನ್ನು ಆರಂಭದಲ್ಲೇ ಹಲವು ಭಾಷೆಗಳಿಗೆ ತೆರೆದಿಡುವ' ಪ್ರಸ್ತಾವ ಮಾತೃಭಾಷೆಯಲ್ಲಿ ಮೇಲೆ ಒತ್ತು ಕೊಡಲಾಗುವುದು ಎಂಬ ದಾವೆಯನ್ನು ಅಪಹಾಸ್ಯ ಮಾಡುತ್ತದೆ. ಇದು ಹಲವು ಭಾಷೆಗಳಿಗೆ ತೆರೆಯುವಂತಹ ಸಾಮಾಜಿಕ ಪರಿಸರ ಇಲ್ಲದ ಮೂರು ವರ್ಷದ ಮಗುವಿನ ಮೇಲೆ ಒತ್ತಡ ಹೇರುತ್ತದೆ ಮತ್ತು ಆ ಮಗುವಿನಲ್ಲಿ ಗೊಂದಲ ಉಂಟು ಮಾಡುತ್ತದೆ. ತ್ರಿಭಾಷಾ ಸೂತ್ರದ ಬಗ್ಗೆ ಬರೇ ಉಪಚಾರದ ಮಾತುಗಳನ್ನಾಡುವಾಗಲೂ, ಅದನ್ನು

ಪುಟ 10 ನೋಡಿ

ನೂತನ ಶಿಕ್ಷಣ ನೀತಿ 2020

ಪುಟ 9 ರಿಂದ

ಶಿಫಾರಸು ಮಾಡಿದ್ದ ಶಿಕ್ಷಣ ತಜ್ಞರು ಅದನ್ನು ಸುಲಭ ಹಂತಗಳಲ್ಲಿ 5ನೇ ತರಗತಿಯಿಂದ ಜಾರಿಗೊಳಿಸಬೇಕು ಎಂದು ಹೇಳಿರುವುದನ್ನು ಮರೆತಿದ್ದಾರೆ. ಇದರಿಂದಾಗಿ ಇಂಗ್ಲೀಷ್, ಹಿಂದಿ ಮತ್ತು ಸಂಸ್ಕೃತಕ್ಕೇ ಆದ್ಯತೆ ನೀಡಲಾಗುವುದು ಎಂಬುದು ಸ್ವಯಂವೇದ್ಯ. ಬುನಾದಿ ಹಂತದಲ್ಲಿ ಸಂಸ್ಕೃತ ಪಠ್ಯಪುಸ್ತಕಗಳ ಮಹತ್ವಾಕಾಂಕ್ಷಿ ಯೋಜನೆ(ಪರಿಚ್ಛೇದ 4.18) ಸಂಸ್ಕೃತಕ್ಕೇ ಆದ್ಯತೆ ನೀಡಲಾಗುವುದು, ಆದರೆ ಇದು ಜ್ಞಾನಾರ್ಜನೆಗೆ ಅಲ್ಲ, ಬದಲಾಗಿ ಸಂಸ್ಕೃತದ ಸುತ್ತಲಿನ ಗರಿಮೆಯನ್ನು ಹೆಚ್ಚಿಸಿ ತೋರಿಸಲಿಕ್ಕಾಗಿ ಎಂಬುದು ಸ್ಪಷ್ಟವಾಗುತ್ತದೆ. ಎಳೆ ಮಗುವಿನ ಮೇಲೆ ಇಂತಹ ಹೊರೆ ಹೇರುವುದು, ಪಠ್ಯಕ್ರಮವನ್ನು ಇನ್ನಷ್ಟು ಹಗುರಗೊಳಿಸಲಾಗುವುದು ಮತ್ತು ಪ್ರಶ್ನೆ ಕೇಳುವಂತೆ ರೂಪಿಸಲಾಗುವುದು ಎನ್ನುವ ದಾವೆಯನ್ನು ಸುಳ್ಳಾಗಿಸುತ್ತದೆ. ಏನೇ ಇರಲಿ, ಇದನ್ನು ನಾವು ಕೊವಿಡ್ ಸಂಕಟದ ಸಮಯದಲ್ಲಿ ಚೆನ್ನಾಗಿಯೇ ಅನುಭವಿಸಿದ್ದೇವೆ, ಹೊರೆಯನ್ನು ಕಡಿಮೆ ಮಾಡುವ ಹೆಸರಿನಲ್ಲಿ ಪಠ್ಯಕ್ರಮದಿಂದ ಏನೇನನ್ನು ಕೈಬಿಡಲಾಗಿದೆ ಎಂಬುದನ್ನು ಈಗಾಗಲೇ ನೋಡಿದ್ದೇವೆ. ಆದ್ದರಿಂದ ಈ ಪ್ರಸ್ತಾವಕ್ಕೆ ಹೆಚ್ಚೇನೂ ಮಹತ್ವ ನೀಡಬೇಕಾಗಿಲ್ಲ.

ತ್ರಿಭಾಷಾ ಸೂತ್ರದ ಬಗ್ಗೆ ಬರೇ ಉಪಚಾರದ ಮಾತುಗಳನ್ನಾಡುವಾಗಲೂ, ಅದನ್ನು ಶಿಫಾರಸು ಮಾಡಿದ್ದ ಶಿಕ್ಷಣ ತಜ್ಞರು ಅದನ್ನು ಸುಲಭ ಹಂತಗಳಲ್ಲಿ 5ನೇ ತರಗತಿಯಿಂದ ಜಾರಿಗೊಳಸಬೇಕು ಎಂದು ಹೇಳರುವುದನ್ನು ಮರೆತಿದ್ದಾರೆ. ಇದರಿಂದಾಗಿ ಇಂಗ್ಲೀಷ್, ಹಿಂದಿ ಮತ್ತು ಸಂಸ್ಕೃತಕ್ಕೇ ಆದ್ಯತೆ ನೀಡಲಾಗುವುದು ಎಂಬುದು ಸ್ವಯಂವೇದ್ಯ.

‘ಶಾಲಾ ಸಂಕೀರ್ಣ’

ಒಂದು ಕ್ಷೇತ್ರದ ಶಾಲಾ-ಪೂರ್ವ ವ್ಯವಸ್ಥೆ ಮತ್ತು ಪ್ರಾಥಮಿಕ ಶಾಲೆಗಳನ್ನು ಒಂದು ಮಾಧ್ಯಮಿಕ ಶಾಲೆ (8ರಿಂದ 12ನೇ ತರಗತಿ)ಯ ನೇತೃತ್ವದಲ್ಲಿ ಒಂದು ‘ಶಾಲಾ ಸಂಕೀರ್ಣ (ಪರಿಚ್ಛೇದ 7.1, 7.2) ದೊಳಗೆ ತರುವ ಪ್ರಸ್ತಾಪವನ್ನು ಈ ದಸ್ತಾವೇಜು ಹಿಂದಿನ ಕಸ್ತೂರಿರಂಗನ್ ವರದಿಗಿಂತ ಹೆಚ್ಚು ಜಾಗರೂಕತೆಯಿಂದ ಮುಂದಿಟ್ಟಿದೆ. ಇದರಿಂದ ಉತ್ತಮ ನಿರ್ವಹಣೆ ಮತ್ತು ಸಮಗ್ರ ಅಭಿವೃದ್ಧಿ ಯೋಜನೆ ಸಾಧ್ಯವಾಗುತ್ತದೆ ಎಂದು ಅದು ಹೇಳುತ್ತದೆ. ಆದರೆ ಇದರಿಂದ ದೂರ-ದೂರದ ಹಿಂದುಳಿದ ಪ್ರದೇಶಗಳಲ್ಲಿರುವ ಶಾಲೆಗಳ ಭೌತಿಕ ದೂರವನ್ನು ಕಡಿಮೆಗೊಳಿಸಲಾಗುವುದಿಲ್ಲ. ಜೊತೆಗೆ ಸಂಪನ್ಮೂಲ ಹಂಚಿಕೆ ಹೆಸರಿನಲ್ಲಿ ಈ ಶಾಲೆಗಳಿಗೆ ಬೇಕಾದವುಗಳನ್ನು ಹೆಚ್ಚಿಸದೆ ಹೋದರೆ ಇಂತಹ ‘ಸಾಮಾನ್ಯ ಮಟ್ಟಕ್ಕಿಂತ ಕೆಳಗಿರುವ’ ಶಾಲೆಗಳು ‘ಕೆಳಮಟ್ಟ’ದಲ್ಲಿಯೇ ಉಳಿದು ಬಿಡುವ ಸಾಧ್ಯತೆ ಇದೆ. ಮತ್ತು ಬಲಯುತ ಶಾಲೆಗಳು ತಮ್ಮಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಂಪನ್ಮೂಲವನ್ನು ಹೊಂದಿರುವುದರಿಂದ ಒಟ್ಟು ಹಣನೀಡಿಕೆಯಲ್ಲಿ ಹೆಚ್ಚಿನ ಪಾಲನ್ನು ಕೇಳುತ್ತವೆ.

ಮೇಲೆ ಹೇಳಿದಂತೆ ‘ಎಸ್.ಇ.ಡಿ.ಜಿ. ಹೆಚ್ಚಿರುವ ವಲಯ’ಗಳು(ಪರಿಚ್ಛೇದ 6.6.ರಿಂದ 6.9) ಮತ್ತು ಇಂತಹ ‘ವಿಶೇಷ ಶೈಕ್ಷಣಿಕ ವಲಯ’ಗಳಲ್ಲಿ ಹೆಣ್ಣು ಮಕ್ಕಳು ಮತ್ತು ತೃತೀಯಲಿಂಗಿ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವಂತ ಸ್ಕೀಮುಗಳು ಮತ್ತು ಪ್ರಾಜೆಕ್ಟ್‌ಗಳಿಗೆ, ಅದೇ ರೀತಿಯಲ್ಲಿ ವಿಶೇಷ ಚೇತನ ಮಕ್ಕಳಿಗೆ ಹೆಚ್ಚುವರಿ ನಿಧಿ ನಿಯೋಜನೆಯ ಮಾತು ಕೇಳಲೇನೋ ಆಪ್ಯಾಯಮಾನವಾಗಿದೆ. ನಿಜ, ಇದು ನಿಧಿಗಳ ಲಭ್ಯತೆಯನ್ನು ಅವಲಂಬಿಸಿರುತ್ತದೆ. ಆದರೆ, ಇಂತಹ ವಿಶೇಷ ವಿಭಾಗಗಳು ಆ ಕ್ಷೇತ್ರದ ಇತರ ಮಕ್ಕಳೊಂದಿಗೆ ಕಲಿಯುವ ‘ದುರ್ಬಲ’ ಶಾಲೆಗಳ, ಅಂದರೆ ‘ನೆರೆಹೊರೆ ಶಾಲೆ’ಗಳ ಅಗತ್ಯಗಳು ನಿರ್ಲಕ್ಷ್ಯಕ್ಕೆ ಒಳಗಾಗುವುದೇನೂ ನಿಲ್ಲದು. ಹೀಗಾಗಿ ಈ ಕೇಂದ್ರೀಕೃತ ಯೋಜನೆಯ ಉದ್ದೇಶ ಅಸ್ಪಷ್ಟವಾಗಿದೆ.

ಬೋರ್ಡ್ ಪರೀಕ್ಷೆಗಳು, ಮೌಲ್ಯಮಾಪನೆ

ವಿದ್ಯಾರ್ಥಿಗಳು ತಾವು ಶಾಲೆಯಲ್ಲಿರುವ ವರೆಗೆ ನಾಲ್ಕು ಬಾರಿ (3,5,8 ಮತ್ತು 12ನೇ ತರಗತಿಗಳು) ಬೋರ್ಡ್ ಪರೀಕ್ಷೆ ಕಡ್ಡಾಯವಾಗಿ ಬರೆಯಬೇಕು ಮತ್ತು ಪ್ರತಿ ವರ್ಷ ಎರಡು ಬಾರಿ ಐಚ್ಛಿಕವಾಗಿ ಬರೆಯಬಹುದು (ಪರಿಚ್ಛೇದ 4.38-4.43) ಎಂದು ಹೇಳಲಾಗಿದೆ. ಬೋರ್ಡ್ ಪರೀಕ್ಷೆಯನ್ನು ಪದೇ ಪದೇ ಎದುರಿಸುವುದರಿಂದ ‘ಪರೀಕ್ಷೆಯ ಭಯ’ವನ್ನು ಹೋಗಲಾಡಿಸಲು ಸಾಧ್ಯವೇ? ಮೇಲಾಗಿ, ವಿದ್ಯಾರ್ಥಿಯ ಫಲಿತಾಂಶದ ಗೌಪ್ಯತೆ ಕಾಪಾಡಿಕೊಂಡರೂ, 3ನೇ ತರಗತಿ ಅಥವಾ 5ನೇ ತರಗತಿ ವಿದ್ಯಾರ್ಥಿಗಳು ಮೇಲೆ ಇದರಿಂದ ಆಗುವ ಪರಿಣಾಮವೇನು? ಇದರ ಬದಲು 8ನೇ ತರಗತಿಯ ವರೆಗೆ ಸತತ ಆಂತರಿಕ ಮೌಲ್ಯಮಾಪನ ಹಾಗೂ ಒಂದು ಮಟ್ಟಕ್ಕೆ ಬರದಿರುವವರಿಗೆ ಹೆಚ್ಚಿನ ಗಮನ ನೀಡಿ ಅವರು ಸರಿಯಾಗಿ ಕಲಿಯುವಂತೆ ಮಾಡುವ ಒಂದು ಉತ್ತಮ ಸಂಯೋಜನೆ ಇರುವ ವ್ಯವಸ್ಥೆ ಹೆಚ್ಚು ಸೂಕ್ತವಲ್ಲವೇ? ಈ ಬದಲಾವಣೆಗಳು ನವ-ಉದಾರವಾದದ ಯುಗದ ಒತ್ತಡ ಮತ್ತು ಸ್ಪರ್ಧೆಯನ್ನು ಎದುರಿಸಲು ವಿದ್ಯಾರ್ಥಿಗಳಿಗೆ ಹೇಗೆ ನೆರವಾಗುತ್ತವೆ? ರಾಜ್ಯಗಳ ಮತ್ತು ಪ್ರದೇಶಗಳ ನಡುವಿನ ವ್ಯತ್ಯಾಸಗಳನ್ನು ಮತ್ತು ವಿವಿಧ ಸಂಸ್ಥೆಗಳ ನಿರ್ದಿಷ್ಟ ಅಗತ್ಯತೆಗಳನ್ನು ಮರೆತು ಒಂದು ‘ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಪರಿಚ್ಛೇದ 4.43) ಮೂಲಕ ವಿಶ್ವವಿದ್ಯಾಲಯಗಳ ಪ್ರವೇಶಾತಿ ಪರೀಕ್ಷೆಯನ್ನು ಸಹ ಕೇಂದ್ರೀಕೃತಗೊಳಿಸುವ ಪ್ರಯತ್ನ ನಡೆದಿದೆ.

ರಾಜ್ಯಗಳ ಮತ್ತು ಪ್ರದೇಶಗಳ ನಡುವಿನ ವ್ಯತ್ಯಾಸಗಳನ್ನು ಮತ್ತು ವಿವಿಧ ಸಂಸ್ಥೆಗಳ ನಿರ್ದಿಷ್ಟ ಅಗತ್ಯತೆಗಳನ್ನು ಮರೆತು ಒಂದು ‘ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ ಮೂಲಕ ವಿಶ್ವವಿದ್ಯಾಲಯಗಳ ಪ್ರವೇಶಾತಿ ಪರೀಕ್ಷೆಯನ್ನು ಸಹ ಕೇಂದ್ರೀಕೃತ ಗೊಳಸುವ ಪ್ರಯತ್ನ

ಉನ್ನತ ಶಿಕ್ಷಣ, ಬಹುಶಿಸ್ತೀಯ ಕಲಿಕೆ


ಇನ್ನು ಉನ್ನತ ಶಿಕ್ಷಣಕ್ಕೆ ಬಂದರೆ, ವಿದ್ಯಾರ್ಥಿ ಜನಸಂಖ್ಯೆಯ ಶೇ. 50 ರಷ್ಟನ್ನು ಉನ್ನತ ಶಿಕ್ಷಣಕ್ಕೆ ತರಬೇಕು ಮತ್ತು ಯಾವುದೇ ವಿದ್ಯಾರ್ಥಿ ಹಣಕಾಸಿನ ಕೊರತೆಯಿಂದಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಗುರಿ ಹೊಂದಲಾಗಿದೆ. ಇಲ್ಲಿ ‘ಬಹುಶಿಸ್ತೀಯ’ (ಮಲ್ಟಿ ಡಿಸಿಪ್ಲಿನರಿ) ಎಂಬುದು ಒಂದು ಮ್ಯಾಜಿಕ್ ಪದವಾಗಿ ಬಿಟ್ಟಿದೆ. ‘ತುಂಡರಿಕೆ’ಯನ್ನು ಕೊನೆಗೊಳಿಸಲು ಶಿಕ್ಷಣ ವ್ಯವಸ್ಥೆಯಲ್ಲಿ ಅಂತಿಮವಾಗಿ 3000 ಅಥವಾ ಹೆಚ್ಚು ವಿದ್ಯಾರ್ಥಿಗಳಿರುವ ಕೆಲವೇ ದೊಡ್ಡ ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆ ಸಂಚಯಗಳು/ಜ್ಞಾನ ಕೂಟಗಳು ಮಾತ್ರ ಇರಬೇಕು ಎಂದು ಪ್ರಸ್ತಾಪಿಸಲಾಗಿದೆ(ಪರಿಚ್ಛೇದ 10.1). ಶಿಕ್ಷಣದಲ್ಲಿ ಉತ್ಕೃಷ್ಟತೆಯ ಉದಾಹರಣೆಗಳಾಗಿ ‘ತಕ್ಷಶಿಲಾ, ನಲಂದ’ ಮತ್ತು ಅಮೇರಿಕಾದ ‘ಐವಿ ಲೀಗ್ ವಿಶ್ವವಿದ್ಯಾಲಯ’ಗಳನ್ನು ಹೆಸರಿಸಲಾಗಿದೆ. ಮಧ್ಯೆ ಬೇರೇನೂ ಇಲ್ಲ. ಇವನ್ನು ಅನುಕರಿಸಲು ಜ್ಞಾನದಲ್ಲಿ ‘ಹಾನಿಕಾರಕ ಶ್ರೇಣೀಕರಣವನ್ನು ಕೊನೆಗೊಳಿಸಿ’ ಮತ್ತು ‘ಹಗೇವುಗಳನ್ನು ಮುರಿದು’ ‘ಬಹುಶಿಸ್ತೀಯತೆ’ ಎಂದು ಬಣ್ಣಿಸಿರುವುದನ್ನು ಸಾಧಿಸಬೇಕು ಎಂದು ಸಹ ಪ್ರಸ್ತಾಪಿಸಲಾಗಿದೆ.

ಆದರೆ, ‘ಮೇರು’ (MERU-ಮಾದರಿ ಶಿಕ್ಷಣ ಮತ್ತು ಸಂಶೋಧನ ವಿಶ್ವವಿದ್ಯಾಲಯ)ಗಳು, RU (ಸಂಶೋಧನಾ-ತೀವ್ರತೆಯ ವಿಶ್ವವಿದ್ಯಾಲಯ)ಗಳು, TU (ಬೋಧನಾ-ತೀವ್ರತೆಯ ವಿ.ವಿ.)ಗಳು ಮತ್ತು ಸ್ವಾಯತ್ತ ಪದವಿ ಕಾಲೇಜುಗಳು ಎಂಬೊಂದು ವಿಭಿನ್ನ ರೀತಿಯ ಶ್ರೇಣಿ ವ್ಯವಸ್ಥೆಯನ್ನು ಪ್ರಸ್ತಾಪಿಸಲಾಗಿದೆ. ಈ ಶ್ರೇಣಿ ವ್ಯವಸ್ಥೆಯಲ್ಲಿ ಮೇಲ್ಮುಖವಾದ ಚಲನಶೀಲತೆಯನ್ನು ಕೈಬಿಟ್ಟಿಲ್ಲವಾದರೂ ಉನ್ನತ ಶಿಕ್ಷಣದಲ್ಲಿ ಬೋಧನೆ ಮತ್ತು ಸಂಶೋಧನೆಯನ್ನು ಈ ರೀತಿಯಲ್ಲಿ ಪ್ರತ್ಯೇಕಗೊಳಿಸುವುದು ಅಧ್ಯಯನ ವ್ಯವಸ್ಥೆಯ ಇಡೀ ವಿಚಾರಕ್ಕೆ ಧಕ್ಕೆ ತರುತ್ತದೆ. ಅಂತೆಯೇ ಕೆಲವೇ ಅಧ್ಯಯನ ವಿಷಯಗಳನ್ನು ಕೊಡುವ ಸಣ್ಣ ಸಂಸ್ಥೆಗಳಿಗೆ ‘ವಿಸ್ತಾರಗೊಳ್ಳಿ ಇಲ್ಲವೇ ನಾಶವಾಗಿ’ ಎಂದು ಬಲವಂತ ಮಾಡಿದರೆ, ಅದರಿಂದ ಕೆಲವು ‘ಅಸಮರ್ಥ’ ಸಂಸ್ಥೆಗಳು ಮಾತ್ರವಲ್ಲ, ಅವುಗಳೊಂದಿಗೇ ದೂರ-ದೂರ ಪ್ರದೇಶಗಳಲ್ಲಿರುವ ನಿರ್ದಿಷ್ಟ ಅಗತ್ಯ ಉದ್ದೇಶಗಳನ್ನು ಈಡೇರಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳೂ ಸಹ ನಾಶವಾಗುತ್ತದೆ. ವೈದ್ಯಕೀಯ ಮತ್ತು ತಂತ್ರಜ್ಞಾನದ ವೃತ್ತಿಪರ ಶಿಕ್ಷಣ ಸಂಸ್ಥೆಗಳು ಕೂಡಾ ತಾವು ವರ್ಷಾನುಗಟ್ಟಲೆ ಬೆಳೆಸಿಕೊಂಡು ಬಂದಿದ್ದ ನಿರ್ದಿಷ್ಟ ಪರಿಣತಿಗಳೇನೇ ಇದ್ದರೂ ‘ಬಹುಶಿಸ್ತೀಯ’ ವಾಗಿ ಮಾರ್ಪಟ್ಟು ವಿಸ್ತಾರಗೊಳ್ಳಲೇ ಬೇಕಾಗುತ್ತದೆ.

ಮಾಧ್ಯಮಿಕ ಶಾಲಾ ಹಂತದಿಂದಲೇ ಆರಂಭ ವಾಗಬೇಕೆಂದಿರುವ ಈ ‘ಬಹುಶಿಸ್ತೀಯತೆ’ ಎಂಬುದು ಏನು ಎಂದು ತಿಳಿಯೋಣ. ಯಾವುದೇ ಜ್ಞಾನಶಿಸ್ತಿನಲ್ಲಿ (ಗಣಿತಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯಶಾಸ್ತ್ರ, ಭೌತಶಾಸ್ತ್ರ, ವಾಣಿಜ್ಯಶಾಸ್ತ್ರ ಇತ್ಯಾದಿ-ಅನು) ಅಧ್ಯಯನ ಮಾಡುತ್ತಿದ್ದರೂ, ಒಂದು ಘಟ್ಟದಲ್ಲಿ ಜ್ಞಾನವನ್ನು ನಿರ್ಮಿಸಲು ಕೆಲವು ಇತರ ಶಿಸ್ತುಗಳ ವಿಷಯಗಳು ಮತ್ತು ವಿಧಾನಗಳ ಜ್ಞಾನ ಪಡೆಯುವುದು, ಅಂದರೆ ‘ಅಂತರ್-ಶಿಸ್ತೀಯ’ಗೊಳ್ಳುವುದು ಅಗತ್ಯ ಎಂದು ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಿಳಿದಿದ್ದಾರೆ. ಆದರೆ ಈ ದಸ್ತಾವೇಜಿನಲ್ಲಿ ಈ ‘ಬಹುಶಿಸ್ತೀಯತೆ’ಯೆಂದರೆ ವಿವಿಧ ಜ್ಞಾನಶಿಸ್ತುಗಳಿಂದ ಆರಿಸಿದ ಅಥವ ‘ಮೌಲ್ಯ-ಶಿಕ್ಷಣ’, ಅಥವ ‘ಭಾರತದ ಜ್ಞಾನ’ ಮುಂತಾದ ‘ನವೀನ’ ಕೋರ್ಸ್‌ಗಳ ಒಂದು ಕಲಬೆರಕೆ, ಒಂದು ಕೆಫೆಟೇರಿಯಾದಲ್ಲಿ ಇರಿಸಿರುವ ವಿವಿಧ ತಿನಿಸುಗಳಲ್ಲಿ ನಮಗೆ ಬೇಕಾದ್ದನ್ನು ಆರಿಸಿಕೊಳ್ಳುವ ರೀತಿಯದ್ದು. ಯಾವುದೇ ವಿದ್ಯಾರ್ಥಿಯು ‘ಆಯ್ಕೆ- ಆಧಾರಿತ ಜಮಾ ವ್ಯವಸ್ಥೆ’(choice-based credit system) ಯಡಿ ಕೋರ್ಸ್‌ಗಳನ್ನು ಆರಿಸಿಕೊಂಡು ಈ ಕೆಫೆಟೇರಿಯ ಪ್ರವೇಶಿಸಬಹುದು, ತಾನು ಓದಿದ ಅವಧಿಗೆ (1-4 ವರ್ಷಗಳು) ತಕ್ಕಂತೆ ಜಮಾ(ಕ್ರೆಡಿಟ್) ಪಾಯಿಂಟ್‌ಗಳನ್ನು ಪಡೆದು ಯಾವಾಗ ಬೇಕಾದರೂ ಹೊರಹೋಗಬಹುದು. ಈ ಕ್ರೆಡಿಟ್ ಪಾಯಿಂಟ್‌ಗಳ ಆಧಾರದಲ್ಲಿ ಆ ವಿದ್ಯಾರ್ಥಿಗೆ ಪದವಿ/ಡಿಪ್ಲೊಮ/ಪ್ರಮಾಣ ಪತ್ರ ದೊರೆಯುತ್ತದೆ. ಇನ್ನು ಮುಂದೆ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗುವ ಅವಶ್ಯಕತೆಯಿಲ್ಲದ ಪದವಿ ಕಾಲೇಜುಗಳು ಪದವಿ ನೀಡುವ ಅಂಗಡಿಗಳಾಗಿ ಬಿಡುತ್ತವೆ. ಸ್ವಲ್ಪ ಸಂಶೋಧನಾ ಸೌಕರ್ಯಗಳಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜ್ಞಾನಶಿಸ್ತುಗಳನ್ನು ಕ್ರೆಡಿಟ್ ಪಾಯಿಂಟ್‌ಗಳನ್ನು ಉತ್ಪಾದಿಸುವ ಕೋರ್ಸ್‌ಗಳ ಮಟ್ಟಕ್ಕೆ ಇಳಿಸಿ ಶಿಕ್ಷಣದ ಸಮಸ್ತ ಉದ್ದೇಶ ಮತ್ತು ವಸ್ತುವನ್ನು ಮತ್ತು ಅಕೆಡೆಮಿಕ್ ಸಮುದಾಯದ ಜಂಟಿ ಚಟುವಟಿಕೆಯಾಗಿ ಜ್ಞಾನ ನಿರ್ಮಾಣವನ್ನು ಸಂಪೂರ್ಣವಾಗಿ ನಾಶಪಡಿಸುತ್ತದೆ. ಆನ್‌ಲೈನ್ ದೂರ ಶಿಕ್ಷಣದ ಪ್ರಯೋಜನವನ್ನು ನಿರಾಕರಿಸಲಾಗದಿದ್ದರೂ, ಅದು ಹೆಚ್ಚೆಚ್ಚು ಜನಪ್ರಿಯವಾಗವುದರೊಂದಿಗೆ ಶಿಕ್ಷಣದ ಅಪಮೌಲ್ಯೀಕರಣ ಈ ‘ಬಹುಶಿಸ್ತೀಯತೆ’ಯ ಹೊರೆಯ ಅಡಿಯಲ್ಲಿ ಇನ್ನಷ್ಟು ತ್ವರಿತಗೊಳ್ಳುತ್ತದೆ.

ಈ ದಸ್ತಾವೇಜಿನಲ್ಲಿ ಈ ‘ಬಹುಶಿಸ್ತೀಯತೆ’ ಯೆಂದರೆ ವಿವಿಧ ಜ್ಞಾನಶಿಸ್ತುಗಳಂದ ಆರಿಸಿದ ಅಥವ ‘ನವೀನ’ ಕೋರ್ಸ್‌ಗಳ ಒಂದು ಕಲಬೆರಕೆ, ಒಂದು ಕೆಫೆಟೇರಿಯಾದಲ್ಲಿ ಇರಿಸಿರುವ ವಿವಿಧ ತಿನಿಸುಗಳಲ್ಲಿ ನಮಗೆ ಬೇಕಾದ್ದನ್ನು ಆರಿಸಿಕೊಳ್ಳುವ ರೀತಿಯದ್ದು. ಶಿಕ್ಷಣದ ಅಪಮೌಲ್ಯೀಕರಣ ಈ ‘ಬಹುಶಿಸ್ತೀಯತೆ’ಯ ಹೊರೆಯ ಅಡಿಯಲ್ಲಿ ಇನ್ನಷ್ಟು ತ್ವರಿತಗೊಳ್ಳುತ್ತದೆ.

ಹೀಗಾದರೆ, ಶಿಕ್ಷಣದ ಗುಣಮಟ್ಟ ಏನಾಗುತ್ತದೆ? ಮಾನಕ ಏನಾಗುತ್ತದೆ? ಇಲ್ಲಿಯೂ ನಾವು ‘ಭಾರತದ ಉನ್ನತ ಶಿಕ್ಷಣ ಆಯೋಗ’(ಹೆಚ್‌ಇಸಿಐ) ಎಂಬ ಒಂದು ಕೇಂದ್ರೀಕೃತ ಸರ್ವಶಕ್ತ ಸಂಸ್ಥೆಯನ್ನು ಕಾಣುತ್ತೇವೆ. ಕಸ್ತೂರಿರಂಗನ್ ವರದಿ ಇದಕ್ಕೆ ಪ್ರಧಾನ ಮಂತ್ರಿಯನ್ನು ಮುಖ್ಯಸ್ಥರನ್ನಾಗಿ ಮಾಡಿತ್ತು. ಆದರೆ ಈ ದಸ್ತಾವೇಜು, ಇದನ್ನು ಮುಖವಿಹೀನ ಮತ್ತು ಪಾರದರ್ಶಕ ನಿಯಂತ್ರಕನಾಗಿ ‘ಹಗುರವಾಗಿಯೂ, ಬಿಗಿಯಾಗಿಯೂ’ ಮಧ್ಯಪ್ರವೇಶ ಮಾಡುವ ವ್ಯವಸ್ಥೆಯಾಗಿಯಷ್ಟೇ ಕಾಣ ಬಯಸುತ್ತದೆ. ಇದಕ್ಕೆ ಮೇಲಿಂದ ಕೆಳಗಿನ ವರೆಗೆ ನಿಯಂತ್ರಣ, ಮಾನ್ಯತೆ, ನಿಧಿ ನೀಡಿಕೆ ಮತ್ತು ಮಾನಕಗಳನ್ನು ನಿರ್ಧರಿಸಲು ನಾಲ್ಕು ಅಂಗಗಳಿರುತ್ತವೆ(ಪರಿಚ್ಛೇದ 19.1-19.10) ಮತ್ತು ಅಂತಿಮವಾಗಿ ಈ ಎಲ್ಲ ಪ್ರಶ್ನೆಗಳನ್ನು ಅತ್ಯುನ್ನತ ಮಟ್ಟದಲ್ಲಿ ನಿರ್ಧರಿಸುತ್ತದೆ.



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ನೂತನ ಶಿಕ್ಷಣ ನೀತಿಯಲ್ಲಿ ಹೊರ ಕಡಿಮೆ ಮಾಡಲು ನೋಡು ಒಂದೇ ಪುಸಕ -ಆಲ್-ಇನ್-ಒನ್- ಸಂಸ್ಕೃತ ಇಂಗ್ಲಿಷ್-ಗಣಿತ-ವಿಜ್ಞಾನ-ಅರ್ಥಶಾಸ್ತ್ರ

ಸ್ವಾಯತ್ತತೆ

ಸ್ವಾಯತ್ತತೆಯ ಬಗ್ಗೆ, ಶಿಕ್ಷಕರಿಗೆ ಅಧಿಕಾರ ನೀಡುವ ಬಗ್ಗೆ ಮತ್ತು ಶಾಲಾ ಮತ್ತು ಉನ್ನತ ಶಿಕ್ಷಣದಲ್ಲಿ ಅವರ ಭಾಗವಹಿಸುವಿಕೆ ಬಗ್ಗೆ ಬಹಳ ಮಾತುಗಳಿವೆ. ಆದರೆ ವಾಸ್ತವಕ್ಕೆ ಬಂದಾಗ, ಶಾಲಾ ಸಂಕೀರ್ಣದ ಆಡಳಿತದಲ್ಲಿ ಶಿಕ್ಷಕರ ಪ್ರಾತಿನಿಧ್ಯಕ್ಕೆ ಅವಕಾಶವಿಲ್ಲ. ಇನ್ನು ಉನ್ನತ ಶಿಕ್ಷಣದ ಆಡಳಿತ ವಿಧಾನವಂತೂ ಸ್ವಾಯತ್ತತೆಯ ಅಪಹಾಸ್ಯವೇ ಆಗಿದೆ.

ಪ್ರತಿಯೊಂದು ಉನ್ನತ ಶಿಕ್ಷಣ ಸಂಸ್ಥೆಯ ಮಟ್ಟದಲ್ಲಿ ‘ಸ್ವಾಯತ್ತತೆ’ ಎಂದರೆ ಆಡಳಿಗಾರರ ಮಂಡಳಿಯಲ್ಲಿ ಅಧಿಕಾರಗಳ ಸಾಂದ್ರೀಕರಣ. ಈ ಮಂಡಳಿಯಲ್ಲಿ ಇರುವವರು ‘ಉನ್ನತ ಶಿಕ್ಷಣಾರ್ಹತೆ ಪಡೆದಿರುವ, ದಕ್ಷ ಮತ್ತು ಪ್ರಮಾಣೀಕೃತ ಸಾಮರ್ಥ್ಯವುಳ್ಳ ಸಮರ್ಪಿತ ವ್ಯಕ್ತಿಗಳು’(ಪರಿಚ್ಛೇದ 20.2). ಇವರಲ್ಲಿ ಯಾರಾದರೂ ‘ಯಾವುದೇ ರಾಜಕೀಯ ಹಾಗೂ ಬಾಹ್ಯ ಪ್ರಭಾವಕ್ಕೆ ಒಳಗಾಗದೆ ಕೆಲಸ ಮಾಡುವ’ ಶಿಕ್ಷಣರಂಗದ ವ್ಯಕ್ತಿಗಳು ಇರುತ್ತಾರೆಯೇ ಎಂದೇನೂ ಹೇಳಿಲ್ಲ. ಇವರು ಸಂಬಂಧಪಟ್ಟ ಉನ್ನತ ಶಿಕ್ಷಣ ಸಂಸ್ಥೆಯ ‘ನಾಯಕತ್ವ’ವನ್ನು ಕೂಡ ಒಳಗೊಂಡಂತೆ ಎಲ್ಲಾ ನೇಮಕಾತಿಗಳನ್ನು ಮಾಡುತ್ತಾರೆ ಮತ್ತು ತಮ್ಮ ಉತ್ತರಾಧಿಕಾರಿಗಳನ್ನು ಕೂಡ ತಾವೇ ನೇಮಿಸುವ ಒಂದು ಪ್ರತಿಷ್ಠಿತ ಪರಿಣತರ ಸಮಿತಿಯ ನೆರವಿನಿಂದ ಇವರೇ ಆರಿಸುತ್ತಾರೆ. ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳಿಗೆ, ನಿಯಮಾವಳಿಗಳು ಮತ್ತು ವಿಧಿ-ವಿಧಾನಗಳಿಗೆ ಇವರೇ ಹೊಣೆಗಾರರು. ಹೀಗೆ ಈ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ಮತ್ತು ಸಂಬಂಧಪಟ್ಟ ವಿಭಾಗಗಳ (ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಬೋಧಕೇತರ ಸಿಬ್ಬಂದಿ-ಅನು)ಭಾಗವಹಿಸುವಿಕೆ ಸಂಪೂರ್ಣವಾಗಿ ಹಿನ್ನೆಲೆಗೆ ಸರಿಯುತ್ತದೆ. ಹೊಸ ಶಿಕ್ಷಕರ ನೇಮಕಾತಿಗಳನ್ನು ‘ಕಾರ್ಯಾವಧಿಯ ಜಾಡು’(tenure-track) ಆಧರಿಸಿ, ಅಂದರೆ ಇನ್ನಷ್ಟು ಉತ್ಕೃಷ್ಟತೆಗೆ ‘ಸೂಕ್ತ ಪ್ರೊಬೇಷನ್’ ಮೇಲೆ ಮಾಡಲಾಗುತ್ತದೆ. ಮತ್ತು ಇವರ ಖಾಯಮಾತಿ, ಬಡ್ತಿ, ಸಂಬಳ ಹೆಚ್ಚಳ ಇತ್ಯಾದಿಗಳಿಗೆ ಕಾರ್ಯನಿರ್ವಹಣೆಯ ಮೌಲ್ಯಮಾಪನದ ಅಂಶಗಳನ್ನು ಈ ‘ಸ್ವಾಯತ್ತ’ ಆಡಳಿತಗಾರರ ಮಂಡಳಿ(ಬಿಒಜಿ) ನಿರ್ಧರಿಸುತ್ತದೆ. ಶಿಕ್ಷಕರ ಸ್ಥಾನಮಾನ ಮತ್ತು ಘನತೆಯ ಪರಿಯಿದು!

ಆಡಳಿತ

ಆಡಳಿತದ ವಿಚಾರವನ್ನು ನೋಡೋಣ. ಈ ನೂತನ ನೀತಿಯೊಂದಿಗೆ ಸಾರ್ವಜನಿಕ ಉನ್ನತ ಶಿಕ್ಷಣ ಸಂಸ್ಥೆಗಳ ರಚನೆ ಮತ್ತು ಸಾರ-ಸತ್ವ ಖಾಸಗಿ ಉನ್ನತ ಶಿಕ್ಷಣ ಸಂಸ್ಥೆಗಳ ರೀತಿಯದ್ದೇ ಆಗುತ್ತದೆ. ಅದೊಂದು

ಪುಟ 13 ನೋಡಿ

ವಾಸ್ತವಕ್ಕೆ ಬಂದಾಗ, ಶಾಲಾ ಸಂಕೀರ್ಣದ ಆಡಳತದಲ್ಲಿ ಶಿಕ್ಷಕರ ಪ್ರಾತಿನಿಧ್ಯಕ್ಕೆ ಅವಕಾಶವಿಲ್ಲ. ಇನ್ನು ಉನ್ನತ ಶಿಕ್ಷಣದ ಆಡಳತ ವಿಧಾನವಂತೂ ಸ್ವಾಯತ್ತತೆಯ ಅಪಹಾಸ್ಯವೇ ಆಗಿದೆ.

ಹೊಸ ಶಿಕ್ಷಣ ನೀತಿ: ಭಾರತದ ಮಹಾ ಹಿನ್ನೆಗೆತ



ಸ್ವತಂತ್ರ ಭಾರತವು ಬಂಡವಾಳಶಾಹಿಯ ಕಾರ್ಯಾಚರಣೆಯ ಅಗತ್ಯಕ್ಕೆ ಬೇಕಾಗಿರುವ ಶಿಕ್ಷಣಕ್ಕಿಂತಲೂ ಹೆಚ್ಚು ವಿಸ್ತಾರವಾದ "ಸಾರ್ವತ್ರಿಕ ಶಿಕ್ಷಣ" ಕಾರ್ಯಕ್ರಮದ ಭರವಸೆಯನ್ನು ಕೊಟ್ಟಿತು.
ನವ ಉದಾರ ಬಂಡವಾಳಶಾಹಿ ಆಳ್ವಿಕೆಯ ಶಿಕ್ಷಣ ನೀತಿಯ ಉದ್ದೇಶವೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ಅವಶ್ಯಕತೆಗೆ ತಕ್ಕಷ್ಟೇ ಪ್ರಮಾಣದಲ್ಲಿ ಶಿಕ್ಷಣ ನೀಡುವುದು ಮತ್ತು ವಿವಿಧ ಕುತಂತ್ರಗಳ ಮೂಲಕ 'ಸಾರ್ವತ್ರಿಕ ಶಿಕ್ಷಣ'ದ ವಚನದಿಂದ ಹಿಂದಕ್ಕೆ ಸರಿಯುವುದು. ಹೊಸ ಶಿಕ್ಷಣ ನೀತಿಯು ಏನು ಹೇಳುತ್ತದೆ ಎನ್ನುವುದಕ್ಕಿಂತ ಎಂತಹ ಕುತಂತ್ರಗಳ ಮೂಲಕ ಜನರಿಗೆ ಕೊಟ್ಟ ವಚನವನ್ನು ಮುರಿಯುತ್ತದೆ ಎಂಬುದನ್ನು ಪರಿಶೀಲಿಸಿದರೆ ಹೊಸ ಶಿಕ್ಷಣ ನೀತಿಯು ಸರಿಯಾಗಿಯೇ ಅರ್ಥವಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ,ನಾಗರಾಜ್

ಹೊಸ ಶಿಕ್ಷಣ ನೀತಿಯಂತಹ ದಸ್ತಾವೇಜಿನಲ್ಲಿ ಹೊಸ ಅಂಶಗಳು ಮತ್ತು ಸವಕಲು ಮಾತುಗಳನ್ನು ಪ್ರತ್ಯೇಕಿಸಬೇಕಾಗುತ್ತದೆ, ಮಾತ್ರವಲ್ಲ, ಕೈಬಿಟ್ಟಿರುವ ಹಳೆಯ ಸವಕಲುಗಳನ್ನು ಗುರುತಿಸಬೇಕಾಗುತ್ತದೆ. ಹೀಗೆ " ಶಿಕ್ಷಣ ಒಂದು ಸಾರ್ವಜನಿಕ ಸೇವೆ" "ಜಿಡಿಪಿಯ 6% ಹಣವನ್ನು ಶಿಕ್ಷಣಕ್ಕೆ ಮೀಸಲಿಡಬೇಕು" ಮುಂತಾದವು ಅವುಗಳನ್ನು ನಿಶ್ಚಿತವಾಗಿ ಈಡೇರಿಸಿಕೊಳ್ಳುವ ಸಲಹೆ ಸೂಚನೆಗಳು ಇಲ್ಲದ ಕಾರಣದಿಂದಾಗಿ ಸವಕಲು ಮಾತುಗಳೇ ಆಗುತ್ತವೆ.

ಸಂಕ್ಷಿಪ್ತವಾಗಿ, ಈಗಾಗಲೇ ಹೇಳಿರುವ ಸವಕಲು ಮಾತುಗಳನ್ನೇ ಪುನಃ ಹೇಳುವುದು ಕ್ಷುಲ್ಲಕತನವಾಗುತ್ತದೆ. ಅಂತಹ ಮಾತುಗಳನ್ನು ಪುನರಾವರ್ತಿಸದಿದ್ದರೆ ಮಾತ್ರ ಅದು ಮಹತ್ವ ಪಡೆಯುತ್ತದೆ. ಆದರೆ, ಹೊಸ ಶಿಕ್ಷಣ ನೀತಿಯಲ್ಲಿ ಪುನರಾವರ್ತನೆಗೊಂಡಿರುವ ಹಳೆಯ ಸವಕಲು ಮಾತುಗಳು ಅನೇಕ ಪ್ರಜ್ಞಾವಂತರನ್ನು ಕೂಡ ಪ್ರಭಾವಿಸಿವೆ. ಚುಟುಕಾಗಿ ಹೇಳುವುದಾದರೆ, ಒಂದು ಸಮ-ಸಮಾಜದ ಅಡಿಪಾಯವನ್ನು ನಿರ್ಮಿಸುವ ಗುರಿಯಿಂದ ಹಿಂದೆ ಸರಿಯುವುದರ ಪ್ರತೀಕವಾಗಿರುವ ಈ ಪಕ್ಕಾ ಪ್ರತಿಗಾಮಿ ಶಿಕ್ಷಣ ನೀತಿಗೆ ಒಂದು ತೆರನ ಅಂಗೀಕಾರವನ್ನು ಪ್ರಜ್ಞಾವಂತರು ಸೂಚಿಸಿರುವುದು ಒಂದು ವಿಚಿತ್ರ ವಿದ್ಯಮಾನವೇ ಸರಿ.

ಎಲ್ಲಕ್ಕಿಂತ ಹೆಚ್ಚಾಗಿ, ಈ ಹಿಮ್ಮುಖ ಚಲನೆಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ವಂಚಿತ ಸಮುದಾಯಗಳನ್ನು ಶಿಕ್ಷಣದ ವ್ಯಾಪ್ತಿಯಿಂದ ಹೊರಗಿಡುವ ರೂಪವನ್ನು ಪಡೆಯುತ್ತದೆ. ಸಾಮಾಜಿಕ ತುಳಿತಕ್ಕೆ ಒಳಗಾದವರಿಗೆ ಮೀಸಲಾತಿ ನೀಡುವ ಅಥವಾ ನ್ಯಾಯ ಒದಗಿಸಿಕೊಡುವ ಸಕಾರಾತ್ಮಕ ಕ್ರಮಗಳ ಯಾವ ಪ್ರಸ್ತಾಪವೂ ಹೊಸ ಶಿಕ್ಷಣ ನೀತಿಯಲ್ಲಿಲ್ಲ. ಕೇಂದ್ರ ಸರ್ಕಾರದ ಮೂಗಿನ ಕೆಳಗೆ ನೇರವಾಗಿ ಕಾರ್ಯನಿರ್ವಹಿಸುತ್ತಿರುವ ಜೆಎನ್‌ಯು ನಂತಹ ವಿಶ್ವವಿದ್ಯಾಲಯಗಳಲ್ಲಿ ಕೇಂದ್ರ ಸರ್ಕಾರದ ಸ್ಪಷ್ಟ ಬೆಂಬಲದಿಂದ ಮೀಸಲಾತಿಯನ್ನು ಸ್ವಲ್ಪವೂ ಸದ್ದಿಲ್ಲದೆ ಸಮಾಧಿ ಮಾಡಿರುವುದನ್ನು ಗಮನಿಸಿದರೆ, ದಲಿತ ಮತ್ತು ಒಬಿಸಿ ಗುಂಪುಗಳಿಗೆ ಸೇರಿದ ವಿದ್ಯಾರ್ಥಿಗಳನ್ನು ಶಿಕ್ಷಣದ ವ್ಯಾಪ್ತಿಯಿಂದ ಹೊರಗಿಡುವ ಪ್ರವೃತ್ತಿಯು ಗಮನ ಸೆಳೆಯುತ್ತದೆ.

ಇಲ್ಲಿ ಹೊರಗಿಡುವ ಇನ್ನೊಂದು ಅಂಶವನ್ನು ಸೇರಿಸಲಾಗಿದೆ. ಹೊಸ ಶಿಕ್ಷಣ ನೀತಿಯು ಶಿಕ್ಷಣದ ಖಾಸಗೀಕರಣವನ್ನು ಉತ್ತೇಜಿಸುವ ಮೂಲಕ ಬಡ ವಿದ್ಯಾರ್ಥಿಗಳನ್ನು ಹೊರಗಿಡುತ್ತದೆ. ಆರ್ಥಿಕ ಸ್ವಾಯತ್ತತೆಯೂ ಸೇರಿದಂತೆ ಕಾಲೇಜುಗಳಿಗೆ ನೀಡುವ "ಸ್ವಾಯತ್ತತೆ"ಯ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಶುಲ್ಕ ವಿಧಿಸಿ ಈ ಕಾಲೇಜುಗಳನ್ನು ನಡೆಸುವ ಖಾಸಗಿ ವಿದ್ಯಾ ಸಂಸ್ಥೆಗಳು ಹಣ ಗಳಿಕೆಯ ಕೇಂದ್ರಗಳಾಗಿ ಮಾರ್ಪಡುತ್ತವೆ. ಇಂತಹ ಕ್ರಮದಿಂದ ಶೋಷಿತ ಜಾತಿಗಳಿಗೆ ಸೇರಿದ ಮತ್ತು ಬಡ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಶಿಕ್ಷಣವು ಗಗನ ಕುಸುಮವಾಗುವುದು ಖಚಿತ.

ಶ್ರೀಮಂತ ಕುಟುಂಬದ ವಿದ್ಯಾರ್ಥಿಗಳು ಕೊಡುವ ದೊಡ್ಡ ಮೊತ್ತದ ಶುಲ್ಕದಲ್ಲಿ ಒಂದು ಭಾಗವನ್ನು ಬಳಸಿಕೊಂಡು ಬಡ ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ವಿದ್ಯಾರ್ಥಿ ವೇತನಗಳನ್ನು ಕಲ್ಪಿಸಲಾಗುವುದು ಎಂಬುದಾಗಿ ಈ ಶಿಕ್ಷಣ ನೀತಿಯ ಪ್ರತಿಪಾದಕರು ವಾದಿಸಬಹುದು. ಆದರೆ, ಇಂತಹ ಒಂದು ಯೋಜನೆಯನ್ನು ಜಾರಿಗೊಳಿಸಬಹುದು ಎಂದಾದರೆ, ಅದಕ್ಕೆ ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಲು ವಿದ್ಯಾ ಸಂಸ್ಥೆಗಳು ಬಡವರಲ್ಲದವರ ಕುಟುಂಬಗಳ ವಿದ್ಯಾರ್ಥಿಗಳ ಮೇಲೆ ಒಂದು ಬಲು ದುಬಾರಿ ಶುಲ್ಕವನ್ನು ವಿಧಿಸಲೇಬೇಕಾಗುತ್ತದೆ. ಇದು ವಿದ್ಯಾರ್ಥಿಗಳಲ್ಲಿ ಒಂದು ಸಾಮಾಜಿಕ ಬಿರುಕನ್ನು ಸೃಷ್ಟಿಸುತ್ತದೆ ("ನಾನು ತೆರುವ ಶುಲ್ಕದಿಂದ ನಿನಗೆ ಶಿಕ್ಷಣ ಲಭಿಸುತ್ತಿದೆ") ಮತ್ತು ಸಹಪಾಠಿಗಳ ನಡುವಣ ಸಂಬಂಧವನ್ನು ಹಾಳುಗೆಡವುತ್ತದೆ. ನವ ಉದಾರವಾದದ ಪರಿಧಿಯೊಳಗೆ ಕಾರ್ಯನಿರ್ವಹಿಸುತ್ತಿರುವ ಹೊಸ ಶಿಕ್ಷಣ ನೀತಿಯು, ಶಿಕ್ಷಣಕ್ಕೆ ತಗಲುವ ಇಡೀ ವೆಚ್ಚವನ್ನು ಮತ್ತು ವಿದ್ಯಾರ್ಥಿವೇತನಗಳನ್ನು ಸರ್ಕಾರವೇ ಭರಿಸಬೇಕು ಎಂಬ ನೀತಿ-ನಿಲುವಿನಿಂದ ದೂರ ಸರಿಯುತ್ತಿದೆ. ಆದ್ದರಿಂದ, ಅಸಂಖ್ಯ ಧನಹೀನ ವಿದ್ಯಾರ್ಥಿಗಳು ಕಲಿಕೆಯಿಂದ ಸಂಪೂರ್ಣವಾಗಿ ಹೊರಗುಳಿಯುತ್ತಾರೆ ಅಥವಾ ಎರಡನೆಯ ದರ್ಜೆಯ ವಿದ್ಯಾರ್ಥಿಗಳಾಗಿಯೇ ಉಳಿಯುತ್ತಾರೆ. ಬಡ ವಿದ್ಯಾರ್ಥಿಗಳು ಶಾಲೆ ತೊರೆಯುವವರೆಗೂ ಅವರನ್ನು ಶ್ರೀಮಂತ ವಿದ್ಯಾರ್ಥಿಗಳು ಲೇವಡಿ ಮಾಡುತ್ತಾರೆ.

ಕುತೂಹಲಕರವಾಗಿ ಕಾಣುವ ಒಂದು ಅಂಶವೆಂದರೆ, ಪ್ರಸ್ತುತ ಹೊಸ ಶಿಕ್ಷಣ ನೀತಿಯ ಬಗ್ಗೆ 2019ರಲ್ಲಿ ಪ್ರಕಟಿಸಿದ್ದ ಶಿಕ್ಷಣ ನೀತಿಯ ಕರಡು ದಸ್ತಾವೇಜಿನಲ್ಲಿ, ಖಾಸಗಿ ದಾನ-ದತ್ತಿಗಳಿಂದ ಕೂಡಿಲ್ಲದ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಅಸಮ್ಮತಿ ವ್ಯಕ್ತಪಡಿಸಿದ್ದ ವಾಕ್ಯಗಳಿದ್ದವು. ಆದರೆ, ಹೊಸ ಶಿಕ್ಷಣ ನೀತಿಯ ದಸ್ತಾವೇಜಿನ ಈ ಆಖೈರು ಆವೃತ್ತಿಯಲ್ಲಿ ಆ ವಾಕ್ಯಗಳನ್ನು ತೆಗೆದುಹಾಕಲಾಗಿದೆ. ಅದೇ ರೀತಿಯಲ್ಲಿ ಹೊಸ ಶಿಕ್ಷಣ ನೀತಿಯ ಆಖೈರು ಎಂದು ಸರ್ಕಾರ ಪ್ರಕಟಣೆ ಮಾಡಿದ್ದ ದಸ್ತಾವೇಜಿನಲ್ಲಿ ಶಿಕ್ಷಣದ ಹಕ್ಕಿನ ಬಗ್ಗೆ ಉಲ್ಲೇಖಗಳಿದ್ದವು. ಆದರೆ,ಸರ್ಕಾರದ ವೆಬ್ ಸೈಟ್‌ನಲ್ಲಿ ಹಾಕಿರುವ ಆವೃತ್ತಿಯಲ್ಲಿ ಶಿಕ್ಷಣದ ಹಕ್ಕಿನ ಬಗ್ಗೆ ಇದ್ದ ಅಂಶಗಳನ್ನು ತೆಗೆದುಹಾಕಲಾಗಿದೆ.

ವಾಸ್ತವವಾಗಿ, ಹೊಸ ಶಿಕ್ಷಣ ನೀತಿಯು ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುವಿಕೆಗೆ ಸಂಬಂಧಿಸಿ ಒಂದು ಯೋಜನೆಯನ್ನು ರೂಪಿಸಿದೆ. ಕೆಲವು ಅನಿವಾರ್ಯ ಕಾರಣಗಳಿಂದ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುವುದು ನಮ್ಮ ಕಣ್ಣೆದುರಿನ ವಾಸ್ತವವೇ. ಅದೊಂದು ಪ್ರತ್ಯೇಕ ವಿಷಯ. ಆದರೆ, ಶಾಲೆಯಿಂದ ಹೊರಗುಳಿಯುವ ದುರದೃಷ್ಟಕರ ಸಂಗತಿಯನ್ನು ಒಂದು ಸುಂದರವಾದ ರೀತಿಯಲ್ಲಿ ಬಣ್ಣಿಸಿ (flexibility"ನಮ್ಯತೆ" ಎಂದು ಕರೆಯಲಾಗಿದೆ) ಅಂತಹ ವಿದ್ಯಾರ್ಥಿಗಳಿಗೆ ಒಂದು ಯೋಗ್ಯತಾ ಪತ್ರ ಹಂಚುವ ಯೋಜನೆಯನ್ನು ರೂಪಿಸಲಾಗಿದೆ. ಅದರ ಪ್ರಕಾರವಾಗಿ, ನಾಲ್ಕು ವರ್ಷಗಳ ಪದವಿ ಪೂರ್ವ ಕೋರ್ಸ್ ಆರಂಭವಾಗಲಿದೆ. ಇಂತಹ ಯೋಜನೆಗೆ ಕಾರಣಗಳೇನು ಎಂಬುದನ್ನು ಸ್ಪಷ್ಟಪಡಿಸಿಲ್ಲ. ಯುಪಿಎ-2 ರ ಕಾಲದಲ್ಲಿ, ಕಪಿಲ್ ಸಿಬಲ್ (ಅಂದಿನ ಶಿಕ್ಷಣ ಸಚಿವರು) ದೆಹಲಿ ವಿಶ್ವವಿದ್ಯಾಲಯದಲ್ಲಿ ಇಂತಹ ಒಂದು ಕೋರ್ಸ್‌ನ್ನು ಜಾರಿಗೆ ತಂದಾಗ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಮೋದಿ ಸರಕಾರದ ಮೊದಲ ಅವಧಿಯಲ್ಲಿ ಶಿಕ್ಷಣ ಸಚಿವರಾಗಿದ್ದ ಸ್ಮೃತಿ ಇರಾನಿ ಅದನ್ನು ಬದಲಾಯಿಸಿದರು. ಆದರೆ, ಈಗ ಅದನ್ನೇ ಇಡೀ ದೇಶದಲ್ಲಿ ಜಾರಿ ಮಾಡಲಾಗಿದೆ! ಈ ಕಾರ್ಯಕ್ರಮದ ಪ್ರಕಾರ, ವಿದ್ಯಾರ್ಥಿಗಳು ಮೊದಲ ವರ್ಷದ ನಂತರ ಒಂದು ಸರ್ಟಿಫಿಕೇಟ್ ಮತ್ತು ಎರಡನೇ ವರ್ಷದ ನಂತರ ಒಂದು ಡಿಪ್ಲೊಮಾ ಮತ್ತು ಅದರ ನಂತರ ಬೇಕಾದರೆ ಬಿಡಬಹುದು. ಆದರೆ, ಪ್ರತ್ಯೇಕವಾಗಿ ಒಂದು ವರ್ಷದ ಅಥವಾ ಎರಡು ವರ್ಷಗಳ ಅವಧಿಯ ಯಾವುದೇ ಕೋರ್ಸ್‌ಗಳ ವ್ಯವಸ್ಥೆ ಇಲ್ಲ. ಆದ್ದರಿಂದ, ಒಂದು ಅಥವಾ ಎರಡು ವರ್ಷಗಳ ಅವಧಿಯ ಕೋರ್ಸ್ ಮುಗಿದ ನಂತರ ಈ ನಾಲ್ಕು ವರ್ಷಗಳ ಕೋರ್ಸ್‌ನ ಮಧ್ಯದಲ್ಲಿ ಬಿಡುತ್ತಾರೆ ಎಂದಾಗುತ್ತದೆ.

ಒಂದು ಸಮ-ಸಮಾಜದ ಅಡಿಪಾಯವನ್ನು ನಿರ್ಮಿಸುವ ಗುರಿಯಿಂದ ಹಿಂದೆ ಸರಿಯುವುದರ ಪ್ರತೀಕವಾಗಿರುವ ಈ ಪಕ್ಕಾ ಪ್ರತಿಗಾಮಿ ಶಿಕ್ಷಣ ನೀತಿ ಒಂದು ತೆರನ ಅಂಗೀಕಾರವನ್ನು ಪ್ರಜ್ಞಾವಂತರು ಸೂಚಿಸಿರುವುದು ಒಂದು ವಿಚಿತ್ರ ವಿದ್ಯಮಾನವೇ ಸರಿ.

ಈ ರೀತಿಯಲ್ಲಿ ಹೊಸ ಶಿಕ್ಷಣ ನೀತಿಯು ವಿದ್ಯಾರ್ಥಿಗಳು ಶಾಲೆ ಬಿಡುವುದನ್ನು' (dropping out) ಮಾನ್ಯಗೊಳಿಸುತ್ತದೆ. ಒಂದೇ ವ್ಯತ್ಯಾಸವೆಂದರೆ ಅವರನ್ನು ಸಮಾಧಾನ ಪಡಿಸುವ ರೀತಿಯಲ್ಲಿ ಎಂಥದ್ದೊ ಒಂದು ಸರ್ಟಿಫಿಕೇಟ್ ಅಥವಾ ಡಿಪ್ಲೊಮಾ ಎನ್ನುವ ಕಾಗದದ ಒಂದು ಚೂರನ್ನು ಕೊಡುತ್ತದೆ, ಬೇರೆ ಏನೂ ಇಲ್ಲ. ಈ ಕಾಗದದ ತುಂಡುಗಳು ಅವುಗಳನ್ನು ಹೊಂದಿರುವವರಿಗೆ ಯಾವುದೇ ಯೋಗ್ಯ ಉದ್ಯೋಗವನ್ನು ಕೇಳುವ ಅರ್ಹತೆ ನೀಡುವುದಿಲ್ಲ; ಅವರಿಗೆ ಅದರಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಇಂತಹ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಒಂದೆರಡು ವರ್ಷ ಕಳೆದುದನ್ನು ಬಿಟ್ಟರೆ ಬೇರೆ ಯಾವ ಭಾಗ್ಯವೂ ಇಲ್ಲ. ಅತ್ತ ಸಾರ್ಥಕ ಶಿಕ್ಷಣವೂ ಇಲ್ಲ, ಇತ್ತ ಉದ್ಯೋಗವೂ ಇಲ್ಲ. ಕೊನೆಗೆ "ಕಾಲೇಜು ಜೀವನ"ದ ಮಧುರ ಅನುಭವವೂ ಇಲ್ಲದಂತಾಗುತ್ತದೆ. ಆದ್ದರಿಂದ, ಹೊಸ ಶಿಕ್ಷಣ ನೀತಿಯ ಪರಿಕಲ್ಪನೆಯು ಕೇವಲ ಒಂದು ಕನಿಷ್ಠ ಶಿಕ್ಷಣ ಮಟ್ಟದ ವಿದ್ಯಾವಂತ ಸೈನ್ಯವನ್ನು ಕಟ್ಟುವಲ್ಲಿ ಪರಿಣಮಿಸಿ, ಅವರಿಗೆ ತಾವು "ಸುಶಿಕ್ಷಿತ" ಎಂಬ ಭ್ರಮೆಯನ್ನು ಉಂಟುಮಾಡುತ್ತದೆ. ಈ ಸೇನೆಯಲ್ಲಿರುವವರು, ಸಾಮಾನ್ಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಸೇರಿದವರೇ ಆಗಿರುತ್ತಾರೆ.

ಈ ರೀತಿಯ ಶಿಕ್ಷಣವು ಸ್ವತಂತ್ರ ಭಾರತವು ಕಾಣಬಯಸಿದ್ದ ಸಮಾಜದ ಏಳ್ಗೆಯ ಕನಸಿನ ಅವಹೇಳನವಾಗುತ್ತದೆ ಮತ್ತು ದೇಶದ ಹೊಸ ಜಾಗೃತಿಯ ಭಾಗವಾಗಿ ಎಲ್ಲರಿಗೂ ಶಿಕ್ಷಣ ಲಭ್ಯವಾಗುವಂತೆ ಮಾಡುವ ಸಾಮಾಜಿಕ ದೃಷ್ಟಿಕೋನದ ಒಂದು ವಿಡಂಬನೆಯಾಗುತ್ತದೆ. ಅದೇ ರೀತಿಯಲ್ಲಿ ವಿದ್ಯಾರ್ಥಿಗಳು ಒಂದು ಕನಿಷ್ಠ ವರ್ಷಗಳ ಮಟ್ಟದ ಸಾಮಾನ್ಯ ಶಿಕ್ಷಣವನ್ನು ಪಡೆಯುವ ಮೊದಲೇ ಅವರನ್ನು ಜೀವನ ನಿರ್ವಹಣೆಯ-ಉದ್ಯೋಗ ಆಧಾರಿತ ಕೋರ್ಸ್‌ಗಳಿಗೆ ಅಥವಾ ಅವರಿಗೆ ಒಗ್ಗುವ ವೃತ್ತಿಯ ತರಬೇತಿಗೆ ತಳ್ಳುವ ನೀತಿಯು, ಯುವ ಜನರ ಮೇಲೆ ತನಗಿರುವ ಜವಾಬ್ದಾರಿಯಿಂದ ಕೈ ತೊಳೆದುಕೊಳ್ಳಲು ಬಯಸುವ ಸರ್ಕಾರದ ತೀರ್ಮಾನವನ್ನು ಬಹಿರಂಗಪಡಿಸುತ್ತದೆ. ಈ ನೀತಿಯು, ಗಣರಾಜ್ಯದ ಪ್ರಜೆಗಳಾಗಿ ರೂಪುಗೊಳ್ಳುವಂತಹ ಶಿಕ್ಷಣವನ್ನೂ ಒದಗಿಸುವುದಿಲ್ಲ ಅಥವಾ ಒಂದು ಸರಿಯಾದ ಉದ್ಯೋಗವನ್ನೂ ಒದಗಿಸುವುದಿಲ್ಲ. ವಿದ್ಯಾರ್ಥಿಗಳಿಗೆ ಅತ್ಯಲ್ಪ ಪ್ರಮಾಣದ ತರಬೇತಿ ಕೊಟ್ಟು ಅವರನ್ನು ಏಕಾಏಕಿಯಾಗಿ ಮಾರುಕಟ್ಟೆಗೆ ಎಸೆಯುತ್ತದೆ. ನಂತರ ಅವರನ್ನು ಅವರವರ ಪಾಡಿಗೇ ಬಿಡುತ್ತದೆ.

ವಿದ್ಯಾರ್ಥಿಗಳು ಕಲಿಕೆಯಿಂದಲೇ ಹೊರಗುಳಿಯುವ ಸಂದರ್ಭದಲ್ಲಿ ಕಲಿಕೆಯ ಮೊದಲ ಕೆಲವು ವರ್ಷಗಳಲ್ಲಿ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಬೇಕು ಎಂದು ಹೇಳುವ ಹೊಸ ಶಿಕ್ಷಣ ನೀತಿಯ ನಿಬಂಧನೆಯು ಒಂದು ವಿಡಂಬನೆಯಾಗಿ ಕಾಣುತ್ತದೆ. ಮಾತೃಭಾಷೆಯಲ್ಲಿ ಶಿಕ್ಷಣ ಎಂದರೆ ಅವರು ಸೇರಿದ ರಾಜ್ಯದ ಸ್ಥಳೀಯ ಭಾಷೆಯಾಗಿರಬಹುದು ಅಥವಾ ಬೇರೆಯ ಭಾಷೆಯೇ ಇರಬಹುದು ಎಂಬ ವಿಚಾರವು ಸ್ವಾಗತಾರ್ಹವೇ. ಆದರೆ, ಮಾತೃಭಾಷೆಯ ಶಿಕ್ಷಣಕ್ಕೆ ಪೂರಕ ಕ್ರಮವಾಗಿ ಒಂದು ಭರವಸೆಯನ್ನು ಕೊಡಬೇಕಾಗುತ್ತದೆ. ಮಾತೃಭಾಷೆಯಲ್ಲಿ ಶಿಕ್ಷಣ ಪಡೆದ ಕಾರಣದಿಂದಾಗಿ ಮುಂದೆ ಶೈಕ್ಷಣಿಕ ವೃತ್ತಿಜೀವನದಲ್ಲಿ ಕಲಿಕೆಗೆ ತೊಂದರೆಯಾಗದಂತೆ ಅವರಿಗೆ ಸೂಕ್ತ ಮೀಸಲಾತಿ ಒದಗಿಸುವ ಭರವಸೆಯನ್ನು ಕೊಡಬೇಕಾಗುತ್ತದೆ. ಅಂತಹ ಮೀಸಲಾತಿ ಇಲ್ಲದ ಸಂದರ್ಭದಲ್ಲಿ ಮಾತೃಭಾಷಾ ಮಾಧ್ಯಮದಲ್ಲಿ ಮಾಡುವ ಕಲಿಕೆಯು, ಅವರಿಗೆ ಮುಂದೆ ಹೋಗಲು ಅವಕಾಶ ದೊರಕದೆ ಅವರು ಕೊಳಗೇರಿಯಲ್ಲಿಯೇ ಕೊಳೆಯುವಂತಾಗುತ್ತದೆ.

ಹೊಸ ಶಿಕ್ಷಣ ನೀತಿಯು ವಸ್ತುತಃ ವಿದ್ಯಾರ್ಥಿಗಳನ್ನು ಗಣ್ಯರು ಮತ್ತು ಗಣ್ಯರಲ್ಲದವರು ಎನ್ನುವ ರೀತಿಯಲ್ಲಿ ಇಬ್ಭಾಗ ಮಾಡುವುದು ಮಾತ್ರವೇ ಖಂಡನೀಯವಲ್ಲ. ಈ ನೀತಿಯ ತಾತ್ವಿಕತೆಯೇ ಇಂತಹ ದ್ವಿಭಜನೆಯನ್ನು ಜನರು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಈ ನೀತಿಯ ಸ್ಪಷ್ಟ ಉದ್ದೇಶಗಳಲ್ಲಿ ಒಂದು ಏನೆಂದರೆ, ವಿದ್ಯಾರ್ಥಿಗಳು ತಾವು ಭಾರತೀಯರು ಎಂಬುದರ ಬಗ್ಗೆ ಹೆಮ್ಮೆ ಪಡುವಂತೆ ಮಾಡುವುದು. "ಅಸ್ಪೃಶ್ಯತೆ" ಯಂತಹ ಅಮಾನವೀಯ ಆಚರಣೆಗಳಿಂದ ಗುರುತಿಸಲ್ಪಡುವ ನಾಗರಿಕತೆಯ ಭಾಗವಾಗಿರುವುದರ ಬಗ್ಗೆ ಯಾರೂ ಹೆಮ್ಮೆಪಡಲಾರದ ಕಾರಣದಿಂದ, ಪಠ್ಯಕ್ರಮವು ಸಹಜವಾಗಿಯೇ ಅಂತಹ ಆಚರಣೆಗಳನ್ನು ಕಡೆಗಣಿಸಿ ಭಾರತೀಯ ನಾಗರಿಕತೆಯ "ಅಂದಗೊಳಿಸಿದ" ಚಿತ್ರಣವನ್ನು ಪ್ರಸ್ತುತಪಡಿಸುತ್ತದೆ.

ಅದೇ ರೀತಿಯಲ್ಲಿ ನಿಷ್ಕಾಮ ಕರ್ಮವು ಒಬ್ಬ ವ್ಯಕ್ತಿಯು ವೈಯಕ್ತಿಕವಾಗಿ ಅನುಸರಿಸುವ ಜೀವನ ಕ್ರಮವು ಎಂಥದ್ದು ಎಂಬುದನ್ನು ತಿಳಿಸುತ್ತದೆ. ಆದರೆ ಅದನ್ನೇ ಪ್ರತಿ ವಿದ್ಯಾರ್ಥಿಗೂ ಪಠ್ಯಕ್ರಮದ ಒಂದು ಭಾಗವಾಗಿ ಕಲಿಸಲಾಗುತ್ತದೆ ಎಂದಾದರೆ, ಅದು ಅನಿವಾರ್ಯವಾಗಿ ಶೋಷಣೆಯನ್ನು ಕಡೆಗಣಿಸುತ್ತದೆ.

ಪುಟ 13 ನೋಡಿ



ಶತಮಾನೋತ್ಸವ ಲೇಖನಮಾಲೆ-39

ಭಾಷಾವಾರು ರಾಜ್ಯಗಳ ರಚನೆ

"ತಿಕ್ಕಾಟಗಳನ್ನು ಪೋಷಿಸುವ ಮತ್ತು ನಮ್ಮ ಪ್ರಜಾಸತ್ತಾತ್ಮಕ ಚಳುವಳಿಯನ್ನು ಛಿದ್ರಗೊಳಿಸುವ ಉದ್ದೇಶಪೂರ್ವಕ ಪ್ರಯತ್ನಗಳ ವಿರುದ್ಧವೇ ನಮ್ಮ ದೇಶದಲ್ಲಿನ ರಾಷ್ಟ್ರೀಯ ಚಳುವಳಿಯು ಭಾಷಾವಾರು ಪ್ರಾಂತಗಳ ರಚನೆಗಾಗಿ ಬೇಡಿಕೆಯನ್ನು ಎತ್ತಿತು. ಆ ಬೇಡಿಕೆಯನ್ನು ಎತ್ತಿದ್ದು ಭಾರತದ ಏಕತೆಯನ್ನು ಛಿದ್ರಗೊಳಿಸುವ ಉದ್ದೇಶದಿಂದಾಗಿರದೇ, ಅದು ಇಡೀ ನಮ್ಮ ಜನಸಮುದಾಯವನ್ನು ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನದ ಎಲ್ಲಾ ಆಯಾಮಗಳಲ್ಲೂ ಭಾಗವಹಿಸುವಂತೆ ಮಾಡಿ ಆ ಮೂಲಕ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಪಡಿಸುವುದಕ್ಕಾಗಿಯೇ ಆಗಿದೆ.. .. ಭಾಷಾವಾರು ರಾಜ್ಯಗಳಗಾಗಿನ ನಮ್ಮ ಜನರ ಹೋರಾಟವು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿನ ನಮ್ಮ ಹೋರಾಟದ ಅವಿಭಾಜ್ಯ ಅಂಗವಾಗಿದೆ.. .. ಬ್ರಿಟಿಷರನ್ನು ಹೊರ ಹಾಕಿದ ಆಗಸ್ಟ್ 1947ರಿಂದ, ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕಿನ ಎಲ್ಲಾ ಆಯಾಮಗಳಲ್ಲೂ ಪೂರ್ಣವಾಗಿ ಭಾಗವಹಿಸಲು ತಮಗೆ ಹಕ್ಕು ಮತ್ತು ಅವಕಾಶಗಳು ಇರಬೇಕು ಎಂದು ಭಾರತದ ಜನರು ಆಗ್ರಹಪೂರ್ವಕವಾಗಿ ಹಂಬಲಿಸುವುದು ಸಹಜವೇ ಆಗಿದೆ" ಭಾರತ ಕಮ್ಯುನಿಸ್ಟ್ ಪಕ್ಷ 'ರಾಜ್ಯಗಳ ಪುನರ್ ವಿಂಗಡನಾ ಆಯೋಗ(ಎಸ್.ಆರ್.ಸಿ.)'ಕ್ಕೆ ಜೂನ್ 1954 ರಲ್ಲಿ ಸಲ್ಲಿಸಿದ ಮನವಿ ಪತ್ರದಲ್ಲಿ ಹೇಳಿತ್ತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

ಭಾಷಾವಾರು ರಾಜ್ಯಗಳ ರಚನೆಗಾಗಿನ ಹೋರಾಟದಲ್ಲಿ ಕಮ್ಯುನಿಸ್ಟರು ಪಥಪ್ರದರ್ಶಕ ಪಾತ್ರವನ್ನು ವಹಿಸಿದ್ದರು. ವಿಶಾಲಾಂಧ್ರ, ಐಕ್ಯ ಕೇರಳ ರಚನೆಗಾಗಿನ ಹೋರಾಟದ ಹೊರತಾಗಿ ಮಹಾರಾಷ್ಟ್ರ ರಚನೆಯಲ್ಲಿ ನಾಯಕತ್ವ ವಹಿಸಿದ್ದ 'ಸಂಯುಕ್ತ ಮಹಾರಾಷ್ಟ್ರ ಸಮಿತಿ'ಯಲ್ಲಿ ಅನೇಕ ಕಮ್ಯುನಿಸ್ಟರು ಮತ್ತು ಎಡ ಪಂಥೀಯ ಮುಖಂಡರು ಪ್ರಮುಖ ಪಾತ್ರ ವಹಿಸಿದ್ದರು. ಮತ್ತೊಂದೆಡೆ, ಆರ್.ಎಸ್.ಎಸ್. ಮತ್ತು ಅದರ ಮುಖ್ಯಸ್ಥ ಗೋಲ್ವಾಲ್ಕರ್ ಭಾಷಾವಾರು ಪ್ರಾಂತಗಳ ರಚನೆಯನ್ನು ವಿರೋಧಿಸಿದರು. 1956 ರಲ್ಲಿ, ರಾಜ್ಯಗಳ ಪುನರ್‌ವಿಂಗಡನಾ ಆಯೋಗ(ಎಸ್. ಆರ್.ಸಿ.) ಭಾಷಾವಾರು ರಾಜ್ಯಗಳ ರಚನೆಗೆ ಶಿಫಾರಸು ಮಾಡಿತು. ಆದರೆ ಮಹಾರಾಷ್ಟ್ರ- ಗುಜರಾತಿಗೆ ದ್ವಿಭಾಷಾ ರಾಜ್ಯದ ಶಿಫಾರಸು ಮಾಡಿತು. ಭಾರತ ಸರ್ಕಾರವು ಮುಂಬಯಿಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಿತು. ಭಾರಿ ಪ್ರತಿಭಟನೆಗಳು ಆ ಇಡೀ ಪ್ರದೇಶವನ್ನೇ ನಡುಗಿಸಿದವು ಮತ್ತು ಕಮ್ಯುನಿಸ್ಟರು ದೇಶದ ಇತರೆಡೆಗಳಲ್ಲಿ ಕೂಡ ಸೌಹಾರ್ದ ಚಳುವಳಿಯನ್ನು ಕಟ್ಟಿದರು. ಮಹಾರಾಷ್ಟ್ರದಲ್ಲಿ, ಆ ಹೋರಾಟದ ಸಂದರ್ಭದಲ್ಲಿ ಭದ್ರತಾ ಪಡೆಗಳು 106 ಜನರನ್ನು ಗುಂಡು ಹೊಡೆದು ಸಾಯಿಸಿದವು. ಅಂತಿಮವಾಗಿ, ಕೇಂದ್ರ ಸರ್ಕಾರವು ಬೇಡಿಕೆಯನ್ನು ಒಪ್ಪಲೇಬೇಕಾಯಿತು, ಮೇ 1, 1960ರಂದು ಮುಂಬಯಿಯನ್ನು ರಾಜಧಾನಿಯನ್ನಾಗಿ ಮಾಡಿ ಮರಾಠಿ ಮಾತನಾಡುವ ರಾಜ್ಯವಾಗಿ ಮಹಾರಾಷ್ಟವನ್ನು, ಮತ್ತು ಗುಜರಾತಿ ಮಾತನಾಡುವ ರಾಜ್ಯವಾಗಿ ಗುಜರಾತನ್ನು ರಚಿಸಲಾಯಿತು.

ಈ ವಿಷಯದಲ್ಲಿ ಕಮ್ಯುನಿಸ್ಟ್ ಪಕ್ಷದ ತಿಳುವಳಿಕೆಯನ್ನು ರಾಜ್ಯಗಳ ಪುನರ್ ವಿಂಗಡನಾ ಆಯೋಗಕ್ಕೆ ಜೂನ್ 1954 ರಲ್ಲಿ ಸಲ್ಲಿಸಲಾದ ಮನವಿ ಪತ್ರದಲ್ಲಿ ಸವಿಸ್ತಾರವಾಗಿ ನೀಡಲಾಗಿದೆ. ಅದರ ಕೆಲವು ಅಂಶಗಳು ಇಲ್ಲಿವೆ:

"ರಾಜ್ಯಗಳ ಪುನರ್ ವಿಂಗಡನೆಯ ಕುರಿತು ಪರಿಶೀಲನೆ ನಡೆಸಿ ವರದಿ ಮಾಡಲು ಭಾರತ ಸರ್ಕಾರವು ಒಂದು ಆಯೋಗವನ್ನು ಕೊನೆಗೂ ನೇಮಿಸಿರುವುದು ನಮಗೆ ಸಂತಸ ತಂದಿದೆ. ಭಾಷಾವಾರು ರಾಜ್ಯಗಳ ರಚನೆಗಾಗಿ ದೇಶಾದ್ಯಂತ ನಡೆಯುತ್ತಿರುವ ಚಳುವಳಿಯನ್ನು ಇನ್ನು ಮುಂದೆಯೂ ಕಡೆಗಣಿಸುವುದು ಯುಕ್ತವಲ್ಲ ಎಂಬುದಕ್ಕೆ ಭಾರತ ಸರ್ಕಾರ ಮನ್ನಣೆ ನೀಡಿದಂತೆ ಎಂಬುದು ನಮ್ಮ ಅಭಿಪ್ರಾಯ.

"ಆದಾಗ್ಯೂ, ಭಾಷಾವಾರು ಮತ್ತು ಸಾಂಸ್ಕೃತಿಕ ಸಾಮರಸ್ಯವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳದೆ, ಅದರ ಆರ್ಥಿಕ ಕಾರ್ಯಸಾಧ್ಯತೆ, ಆಡಳಿತಾತ್ಮಕ ಅನುಕೂಲತೆಗಳನ್ನೂ, ಮತ್ತು ರಾಷ್ಟ್ರೀಯ ಐಕ್ಯತೆ ಹಾಗೂ ಭದ್ರತೆಯನ್ನೂ ಪರಿಶೀಲಿಸುತ್ತದೆ ಎಂದು ಪ್ರಧಾನ ಮಂತ್ರಿಗಳು, ಆಯೋಗವನ್ನು ನೇಮಿಸುವುದಾಗಿ ಪ್ರಕಟಿಸುತ್ತಾ ಸಂಸತ್ತಿನಲ್ಲಿ ನೀಡಿದ ಹೇಳಿಕೆಯು ಸಹಜವಾಗಿಯೇ ಸಾರ್ವಜನಕರಲ್ಲಿ ಅನುಮಾನವನ್ನು ಸೃಷ್ಟಿಸಿತು; ಭಾಷಾವಾರು ರಾಜ್ಯಗಳ ರಚನೆಯ ಬೇಡಿಕೆಯನ್ನು, ಕೆಲವು ಪ್ರಕರಣಗಳಲ್ಲಿಯಾದರೂ, 'ನಿರಾಕರಿಸಲು ಒಂದು ಕಾರಣ ಹುಡುಕಲು' ಈ ಆಯೋಗಗ ಎಂಬ ಸಂದೇಹ ಜನರಲ್ಲಿ ಹುಟ್ಟಿತು.

"ಪ್ರಸ್ತುತ ಭಾರತದಲ್ಲಿನ ರಾಜ್ಯಗಳ ಹಂಚಿಕೆಗೆ ಯಾವುದೇ ವಿವೇಚನಾತ್ಮಕ ಆಧಾರವಿರಲಿಲ್ಲ ಎಂಬ ಸಂಗತಿ ಎಲ್ಲರಿಗೂ ತಿಳಿದೇ ಇದೆ. ಪ್ರಧಾನಿಯವರು ತಾವೇ ಹೇಳಿದಂತೆ, ಇವತ್ತಿನ ವ್ಯವಸ್ಥೆಯು 'ಬಹುಮಟ್ಟಿಗೆ ಐತಿಹಾಸಿಕ ಪ್ರಕ್ರಿಯೆಗಳ ಮತ್ತು ಭಾರತದಲ್ಲಿನ ಬ್ರಿಟಿಷ್ ಅಧಿಕಾರದ ವಿಸ್ತರಣೆ ಹಾಗೂ ಕ್ರೋಢೀಕರಣಗಳ ಪರಿಣಾಮ'. ಇದಕ್ಕೂ ಪ್ರಜಾಸತ್ತಾತ್ಮಕ ಜೀವನ ಹಾಗೂ ಆಡಳಿತವನ್ನು ಕಟ್ಟುವುದಕ್ಕೂ ಏನೇನೂ ಸಂಬಂಧವಿಲ್ಲ. ಅದು ಬ್ರಿಟಿಷರು ನಮ್ಮ ಜನ ವಿಭಾಗಗಳ ನಡುವೆ ತಿಕ್ಕಾಟಗಳನ್ನು ಉತ್ತೇಜಿಸಲು ನೆರವಾಗಿದೆಯಷ್ಟೇ, ಆ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯನ್ನು ಛಿದ್ರಗೊಳಿಸಲು ಸಹಾಯ ಮಾಡಿದೆ.

"ಇಂತಹ ತಿಕ್ಕಾಟಗಳನ್ನು ಪೋಷಿಸುವ ಮತ್ತು ನಮ್ಮ ಪ್ರಜಾಸತ್ತಾತ್ಮಕ ಚಳುವಳಿಯನ್ನು ಛಿದ್ರಗೊಳಿಸುವ ಉದ್ದೇಶಪೂರ್ವಕ ಪ್ರಯತ್ನಗಳ ವಿರುದ್ಧವೇ ನಮ್ಮ ದೇಶದಲ್ಲಿನ ರಾಷ್ಟ್ರೀಯ ಚಳುವಳಿಯು ಭಾಷಾವಾರು ಪ್ರಾಂತಗಳ ರಚನೆಯ ಬೇಡಿಕೆಯನ್ನು ಎತ್ತಿತು. ಆ ಬೇಡಿಕೆಯನ್ನು ಎತ್ತಿದ್ದು ಭಾರತದ ಏಕತೆಯನ್ನು ಛಿದ್ರಗೊಳಿಸುವ ಉದ್ದೇಶದಿಂದಾಗಿರದೇ, ಅದು ಇಡೀ ನಮ್ಮ ಜನಸಮುದಾಯವನ್ನು ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನದ ಎಲ್ಲಾ ಆಯಾಮಗಳಲ್ಲೂ ಭಾಗವಹಿಸುವಂತೆ ಮಾಡಿ ಆ ಮೂಲಕ ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಬಲಪಡಿಸುವುದಕ್ಕಾಗಿಯೇ ಆಗಿದೆ."

"ಹೀಗೆ ಭಾಷಾವಾರು ರಾಜ್ಯಗಳಿಗಾಗಿನ ನಮ್ಮ ಜನರ ಹೋರಾಟವು ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕಾಗಿನ ನಮ್ಮ ಹೋರಾಟದ ಅವಿಭಾಜ್ಯ ಅಂಗವಾಗಿದೆ. ಭಾಷಾವಾರು ರಾಜ್ಯಗಳ ರಚನೆಯು ನಮ್ಮ ಒಟ್ಟು ಜನಸಮೂಹವು ದೇಶದ ಆರ್ಥಿಕ ಹಾಗೂ ಬದುಕಿನ ಪ್ರಜಾಸತ್ತಾತ್ಮಕ ಮರುನಿರ್ಮಾಣದಲ್ಲಿ ಸಂಪೂರ್ಣವಾಗಿ ಪಾಲ್ಗೊಳ್ಳಬೇಕು ಎನ್ನುವುದರ ಪೂರ್ವಭಾವಿ ಷರತ್ತು ಎಂದು ಕಮ್ಯುನಿಸ್ಟ್ ಪಕ್ಷ ಅಭಿಪ್ರಾಯಪುತ್ತದೆ. ಅಷ್ಟೇ ಅಲ್ಲ, ಅದಿಲ್ಲದೇ ದೇಶವು ಪ್ರಗತಿ ಹಾಗೂ ಸಮೃದ್ಧಿಯ ವಿಶಾಲ ಹಾದಿಯಲ್ಲಿ ಹೋಗಲು ಸಾಧ್ಯವಿಲ್ಲ. ಅದಕ್ಕೂ ಮಿಗಿಲಾಗಿ, ವಿವಿಧ ಭಾಷೆಗಳನ್ನಾಡುವ ಎಲ್ಲಾ ಜನರ ಪ್ರಜಾಸತ್ತಾತ್ಮಕ ಸಂಸ್ಕೃತಿಯು ಪೂರ್ಣವಾಗಿ ಅರಳಲು ಮತ್ತು ಅವರ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಇದು ತೀರಾ ಅವಶ್ಯಕವಾದದ್ದು. ಪ್ರಜಾಪ್ರಭುತ್ವದ ಆಧಾರದಲ್ಲಿ ಭಾರತದ ಐಕ್ಯತೆಯನ್ನು ಕಟ್ಟುವ ಸಲುವಾಗಿ ಒಂದು ಅಚಲವಾದ ಭದ್ರ ಬುನಾದಿಯನ್ನು ಹಾಕಲೂ ಸಹ ಇದು ಅವಶ್ಯಕ; ಸಕಲ ಜನಗಳ ಸಮಾನತೆಗಾಗಿ ಒಂದು ಸಮೃದ್ಧ, ಪ್ರಗತಿಪರ ಹಾಗೂ ಪ್ರಜಾಸತ್ತಾತ್ಮಕ ಭಾರತಕ್ಕಾಗಿ ಎಲ್ಲರೂ ಸ್ವಯಂಪ್ರೇರಿತರಾಗಿ ಏಕಮನಸ್ಸಿನಿಂದ ಹೋರಾಡಲು ಕೂಡ ಅದು ಅಗತ್ಯ."

"ಬ್ರಿಟಿಷರನ್ನು ಹೊರ ಹಾಕಿದ ಆಗಸ್ಟ್ 1947ರಿಂದ, ದೇಶದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದುಕಿನ ಎಲ್ಲಾ ಆಯಾಮಗಳಲ್ಲೂ ಪೂರ್ಣವಾಗಿ ಭಾಗವಹಿಸಲು ತಮಗೆ ಹಕ್ಕು ಮತ್ತು ಅವಕಾಶಗಳು ಇರಬೇಕು ಎಂದು ಭಾರತದ ಜನರು ಆಗ್ರಹಪೂರ್ವಕವಾಗಿ ಹಂಬಲಿಸುವುದು ಸಹಜವೇ ಆಗಿದೆ. ಭಾಷಾವಾರು ರಾಜ್ಯಗಳ ರಚನೆಗಾಗಿ ಬೆಳೆಯುತ್ತಿರುವ ಹಕ್ಕೊತ್ತಾಯವು ದೇಶದಲ್ಲಿನ ಪ್ರಜಾಸತ್ತಾತ್ಮಕ ಉತ್ಕ್ರಾಂತಿಯ ಭಾಗವೇ ಆಗಿದೆ . . .

"ಈಗಿನ ಹೈದರಾಬಾದ್ ಸಂಸ್ಥಾನದ ವಿಘಟನೆ ಮಾಡದೇ ದಕ್ಷಿಣದಲ್ಲಿ ಯಾವುದೇ ಭಾಷಾವಾರು ರಾಜ್ಯದ ರಚನೆಯನ್ನು ವಿವೇಚನಾತ್ಮಕ ಆಧಾರದಲ್ಲಿ ಮಾಡಲಾಗದು ಎಂಬುದನ್ನು ಕೇಂದ್ರ ಸಮಿತಿಯು ನಮಗೆ ಮನಗಾಣಿಸಲು ಬಯಸುತ್ತದೆ.

"ರಾಜ್ಯಗಳನ್ನು ಪುನರ್‌ವಿಂಗಡಿಸುವಾಗ ಈಗಿರುವಂತೆ ಎ. ಬಿ ಮತ್ತು ಸಿ ರಾಜ್ಯಗಳು ಎಂಬ ವ್ಯತ್ಯಾಸಗಳನ್ನು ಸಂಪೂರ್ಣವಾಗಿ ರದ್ದುಮಾಡಬೇಕು ಮತ್ತು ಆ ನಿಟ್ಟಿನಲ್ಲಿ ಶಿಫಾರಸು ಮಾಡಬೇಕೆಂದು ಕೇಂದ್ರ ಸಮಿತಿಯು ಆಯೋಗವನ್ನು ಒತ್ತಾಯಿಸುತ್ತದೆ. ಭಾರತದ ಜನರು ಅನುಭೋಗಿಸುವ ಪ್ರಜಾಸತ್ತಾತ್ಮಕ ಹಕ್ಕುಗಳ ದರ್ಜೆಯಲ್ಲಿ ಯಾವುದೇ ವ್ಯತ್ಯಾಸಗಳು ಇರಲು ಸಾಧ್ಯವಿಲ್ಲ. ರಾಜಪ್ರಮುಖ ಎಂಬ ಹುದ್ದೆಯನ್ನು ಈ ಕೂಡಲೇ ರದ್ದುಗೊಳಿಸಬೇಕು ಮತ್ತು ಅವರ ಎಲ್ಲಾ ಸವಲತ್ತುಗಳನ್ನು ತೆಗೆದುಹಾಕಬೇಕೆಂದು ಕೂಡ ತಾವು ಶಿಫಾರಸು ಮಾಡಬೇಕೆಂದು ಕೇಂದ್ರ ಸಮಿತಿಯು ಮುಂದುವರಿದು ಒತ್ತಾಯಿಸುತ್ತದೆ. ಅದರ ಜೊತೆಯಲ್ಲಿಯೇ, ಅವರಿಗೆ ನೀಡುವ ರಾಜಧನವನ್ನು ನಿಲ್ಲಿಸಬೇಕು ಮತ್ತು ಸಂಸ್ಥಾನದ ಕಂದಾಯಗಳನ್ನು ದುರುಪಯೋಗಪಡಿಸಿಕೊಂಡು ಗಳಿಸಿರುವ ವೈಯಕ್ತಿಕ ಆಸ್ತಿಪಾಸ್ತಿಗಳನ್ನೂ ಸರ್ಕಾರವು ವಹಿಸಿಕೊಳ್ಳಬೇಕು.


"ಭಾಷಾವಾರು ರಾಜ್ಯಗಳಿಗಾಗಿನ ಈ ಹಕ್ಕೊತ್ತಾಯವನ್ನು ನಿರಾಕರಿಸುವ ದೃಷ್ಟಿಯಿಂದ ಸಾಮಾನ್ಯವಾಗಿ ಎತ್ತುವ ವಾದಗಳಿಗೆ ಪ್ರತ್ಯುತ್ತರ ನೀಡುವ ಅಗತ್ಯವಿದೆಯೆಂದು ಕೇಂದ್ರ ಸಮಿತಿಯು ಭಾವಿಸುತ್ತದೆ. . . .ನಾವು ಸೂಚಿಸುತ್ತಿರುವ ರಾಜ್ಯಗಳ ಈ ಪುನರ್‌ಸಂಘಟನೆಯು ಹೆಚ್ಚು ತರ್ಕಬದ್ಧವಾದ ನೆಲೆಯಲ್ಲಿವೆ, ಈ ಮೂಲಕ ರಾಜ್ಯದ ಬಹುಸಂಖ್ಯಾತ ಜನರು ಮಾತನಾಡುವ ಭಾಷೆಯಲ್ಲಿ ಆಡಳಿತವನ್ನು ನಡೆಸಬಹುದು.

"ಭಾಷಾವಾರು ರಾಜ್ಯಗಳ ರಚನೆಯ ವಿರುದ್ಧ ಎತ್ತುತ್ತಿರುವ ಮತ್ತೊಂದು ವಾದವೇನೆಂದರೆ ಹಾಗೆ ಹಂಚಿಕೆ ಮಾಡುವುದರಿಂದ ಭಾರತದ ಏಕತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟಾಗುತ್ತದೆ ಎಂಬುದಾಗಿದೆ. ಈ ವಾದವು ಸ್ಪಷ್ಟವಾಗಿ ಅಸಂಗತ ಹಾಗೂ ದೋಷಪೂರಿತವಾದದ್ದು. ಭಾಷಾವಾರು ರಾಜ್ಯಗಳು ತಮ್ಮದೇ ಆದ ಸೈನ್ಯ ಹಾಗೂ ರಕ್ಷಣಾ ಸೇವೆಗಳನ್ನು ಹೊಂದಿರುವ ಪ್ರತ್ಯೇಕ ಪ್ರಭುತ್ವಗಳಾಗಿರುವುದಿಲ್ಲ. ರಕ್ಷಣಾ ಇಲಾಖೆಯು ಕೇಂದ್ರದ ವಿಷಯವಾಗಿಯೇ ಮುಂದುವರೆಯುತ್ತದೆ . . . ಅನುಭವಗಳು ತೋರಿಸುತ್ತಿರುವುದೇನೆಂದರೆ ಈಗಿನ ವ್ಯವಸ್ಥೆಯ ಮುಂದುವರಿಕೆಯೇ ಜನರ ನಡುವಿನ ತಿಕ್ಕಾಟಗಳಿಗೆ ಕಾರಣವಾಗಿವೆ, ಅವು ಖಂಡಿತವಾಗಿಯೂ ಭಾರತದ ಐಕ್ಯತೆಯ ಬೆಳವಣಿಗೆಗೆ ಸಹಾಯಕವಾಗುವಂಥದ್ದಲ್ಲ. ನಮ್ಮ ರಾಷ್ಟ್ರೀಯ ಚಳುವಳಿಯ ಉದ್ದಕ್ಕೂ ಕಾಂಗ್ರೆಸ್ ನಾಯಕರುಗಳಾಗಲೀ ಅಥವಾ ಉಳಿದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾಗಲೀ ಸರ್ವ ಪಕ್ಷಗಳ ಸಮಿತಿಗಳಲ್ಲಿ 1947ರ ತನಕ ಈ ಭಾಷಾವಾರು ರಾಜ್ಯಗಳ ಪ್ರಶ್ನೆಯನ್ನು ಚರ್ಚಿಸುವಾಗ ಈ ಐಕ್ಯತೆ ಮತ್ತು ಸಮಗ್ರತೆಯ ಗುಮ್ಮವನ್ನು ಎಂದೂ ಎತ್ತಿರಲಿಲ್ಲ.

"ಪ್ರತಿಪಾದಿಸುತ್ತಿರುವ ಇನ್ನೊಂದು ಪ್ರಶ್ನೆಯೆಂದರೆ ಆರ್ಥಿಕ ಕಾರ್ಯಸಾಧ್ಯತೆಯದು . . ರಾಜ್ಯಗಳ ಆರ್ಥಿಕ ಕಾರ್ಯಸಾಧ್ಯತೆಯು ಕೇಂದ್ರ ಹಾಗೂ ರಾಜ್ಯಗಳ ಆದಾಯಗಳನ್ನು ಪರಸ್ಪರ ಹಂಚಿಕೊಳ್ಳುವ ಪ್ರಶ್ನೆಯಾಗಿದೆ. ಇವತ್ತು ದೇಶದ ಯಾವ ರಾಜ್ಯವೂ, ಇವತ್ತಿನ ಆರ್ಥಿಕ ಸಂಪನ್ಮೂಲಗಳ ಹಂಚಿಕೆಯೊಂದಿಗೆ ಮಿಗುತಾಯದ್ದು ಆಗಿಲ್ಲ, ಅಥವಾ ಸ್ವಯಂಪರಿಪೂರ್ಣವೂ ಆಗಿಲ್ಲ. ಅವೆಲ್ಲವುಗಳ ಆಯವ್ಯಯಗಳು ಕೊರತೆಯವೇ ಆಗಿವೆ.

"ಇದಕ್ಕೂ ಮಿಗಿಲಾಗಿ, ಭಾರತದ ವಿವಿಧ ಪ್ರದೇಶಗಳ ನಡುವೆ ಅಸಮಾನ ಆರ್ಥಿಕ ಅಭಿವೃದ್ಧಿ ಇದೆ ಎಂಬ ವಾಸ್ತವವನ್ನು ಕಾಣದೇ ಇರಲು ಸಾಧ್ಯವಿಲ್ಲ. ನಿಸ್ಸಂಶಯವಾಗಿಯೂ, ಈ ಅಸಮಾನ ಆರ್ಥಿಕ ಅಭಿವೃದ್ಧಿಯಿಂದಾಗಿ ಕೆಲವು ಪ್ರದೇಶಗಳ ಹಿಂದುಳಿದಿರುವಿಕೆಯ ನೆಪ ಮಾಡಿಕೊಂಡು ಆ ಪ್ರದೇಶದ ಜನರಿಗೆ ಭಾಷಾವಾರು ರಾಜ್ಯವನ್ನು ತಿರಸ್ಕರಿಸಲು ಸಾಧ್ಯವಿಲ್ಲ; ಭಾಷಾವಾರು ರಾಜ್ಯದ ಮೂಲಕ ಅವರನ್ನು ದೇಶದ ಆಡಳಿತದಲ್ಲಿ ಪಾಲ್ಗೊಳ್ಳಲು ಸಮರ್ಥಗೊಳಿಸಬಹುದಾಗಿದೆ. ಇಂತಹ ಒಂದು ವಾದದ ಅರ್ಥವೇನೆಂದರೆ ಕೇವಲ ಆರ್ಥಿಕವಾಗಿ ಮುಂದುವರೆದ ಪ್ರದೇಶದ ಜನಗಳು ಮಾತ್ರವೇ ದೇಶದ ರಾಜಕೀಯ, ಆರ್ಥಿಕ ಹಾಗೂ ಆಡಳಿತಾತ್ಮಕ

ಪುಟ 13 ನೋಡಿ



ಹೊಸ ಶಿಕ್ಷಣ ನೀತಿ: ಭಾರತದ ಮಹಾ ಹಿನ್ನೆಗೆತ

ಪುಟ 11 ರಿಂದ

ಕಾರ್ಖಾನೆಯಲ್ಲಿ ಕೆಲಸಮಾಡುವ ಕಾರ್ಮಿಕನ ಮಗುವಿಗೆ ನಿಷ್ಕಾಮ ಕರ್ಮವನ್ನು ಒಂದು ಆದರ್ಶವೆಂದು ಬೋಧಿಸಿದರೆ, ಆ ಮಗುವಿಗೆ ತನ್ನ ತಂದೆಯು ಹೆಚ್ಚಿನ ವೇತನಕ್ಕಾಗಿ ಮುಷ್ಕರದಲ್ಲಿ ಭಾಗಿಯಾಗುವುದರ ಬಗ್ಗೆ ಸಹಾನುಭೂತಿ ಇರುವುದಿಲ್ಲ.

ಉತ್ತಮ ಜಗತ್ತನ್ನು ನಿರ್ಮಿಸುವುದೇ ಶಿಕ್ಷಣದ ಉದ್ದೇಶವಾಗಬೇಕು. ಅಸ್ತಿತ್ವದಲ್ಲಿರುವ ಪ್ರಪಂಚದ ಬಗ್ಗೆ ಅತೃಪ್ತಿ ಇದ್ದಾಗ ಮಾತ್ರ ಉತ್ತಮ ಜಗತ್ತನ್ನು ನಿರ್ಮಿಸುವ ಪ್ರೇರೇಪಣೆ ಉಂಟಾಗುತ್ತದೆ. ಇರುವ ಜಗತ್ತಿಗೇ ಹೊಂದಿಕೊಳ್ಳುವುದಾಗಲಿ ಅಥವಾ ತೀರಾ ಸರಳವಾಗಿ ಹೇಳಬಹುದಾದ ಹಾಗೆ ಹಿಂದಿನ ಕಾಲದಲ್ಲಿದ್ದ ಯಾವ ಪ್ರಪಂಚಕ್ಕೆ ಹೊಂದಿಕೊಳ್ಳಲಾಗದೆ ಜನರು ತಮ್ಮ ಆಚರಣೆಯ ಮೂಲಕ ಅದನ್ನು ದಾಟಿ ಹೋಗುವ ಪ್ರಯತ್ನದಲ್ಲಿ ನಿರತರಾಗಿದ್ದಾರೋ ಅಂತಹ



ಪ್ರಪಂಚಕ್ಕೆ ಹೊಂದಿಕೊಳ್ಳುವಂತೆ ಹೇಳುವುದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಪ್ರತಿಗಾಮಿ ಯೋಜನೆಯಾಗುತ್ತದೆ. ಹೊಸ ಶಿಕ್ಷಣ ನೀತಿಯು ಇಂತಹ ಪ್ರತಿಗಾಮಿ ಯೋಜನೆಯನ್ನು ಉತ್ತೇಜಿಸುತ್ತದೆ.

ಇದೇ ತೆರನಾದ ಪ್ರತಿಗಾಮಿ ಧೋರಣೆಯನ್ನು ಇನ್ನೊಂದು ಮುಖ್ಯವಾದ ಅಂಶದಲ್ಲೂ ಕಾಣಬಹುದು. ವಿದ್ಯಾರ್ಥಿಗಳಿಗೆ ತಮ್ಮ ಮೂಲಭೂತ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಬೋಧನೆಯ ಪ್ರಸ್ತಾಪವೇ ಇಲ್ಲದ ಹೊಸ ಶಿಕ್ಷಣ ನೀತಿಯಲ್ಲಿ ವಿದ್ಯಾರ್ಥಿಗಳ ಮೂಲಭೂತ ಕರ್ತವ್ಯಗಳ ಬಗ್ಗೆ ಮಾತ್ರ ಬೋಧನೆಯಾಗುತ್ತದೆ. ಹೊಸ ಶಿಕ್ಷಣ ನೀತಿಯ ದಸ್ತಾವೇಜಿನಲ್ಲಿ ಎಲ್ಲೆಡೆಯೂ ಸಂಪ್ರದಾಯಶರಣತೆಯೇ ವಿಜೃಂಭಿಸುತ್ತದೆ. ಉನ್ನತ ವರ್ಗದವರ ಮಕ್ಕಳು ತಾವು ಅಲಂಕರಿಸುವ ಕಾರ್ಯನಿರ್ವಾಹಕ ಹುದ್ದೆಗಳಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಗುಲಾಮಗಿರಿಗೆ ಒಗ್ಗಿಕೊಳ್ಳುತ್ತಾರೆ. ಬಹಿಷ್ಕೃತರು ಮತ್ತು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರ ಮಕ್ಕಳು ಗುಲಾಮಗಿರಿಗೆ ಒಳಪಟ್ಟ ಕಾರ್ಮಿಕ ವರ್ಗದ ಸದಸ್ಯರಾಗುತ್ತಾರೆ. ಅವರಿಗೆ ಕುಸಿಯುತ್ತಿರುವ ಉದ್ಯೋಗಗಳ ಪರಿಸ್ಥಿತಿಯಲ್ಲಿ ಲಭ್ಯವಿರುವ ಕಡಿಮೆ ಹುದ್ದೆಗಳನ್ನು ಬೇಕಾದವರಿಗೆ ಹಂಚುವ ಪರಿಸ್ಥಿತಿಯ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಲು ಬೇಕಾಗುವ ಬೌದ್ಧಿಕತೆಯ ಕೊರತೆಯೂ ಇರುತ್ತದೆ. ಶಿಕ್ಷಣದ ಇಂತಹ ತಾತ್ವಿಕತೆಯು ಯಾವುದೇ ದೇಶಕ್ಕೆ, ಅದರಲ್ಲೂ ವಿಶೇಷವಾಗಿ ನಮ್ಮ ದೇಶಕ್ಕೆ ಅಸಮಂಜಸವಾಗುತ್ತದೆ.

ನಮ್ಯತೆ, ಒಳಗೊಳ್ಳುವಿಕೆ, ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಹೆಸರಿನಲ್ಲಿ ಮಾಡುವ ಅವುಗಳಿಗೆ ತದ್ವಿರುದ್ಧವಾದುದನ್ನೇ, ಅಂದರೆ ಹೊರಗಿಡುವಿಕೆಯನ್ನೇ ಮಾಡಲಾಗುತ್ತಿದೆ ಮತ್ತು ಅಂತಹ ಹೊರಗಿಡುವಿಕೆಯನ್ನೇ ಒಪ್ಪಿಕೊಳ್ಳುವಂತೆ ಮಾಡಲಾಗುತ್ತಿದೆ. ವಾಸ್ತವವಾಗಿ, ಹೊಸ ಶಿಕ್ಷಣ ನೀತಿಯನ್ನು ಭಿನ್ನವಾಗಿ ನೋಡಿದ್ದಾದಲ್ಲಿ, ಅದನ್ನು ಚೆನ್ನಾಗಿಯೇ ಅರ್ಥಮಾಡಿಕೊಳ್ಳಬಹುದು. ಒಂದು ಏಕರೂಪದ ಸಮೂಹ ಶಿಕ್ಷಣವನ್ನು ಜಾರಿಗೊಳಿಸುವುದು ಬಂಡವಾಳಶಾಹಿ ವ್ಯವಸ್ಥೆಗೆ ಅಗತ್ಯವಾಗುತ್ತದೆ. ಏಕೆಂದರೆ, ಪಾಳೇಗಾರಿ ವ್ಯವಸ್ಥೆಯ ಕಾಲದಲ್ಲಿ ಜನರು ತಮ್ಮ ತಮ್ಮ ಹಳ್ಳಿಗಳಿಂದ ಅಥವಾ ಸ್ಥಳೀಯ ಪ್ರದೇಶಗಳಿಂದ ಹೊರಹೋಗದ ಸನ್ನಿವೇಶ ಇದ್ದರೆ, ಅದಕ್ಕೆ ವಿರುದ್ಧವಾಗಿ, ಜನರನ್ನು ಗಣನೀಯ ಪ್ರಮಾಣದಲ್ಲಿ ಸ್ಥಳಾಂತರಿಸಬೇಕಾದ ಅವಶ್ಯಕತೆಯು ಬಂಡವಾಳಶಾಹಿ ವ್ಯವಸ್ಥೆಯಲ್ಲಿದೆ. ಹಾಗಾಗಿ, ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುವ ವ್ಯಕ್ತಿಗಳಿಗೆ ಒಂದು ಏಕರೂಪದ ಶಿಕ್ಷಣ ನೀಡುವಂತಹ ಶಿಕ್ಷಣ ನೀತಿಯ ಅವಶ್ಯಕತೆ ಬಂಡವಾಳಶಾಹಿಗೆ ಈಗಲೂ ಇದೆ. ಆದರೆ ಸ್ವತಂತ್ರ ಭಾರತವು ಬಂಡವಾಳಶಾಹಿಯ ಕಾರ್ಯಾಚರಣೆಯು ಅಗತ್ಯಕ್ಕೆ ಬೇಕಾಗಿರುವ ಶಿಕ್ಷಣಕ್ಕಿಂತಲೂ ಹೆಚ್ಚು ವಿಸ್ತಾರವಾದ "ಸಾರ್ವತ್ರಿಕ ಶಿಕ್ಷಣ" ಕಾರ್ಯಕ್ರಮದ ಭರವಸೆಯನ್ನು ಕೊಟ್ಟಿತು.

ನವ ಉದಾರ ಬಂಡವಾಳಶಾಹಿ ಆಳ್ವಿಕೆಯ ಶಿಕ್ಷಣ ನೀತಿಯ ಉದ್ದೇಶವೆಂದರೆ, ಬಂಡವಾಳಶಾಹಿ ವ್ಯವಸ್ಥೆಯ ಅವಶ್ಯಕತೆಗೆ ತಕ್ಕಷ್ಟೇ ಪ್ರಮಾಣದಲ್ಲಿ ಶಿಕ್ಷಣ ನೀಡುವುದು ಮತ್ತು ವಿವಿಧ ಕುತಂತ್ರಗಳ ಮೂಲಕ 'ಸಾರ್ವತ್ರಿಕ ಶಿಕ್ಷಣ'ದ ವಚನದಿಂದ ಹಿಂದಕ್ಕೆ ಸರಿಯುವುದು. ಹೊಸ ಶಿಕ್ಷಣ ನೀತಿಯು ಏನು ಹೇಳುತ್ತದೆ ಎನ್ನುವುದಕ್ಕಿಂತ ಎಂತಹ ಕುತಂತ್ರಗಳ ಮೂಲಕ ಜನರಿಗೆ ಕೊಟ್ಟ ವಚನವನ್ನು ಮುರಿಯುತ್ತದೆ ಎಂಬುದನ್ನು ಪರಿಶೀಲಿಸಿದರೆ ಹೊಸ ಶಿಕ್ಷಣ ನೀತಿಯು ಸರಿಯಾಗಿಯೇ ಅರ್ಥವಾಗುತ್ತದೆ.


ಸದಾಶಯಗಳು ಮತ್ತು ಹುನ್ನಾರಗಳು

ಪುಟ 10 ರಿಂದ

ಒಳ್ಳೆಯ ವಿಷಯವೇನು? ನಿಜ, ಅದು ಬಾಹ್ಯ ಮತ್ತು ಆಂತರಿಕ 'ಪ್ರಭಾವ'ದಿಂದ 'ಮುಕ್ತ'ವಾಗಿರುತ್ತದೆ, ಆ ಮೂಲಕ ಪ್ರಾಯಶಃ ಅಡಚಣೆಯಿಲ್ಲದೆ ಸುಲಲಿತವಾಗಿ ಕಾರ್ಯ ನಿರ್ವಹಿಸಬಹುದು. ಆದರೆ ಒಂದು ವಿಶ್ವವಿದ್ಯಾಲಯದಲ್ಲಿ ಪ್ರಮುಖ ಭಾಗೀದಾರರಾಗಿರುವ ಶಿಕ್ಷಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳನ್ನು ಸಂಪೂರ್ಣವಾಗಿ ಬಾಯಿಮುಚ್ಚಿಸಿ, ಇದೊಂದು ರೀತಿಯ ಕೇವಲ ಉಸಿರಾಡುವ ಗೊಂಬೆಗಳ ಬೀಡಾಗುವುದಿಲ್ಲವೇ? ಇದು ನಮ್ಮಲ್ಲಿ ಶಿಕ್ಷಣ ವೆಚ್ಚದ, ಪ್ರಮುಖವಾಗಿ ಉನ್ನತ ಶಿಕ್ಷಣದ ವೆಚ್ಚದ ಪ್ರಶ್ನೆಯನ್ನು ಮತ್ತು ಅದನ್ನು ಭರಿಸುವ ಸಾಮರ್ಥ್ಯ ಎಸ್.ಇ.ಡಿ.ಜಿ. ಗುಂಪುಗಳಿಗಿರಲಿ, ಸಾಮಾನ್ಯ ವಿದ್ಯಾರ್ಥಿಗಳಿಗಾದರೂ ಇರುತ್ತದೆಯೇ ಎನ್ನುವ ಪ್ರಶ್ನೆಯನ್ನು ಮೂಡಿಸುತ್ತದೆ.

ಶಿಕ್ಷಣವು ಒಂದು ಸಾರ್ವಜನಿಕ ಸೇವೆ ಮತ್ತು ಇದು ವ್ಯಾಪಾರ ಆಗಬಾರದು ಎಂದು ಒತ್ತಿ ಹೇಳುವ ಈ ದಸ್ತಾವೇಜು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳನ್ನು – ಸಾರ್ವಜನಿಕ ಮತ್ತು ಖಾಸಗಿ– ಸಮನಾಗಿ ಕಾಣಲಾಗುತ್ತದೆ ಎನ್ನುತ್ತದೆ. ಆದರೆ ಎಲ್ಲಿಯೂ ಶುಲ್ಕ ವಿವರಗಳ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಖಾಸಗಿ 'ಪರೋಪಕಾರಿ'ಗಳ ಉನ್ನತ ಶಿಕ್ಷಣ ಸಂಸ್ಥೆಗಳು ಸ್ವತಂತ್ರವಾಗಿ ತಮ್ಮ ಶುಲ್ಕವನ್ನು ವಿಧಿಸುವ ಅಧಿಕಾರ ಹೊಂದಿವೆ; ನಿಜ, ಕೆಲವು ನಿಯಮಗಳಿಗೆ ಒಳಪಟ್ಟು, ಶೇ. 20 ವಿದ್ಯಾರ್ಥಿಗಳಿಗೆ ಉಚಿತ ಮತ್ತು ಶೇ. 30 ವಿದ್ಯಾರ್ಥಿಗಳಿಗೆ ಯಾವುದಾದರೂ ರೀತಿಯ ವಿದ್ಯಾರ್ಥಿವೇತನವನ್ನು ಖಾತ್ರಿಪಡಿಸಬೇಕು. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ಮತ್ತು ಒಂದು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ ರಚನೆಯ ಆಶ್ವಾಸನೆ ನೀಡಲಾಗಿದೆ(ಪರಿಚ್ಛೇದ 12.11). ಆದರೆ ಭಾರತವನ್ನು 'ವಿಶ್ವ–ಗುರು ಎಂದು ಪರಿಗಣಿಸಿ ಹಿಂಡುಗಟ್ಟಿ ಬರಬಹುದಾದ ವಿದೇಶಿ ವಿದ್ಯಾರ್ಥಿಗಳನ್ನು (ಪರಿಚ್ಛೇದ 12.9) ಹೊರತು ಪಡಿಸಿ, ನಮ್ಮ ದೇಶದ ವಿದ್ಯಾರ್ಥಿಗಳಿಗೆ ಈ ವೆಚ್ಚಗಳು ಭರಿಸಬಲ್ಲ ಪ್ರಮಾಣದಲ್ಲಿರಬಹುದೇ ಎಂದು ಈ ದಸ್ತಾವೇಜು ಹೇಳುವುದೇ ಇಲ್ಲ. ಆದರೆ ಭಾರತದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಿಗೂ ಅನುಮತಿ ನೀಡುವುದರಿಂದ ಭಾರತೀಯ ವಿಶ್ವವಿದ್ಯಾಲಯಗಳು ಇವುಗಳ ಜೊತೆ ಸ್ಪರ್ಧೆ ಮಾಡಬೇಕಾಗುತ್ತದೆ. ಮತ್ತು ಆಗ ಶುಲ್ಕಗಳನ್ನು ತಂತಾನೇ ಮಾರುಕಟ್ಟೆ ನಿಯಂತ್ರಿಸುತ್ತದೆಯೇ ಹೊರತು ಸರ್ಕಾರವಲ್ಲ.

ನಿಜ ಸಂಗತಿಯೆಂದರೆ, ಈ ದಸ್ತಾವೇಜು ಮತ್ತೆ–ಮತ್ತೆ ಶಾಲಾಶಿಕ್ಷಣ ಮಟ್ಟದಲ್ಲೂ, ಉನ್ನತ ಶಿಕ್ಷಣ ಮಟ್ಟದಲ್ಲೂ ಹಲವು ಬಾರಿ ಸಾರ್ವಜನಿಕ ಶಿಕ್ಷಣಕ್ಕೆ 'ಪರೋಪಕಾರಿಗಳ ಕೊಡುಗೆಗಳನ್ನು ಉತ್ತೇಜಿಸುವ' ಮತ್ತು ಖಾಸಗಿ ದಾನಿಗಳ ಶೈಕ್ಷಣಿಕ ಸಂಸ್ಥೆಗಳು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಗೆ ಸ್ಪರ್ಧೆ ನೀಡುವುದರ ಪ್ರಾಮುಖ್ಯತೆಯ (ಪರಿಚ್ಛೇದ 8.9) ಬಗ್ಗೆ ಹೇಳಿದೆ. ಶಿಕ್ಷಣ ಹಕ್ಕು (ಆರ್‌ಟಿಇ) ಕಾಯ್ದೆಯನ್ನು ನೆಪಮಾತ್ರಕ್ಕೆ ಉಲ್ಲೇಖಿಸಿದರೂ, ಇಂತಹ ಸರ್ಕಾರೇತರ ಪರೋಪಕಾರಿ ಸಂಸ್ಥೆಗಳಿಗೆ ಅನುಕೂಲವಾಗುವಂತೆ 'ಶಾಲೆಗಳಿಗೆ ಬೇಕಿರುವ ಅಗತ್ಯತೆ'ಗಳನ್ನು ಕುರಿತಂತೆ ಕಡಿಮೆ ಪ್ರಮಾಣದ ನಿರ್ಬಂಧಗಳು ಇರುವಂತೆ ನೋಡಿಕೊಳ್ಳಲಾಗುವುದು ಎಂದು ಹೇಳಲಾಗಿದೆ (ಪರಿಚ್ಛೇದ 3.5). ಶಾಲಾ ಸಂಕೀರ್ಣಗಳ ಬಗ್ಗೆ ಮಾತನಾಡುವಾಗ 'ಸಾರ್ವಜನಿಕ ಮತ್ತು ಖಾಸಗಿ ಶಾಲೆಗಳನ್ನು ಅವಳಿಗಳಾಗಿಸುವ ಬಗ್ಗೆ (ಪರಿಚ್ಛೇದ 7.11) ಮತ್ತು ಸಾರ್ವಜನಕ–ಪರೋಪಕಾರಿ ಸಂಸ್ಥೆಗಳ ಸಹಭಾಗಿತ್ವದ ಬಗ್ಗೆ ಹೇಳುತ್ತದೆ. ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳನ್ನು 'ಸಮಾನ ನೆಲೆಯಲ್ಲಿ' ಕಾಣುವ ವಿಚಾರ ಸಾರ್ವಜನಿಕ ಸಂಸ್ಥೆಗಳ ಪರವಾಗಿ ಕೆಲಸ ಮಾಡುವುದಿಲ್ಲ ಎಂಬುದಂತೂ ಸ್ಪಷ್ಟ. ಈ ವಿಚಾರಗಳನ್ನು ವಿವರಿಸಲಾಗಿಲ್ಲ. ಆದರೆ ಶಿಕ್ಷಣ ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿನ ಬೆಳವಣಿಗೆಗಳನ್ನು ಗಮನಿಸಿರುವ ನಮಗೆ ಸರ್ಕಾರವು ಖಾಸಗಿ ಸಂಸ್ಥೆಗಳಿಗೆ ಈ ಕ್ಷೇತ್ರವನ್ನೂ ತೆರೆದು ಕೊಡುವತ್ತ ಕದ್ದುಮುಚ್ಚಿ ಸಾಗುತ್ತಿದೆ ಎಂಬ ಸಂಶಯ ಮೂಡುವುದು ಸಹಜ. ಈ ದಸ್ತಾವೇಜು ಈ ಪ್ರಯತ್ನವನ್ನು ಹೇಗಾದರೂ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತದಷ್ಟೇ. ಹೀಗೇನಾದರೂ ಆದರೆ, ಇದುವರೆಗೆ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಬುಡಕಟ್ಟುಗಳು, ಧಾರ್ಮಿಕ ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಇತರ ಅನುಕೂಲ–ವಂಚಿತ ಗುಂಪುಗಳ ಮಟ್ಟಿಗೆ ಹೇಳುವುದಾದರೆ, ಹೋರಾಟದ ಮೂಲಕ ಸ್ವಲ್ಪವಾದರೂ ಮುನ್ನಡೆ ಸಾಧಿಸಿರುವ ಶಿಕ್ಷಣದ ಹಕ್ಕಿನ ವಿಚಾರ ಈಗ ಒಂದು ನಿರ್ಣಾಯಕ ಘಟ್ಟ ತಲುಪಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈ ಹೋರಾಟವನ್ನು ಈ ಹಕ್ಕುಗಳ ವಿರುದ್ಧ ಈ ದಸ್ತಾವೇಜು ಒಳಗೊಂಡಿರುವ ಎಲ್ಲಾ ತಂತ್ರಗಳನ್ನು ಪ್ರತಿರೋಧಿಸುವತ್ತ ನಿರ್ದೇಶಿಸಬೇಕಾಗಿದೆ.



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಭಾಷಾವಾರು ರಾಜ್ಯಗಳ ರಚನೆ

ಪುಟ 12 ರಿಂದ

ಜೀವನದಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿರುತ್ತಾರೆ ಎಂದಾಗುತ್ತದೆ.

"ಈ ಹಿನ್ನೆಲೆಯಲ್ಲಿ, ತೀರಾ ಹಿಂದುಳಿದ ರಾಜ್ಯಗಳಿಗೆ ಕೇಂದ್ರವು ಸಹಾಯ ಮಾಡುವುದರ ಮೂಲಕ ಅವರೂ ಕೂಡ ತ್ವರಿತವಾಗಿ ತಮ್ಮ ಹಿಂದುಳಿದಿರುವಿಕೆಯನ್ನು ತೊಡೆದುಹಾಕಲು ಸಮರ್ಥವಾಗುತ್ತವೆ ಮತ್ತು ಅದು ಇಡೀ ದೇಶವು ಸಮಾನ ಅಭಿವೃದ್ಧಿ ಹೊಂದಲು ಸಹಾಯಕವಾಗುತ್ತದೆ ಎಂಬ ಅಂಶವನ್ನು ಒತ್ತಿಹೇಳಲು ಭಾರತ ಕಮ್ಯುನಿಸ್ಟ್ ಪಕ್ಷ ಬಯಸುತ್ತದೆ. ಅದು ಮಾತ್ರವೇ ವಿವಿಧ ಭಾಷೆಗಳನ್ನು ಮಾತನಾಡುವ ಜನರ ಸೌಹಾರ್ದ ಭಾವನೆಗಳನ್ನು ಒಟ್ಟುಗೂಡಿಸುತ್ತದೆ ಮತ್ತು ಭಾರತದ ಐಕ್ಯತೆಯನ್ನು ಗಟ್ಟಿಗೊಳಿಸುತ್ತದೆ. ಆದರೆ ಅದೇ ಹಿಂದುಳಿದಿರುವಿಕೆಯ ಕಾರಣ ನೀಡಿ ಆ ಪ್ರದೇಶದ ಜನರಿಗೆ ಪ್ರಜಾಸತ್ತಾತ್ಮಕ ಅಭಿವೃದ್ಧಿಯ ಅವಕಾಶವನ್ನು ನಿರಾಕರಿಸುವುದು ವಿಚ್ಛಿದ್ರಕಾರಿ ಶಕ್ತಿಗಳನ್ನು ಬಲಪಡಿಸಿದಂತಾಗುತ್ತದೆ.

"ಭಾಷಾವಾರು ರಾಜ್ಯಗಳ ರಚನೆಯೊಂದಿಗೆ ಹೊಂದಿಕೆಯಾಗುವಂತೆ, ಹೊಸ ಭಾಷಾವಾರು ರಾಜ್ಯಗಳ ಗಡಿಗಳನ್ನು ಗುರುತಿಸುವಾಗ ಈ ಕೆಳಗಿನ ವಿಧಾನಗಳನ್ನು ಅನುಸರಿಸುವಂತೆ ಶಿಫಾರಸು ಮಾಡಬೇಕೆಂದು ನಾವು ತಮ್ಮನ್ನು ಒತ್ತಾಯಿಸುತ್ತೇವೆ:

"ಹಳ್ಳಿಯನ್ನು ಒಂದು ಘಟಕವಾಗಿ ತೆಗೆದುಕೊಳ್ಳಬೇಕು. ಆ ಹಳ್ಳಿಯಲ್ಲಿರುವ ಬಹುಸಂಖ್ಯಾತ ಜನರು ಮಾತನಾಡುವ ನಿರ್ದಿಷ್ಟ ಭಾಷೆಯ ಆಧಾರದಲ್ಲಿ ಮತ್ತು ಆ ನರ್ದಿಷ್ಟ ಭಾಷಾವಾರು ರಾಜ್ಯಕ್ಕೆ ಆ ಹಳ್ಳಿ ಹೊಂದಿಕೊಂಡಿರುವ ಆಧಾರದಲ್ಲಿ ಗಡಿಯನ್ನು ಗುರುತಿಸಬೇಕು.

"ಎಷ್ಟೇ ಜಾಗರೂಕವಾಗಿ ಗಡಿಯನ್ನು ಗುರುತಿಸಿದ್ದಾಗ್ಯೂ ಈ ಗಡಿ ಪ್ರದೇಶಗಳಲ್ಲಿ ಮತ್ತು ಪ್ರತಿಯೊಂದು ಇಂತಹ ರಾಜ್ಯಗಳ ಒಳಗಡೆ ಕೂಡ ಭಾಷಾವಾರು ಅಲ್ಪಸಂಖ್ಯಾತರು ಇರುತ್ತಾರೆ ಎಂಬುದನ್ನು ತಿಳಿದಿರಬೇಕು. ಅಂತಹವರಿಗೆ ಅವರ ಮಾತೃಭಾಷೆಯಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಹಂತಗಳಲ್ಲಿ ಶಿಕ್ಷಣ ನೀಡುವುದನ್ನು ಖಾತ್ರಿಪಡಿಸಬೇಕು. ಅವರ ಕಾಲೇಜು ಶಿಕ್ಷಣವನ್ನೂ ಅವರ ಮಾತೃಭಾಷೆಯಲ್ಲೇ ನೀಡಬೇಕು ಮತ್ತು ಎಷ್ಟರಮಟ್ಟಿಗೆ ಹಾಗೂ ಕಾರ್ಯಸಾಧ್ಯವಾದ ಪರಿಸ್ಥಿತಿಯ ಅಡಿಯಲ್ಲಿ ನೀಡಬೇಕು ಎಂಬ ಪ್ರಶ್ನೆಗಳನ್ನು ಆಯಾಯ ರಾಜ್ಯಗಳಿಗೇ ಬಿಡಬೇಕು. ಆಗ ಮಾತ್ರವೇ, ಈ ಗಡಿ ಪ್ರದೇಶಗಳು, ವೈಷಮ್ಯ ಮತ್ತು ಅನೈಕ್ಯತೆಯ ತಾಣಗಳಾಗದೇ, ಭಾಷಾವಾರು ರಾಜ್ಯಗಳ ನಡುವಿನ ಪರಸ್ಪರ ಬಾಂಧವ್ಯದ ನೆಲೆಗಳಾಗಿ ಹೊರಹೊಮ್ಮುತ್ತವೆ.

"ಈ ರಾಜ್ಯಗಳ ಗಡಿಗಳನ್ನು ಗುರುತಿಸುವಾಗ, ಅಂಥಲ್ಲಿ ಆದಿವಾಸಿ ಪ್ರದೇಶಗಳು ಸಿಗಬಹುದು. ಆ ಆದಿವಾಸಿ ಪ್ರದೇಶಗಳಲ್ಲಿ, ಒಂದು ನರ್ದಿಷ್ಟ ವಿಶೇಷ ಲಕ್ಷಣ ಹೊಂದಿರುವ ಬುಡಕಟ್ಟುಗಳು ಜೀವಿಸುತ್ತಿದ್ದರೆ, ಅವರ ಸಾಂಸ್ಕೃತಿಕ ಹಾಗೂ ಭಾಷಾಬಾಂಧವ್ಯ ಯಾವ ನೆರೆಹೊರೆಯ ರಾಜ್ಯಕ್ಕೆ ಹೊಂದಿಕೊಳ್ಳುತ್ತದೋ ಮತ್ತು ಅವರ ಆರ್ಥಿಕ ಅಭಿವೃದ್ಧಿ ಹೊಂದಿಕೊಂಡಿದೆಯೋ ಹಾಗೂ ಸಹಜವಾಗಿ ಬೆಳೆಯಲು ಸಾಧ್ಯವಿದೆಯೋ ಅಂತಹ ರಾಜ್ಯಗಳಿಗೆ ಆ ಪ್ರದೇಶವನ್ನು ಸೇರಿಸಬೇಕು. . . ಒಂದು ಭಾಷಾವಾರು ರಾಜ್ಯಕ್ಕೆ ಅಥವಾ ಆಡಳಿತಾತ್ಮಕವಾಗಿ ತಹಶೀಲ್, ಜಿಲ್ಲಾ ಅಥವಾ ಪ್ರಾದೇಶಿಕ ಘಟಕಗಳಾಗಿ ವಿಂಗಡಿಸಲ್ಪಡುತ್ತವೋ ಅಂಥಲ್ಲಿಗೆ ಆದಿವಾಸಿ ಪ್ರದೇಶಗಳನ್ನು ಸೇರಿಸುವಾಗ ಅವರ ಸ್ಥಳೀಯ ಅಥವಾ ಪ್ರಾದೇಶಿಕ ಸ್ವಾಯತ್ತತೆಯನ್ನು ಕಾಪಾಡುವಂತೆ ನೋಡಿಕೊಳ್ಳಬೇಕು.

"ಆದ್ದರಿಂದ, ಜನರಿಗೆ ಯಾವುದೇ ರೀತಿಯ ಆತಂಕ ಕಳವಳ ಉಂಟಾಗದಂತೆ ನೋಡಿಕೊಳ್ಳಬೇಕು ಮತ್ತು ಪ್ರಥಮತಃ ಭಾಷೆಗಳ ಆಧಾರದಲ್ಲಿನ ರಾಜ್ಯಗಳ ರಚನೆಯನ್ನು ಶಿಫಾರಸು ಮಾಡುವ ಒಂದು ಮಧ್ಯಂತರ ವರದಿಯನ್ನು ಸೆಪ್ಟೆಂಬರ್ 1954 ಕ್ಕೆ ಮುಂಚೆ ನೀಡಬೇಕೆಂದು ಆಯೋಗವನ್ನು ಭಾರತ ಕಮ್ಯುನಿಸ್ಟ್ ಪಕ್ಷವು ಒತ್ತಾಯಿಸುತ್ತದೆ."

ಡಿ.ಜಿ.ಹಳ್ಳಿ, ಕೆ.ಜಿ.ಹಳ್ಳಿ ಮತ್ತು ಕಾವಲ್ ಭೈರಸಂದ್ರ ಗಲಭೆ ಪೀಡಿತ ಪ್ರದೇಶಗಳಿಗೆ – ಸಿಪಿಐ(ಎಂ) ನಿಯೋಗ ಬೇಟಿ



ಕಳೆದ ಮಂಗಳವಾರ (11ನೇ ಆಗಸ್ಟ್) ರಾತ್ರಿ ಉದ್ರಿಕ್ತ ಗುಂಪುಗಳು, ಅಂದರೆ, ಈಗಾಗಲೇ ಸುದ್ದಿಯಾಗಿರುವಂತೆ ಎಸ್ ಡಿ ಪಿ ಎಲ್ ಮತ್ತು ಪಿಪಿಸಿ ಯ ಗುಂಪುಗಳು ಡಿ.ಜಿ.ಹಳ್ಳಿ ಮತ್ತು ಕೆ.ಜಿ.ಹಳ್ಳಿ ವ್ಯಾಪ್ತಿಯಲ್ಲಿ ಬರುವ ಎರಡು ಪೊಲೀಸ್ ಠಾಣೆಗಳಿಗೆ ನುಗ್ಗಿ ಮಾರಮುರಿ ಹಲ್ಲೆ ಮಾಡಿದ್ದಾರೆ. ಬೆಂಕಿ ಹಚ್ಚಿ ಹಿಂಸಾತ್ಮಕ ಕೃತ್ಯಗಳನ್ನು ಎಸೆದಿದ್ದಾರೆ. ಠಾಣೆಯ ಒಳಗಿರುವ ಉಪಕರಣಗಳು ಬೆಂಕಿಯಿಂದ ಸುಟ್ಟು ಕರಕಲಾಗಿವೆ. ಪೊಲೀಸ್ ಠಾಣೆಯ ಅಕ್ಕ ಪಕ್ಕದ ರಸ್ತೆ ಗಳ ಬದಿಯಲ್ಲಿ ಪಾರ್ಕಿಂಗ್ ಮಾಡಿದ್ದ ಅನೇಕ ವಾಹನಗಳಿಗು ಬೆಂಕಿ ಹಚ್ಚಲಾಗಿ ನಾಶಗೊಳಿಸಲಾಗಿದೆ. ನಾಶಗೊಂಡಿರುವ ವಾಹನಗಳು ರಸ್ತೆಯ ಅಕ್ಕ ಪಕ್ಕದಲ್ಲಿ ಕರಕಲಾಗಿ ಬಿದ್ದಿರುವ ದೃಶ್ಯ ಗಳು ಹಿಂಸಾತ್ಮಕ ಹಲ್ಲೆಯ ಸ್ವರೂಪ ವನ್ನು ಬಹಿರಂಗ ಪಡಿಸುತ್ತದೆ. ಕಾರುಗಳು, ಬಸ್ಸುಗಳು ದ್ವಿಚಕ್ರ ವಾಹನ ಗಳು ಸುಟ್ಟು ನಾಶಹೊಂದಿವೆ.





ಈ ಗಲಭೆಗ ತುತ್ತಾಗಿರುವ ಪ್ರದೇಶ ಗಳು ನಗರದ ಪೂರ್ವವಲಯದ ನಡು ಹೃದಯ ಭಾಗದಲ್ಲಿರುವ ' ಪುಲಕೇಶಿ ನಗರ' ವಿಧಾನ ಸಭಾ ಕ್ಷೇತ್ರಕ್ಕೆ ಸೇರಿವೆ. ಹಾಗಾಗಿ, ಆ ಕ್ಷೇತ್ರದ ಹಾಲಿ ಶಾಸಕರಾದ ಮಾನ್ಯ ಅಖಂಡ ಶ್ರೀನಿವಾಸ ಮೂರ್ತಿಯವರ ಕೆಜಿ ಹಳ್ಳಿ ಮತ್ತು ಕಾವಲ್ ಭೈರ ಸಂಧ್ರದಲ್ಲಿರುವ ಅವರ ಕಚೇರಿ ಮತ್ತು ಮನೆಯ ಮೇಲೆಯೂ, ಉದ್ರಿಕ್ತ ಗುಂಪು ದಾಳಿ ನಡೆಸಿದೆ. ಕಚೇರಿ ಮತ್ತು ಮನೆಗೆ ನುಗ್ಗಿ ಬೆಂಕಿ ಹಚ್ಚಿ, ಮನೆಯೊಳಗಿರುವ ಉಪಕರಣಗಳನ್ನು ಧ್ವಂಶಗೊಳಿಸಲಾಗಿದೆ. ಭಾರಿ ಅನಾಹುತ ಉಂಟಾಗಿದೆ. ಶಾಸಕರ ಸಹೋದರ, ಸಹೋದರಿ ಮನೆಯ ಮೇಲೂ, ದಾಳಿ ನಡೆಸಲಾಗಿದೆ.

ಈ ಗಲಭೆ, ದೊಂಬಿ ಮತ್ತು ಪೊಲೀಸರ ಗುಂಡಿಗೆ ಈಗಾಗಲೇ, ಮೂರು ಜನರು ಕೊಲ್ಲಲ್ಪಟ್ಟಿದ್ದಾರೆ.

ಗಲಬೆಗೆ ಕಾರಣಕರ್ತರು ಎಷ್ಟೇ ಪ್ರಭಾವಿತರಾಗಿದ್ದರು, ಯಾವುದೇ ಒತ್ತಡಕ್ಕೆ ಮಣಿಯದೆ ಕಾನೂನು ರೀತ್ಯೆ ಶಿಕ್ಷೆಗೆ ಒಳ ಪಡಿಸಬೇಕು ಎಂಬುದೆ ಸಿಪಿಐ(ಎಂ), ಆಗ್ರಹ ಪಡಿಸುತ್ತದೆ.

ಸಿಪಿಐ(ಎಂ), ನಿಯೋಗ ದಲ್ಲಿ, ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯೆರಾದ, ಸಂಗಾತಿ ಎಸ್.ವರಲಕ್ಷ್ಮಿ ಯವರ ನೇತೃತ್ವದಲ್ಲಿ, ಬೆಂಗಳೂರು ಎರಡು ಜಿಲ್ಲೆಯ ಕಾರ್ಯದರ್ಶಿ ಗಳಾದ, ಕೆ.ಎನ್.ಉಮೇಶ್, ಎನ್ ಪ್ರತಾಪ್ ಸಿಂಹ, ಪೂರ್ವ ವಲಯ ಸಮಿತಿಯ ಕಾರ್ಯದರ್ಶೆಯಾದ, ನಾಗರಾಜ ನಂಜುಂಡಯ್ಯ, ಸದಸ್ಯರಾದ ಸಿ.ರಮೇಶ್, ಎಂ.ನಂಜೇಗೌಡ, ಮುನಿಕೃಷ್ಣ, ಜಿ. ವೆಂಕಟೇಶ್ ಹಾಗೂ ಆರ್.ಟಿ.ನಗರ ಪಕ್ಷದ ಶಾಖೆಯ ಶಿವಕುಮಾರ್, ಉತ್ತರ ಜಿಲ್ಲಾ ಸಮಿತಿಯ ವತಿಯಿಂದ, ಕಾ. ಹವಲ್ದಾರ್, ಗೋಪಾಲ ಗೌಡ, ಗೌರಮ್ಮನವರು ನಿಯೋಗದಲ್ಲಿದ್ದರು.



ದಲಿತರ ಮೇಲಿನ ದೌರ್ಜನ್ಯ ತಡೆ ಗಟ್ಟಿ: ದಲಿತರ ಹಕ್ಕುಗಳನ್ನು ರಕ್ಷಿಸಿ......

ಪುಟ 16 ರಿಂದ



ಕೊಳೆಯುತ್ತಿವೆ. ದಲಿತರ ಪಾಲಿಗೆ ಇಲ್ಲವಾಗಿದೆ. ರಾಜ್ಯದಲ್ಲಿ ದಲಿತರು ಭೂಮಿ ಇಲ್ಲದೆ ಹೀನಾಯ ಬಧುಕು ನಡೆಸುತ್ತಿದ್ದಾರೆ.

ಬಿ.ಜೆ.ಪಿ ರಾಜ್ಯ ಸರ್ಕಾರ ಇದೀಗ ಭೂ ಸುಧಾರಣಾ ತಿದ್ದುಪಡಿ ಕಾಯಿದೆ–2020 ಜಾರಿ ಮಾಡಿ ಉಳುವವನನ್ನು ಭೂ ಒಡೆಯನಾಗಿಸಬೇಕೆಂಬ ದಲಿತರ ಕನಸನ್ನು ಮಣ್ಣು ಮಾಡತ್ತಿದೆ. ಕಪ್ಪು ಹಣವುಳ್ಳ ಹಣವಂತರು ಮತ್ತು ಕಾರ್ಪೋರೇಟರ್ ಕಂಪನಿಗಳು ಭೂಮಿ ಕಿತ್ತು ಕೊಳ್ಳಲು ಸುಗ್ರೀವಾಜ್ಞೆ ತಂದು ದಲಿತರನ್ನು ಬೀದಿಪಾಲು ಮಾಡಲಾಗುತ್ತಿದೆ. ದಲಿತರ ಭೂಮಿ ರಕ್ಷಣೆ ಹಕ್ಕನ್ನು ಕಿತ್ತುಕೊಳ್ಳುತ್ತಿದೆ. ಇಂತಹ ದಲಿತ ವಿರೋಧಿ ಭೂ ಸುಧಾರಣೆ ಕಾಯಿದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ (ಭೀಮಾವಾದ) ರಾಜ್ಯ ಸಂಚಾಲಕರಾದ ಮೋಹನ್ ರಾಜ್ ಹೋರಾಟವನ್ನು ಬೆಂಬಲಿಸಿ ಮಾತಾನಾಡುತ್ತಾ ಕೋವಿಡ್ ಸಮಯದಲ್ಲಿ ದಲಿತರು, ಕಾರ್ಮಿಕರು ಸಂಕಷ್ಟದಲ್ಲಿದ್ದಾರೆ. ಅವರಿಗೆ ಯಾವುದೆ ನೆರವು ಸಿಗುತ್ತಿಲ್ಲವೆಂದರು. ದೇವರಾಜ ಅರಸು ಕಾಲದಲ್ಲಿ ಭೂ ಸುಧಾರಣಾ ಕಾಯಿದೆ ಜಾರಿಗೆ ತಂದು ದಲಿತರ ಭೂಮಿ ರಕ್ಷಣೆ ಮಾಡಿತ್ತು. ಆದರೆ ಯಡೂರಪ್ಪ ಸರ್ಕಾರ ಶ್ರೀಮಂತರಿಗೆ ದಲಿತರಕೊಳ್ಳಲು ಕಾಯಿದೆ ಮಾಡುತ್ತಿದೆ. ಆದ್ದರಿಂದ ನಾವೆಲ್ಲರು ಐಕ್ಯತೆಯಿಂದ ಹೋರಾಟ ನಡೆಸ ಬೇಕೆಂದು ತಿಳಿಸಿದರು. ಸಿ.ಐ.ಟಿ.ಯು ಜಿಲ್ಲಾ ಪ್ರಧಾ ಕಾರ್ಯದರ್ಶಿ ಪ್ರತಾಪ್ ಸಿಂಹ ಭಾಗವಹಿಸಿ ಮಾತಾನಾಡಿರು ದಲಿತರ ವಿರೋದಿ ಬಿಜೆಪಿ ಸರ್ಕಾರ ಜನವಿರೋಧಿ ಕಾನೂನುಗಳನ್ನು ತರುತ್ತಿದೆ ದಲಿತರ ಹೋರಾಟಕ್ಕೆ ಕಾರ್ಮಿಕ ವರ್ಗ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ತಿಳಿಸಿದರು. ಸಿ.ಐ.ಟಿ.ಯು ಜಿಲ್ಲಾ ಅದ್ಯಕ್ಷರಾದ ಗೋಪಾಲಗೌಡರು ಮಾತಾನಾಡಿದರು.

ಕೊನೆಯಲ್ಲಿ ಡಿ.ಹೆಚ್.ಎಸ್ ರಾಜ್ಯ ಸಮಿತಿ ಸದಸ್ಯರಾದ ರಾಜಣ್ಣ, ವನಜರವರ ನಿಯೋಗ ಹೆಚ್ಚುವರಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ವಿವಿಧ ಕಡೆಗಳಲ್ಲಿ ನಡೆದ ಹೋರಾಟ ;

ಬೆಂಗಳೂರು ಪೂರ್ವ ತಾಲೋಕ್ ನಲ್ಲಿ 150 ಜನರ ಮೆರವಣಿಗೆ :

ಡಿ.ಹೆಚ್.ಎಸ್. ಪೂರ್ವ ತಾಲೊಕ್ ಸಮಿತಿ ನೇತ್ರತ್ವದಲ್ಲಿ ನೂರಾರು ಮಹಿಳಾ ಕಾರ್ಯಕರ್ತರು ಸೇರದಂತೆ ಕೆ.ಆರ್. ಪುರ ಬಿ.ಬಿ.ಎಂ.ಪಿ ಕಛೇರಿಯಿಂದ ಮೆರವಣಿಗೆ ನಡೆಸಿ ತಾಲೋಕ್ ತಾಹಸಿಲ್ದಾರ್‌ವರಿಗೆ ಮನವಿ ನೀಡಿದೆ. ತಾಲೋಕ್ ಕಚೇರಿ ಎದುರು ನಡೆಸ ಸಭೆಯನ್ನು ಉದ್ದೇಸಿ ಡಿ.ಎಸ್.ಎಂ.ಎಂ. ಅಖಿಲ ಭಾರತ ಸಮಿತಿ ಸದಸ್ಯರಾದ ಎನ್. ನಾಗರಾಜ್ ಮಾತಾನಾಡಿ ದೇಶದಲ್ಲಿ ದಲಿತ ಸ್ಥಿತಿ ಅದರ ವಿರುದ್ಧ ಡಿ.ಎಸ್.ಎಂ.ಎಂ ಹೋರಾಟದ ಬಗ್ಗೆ ವಿವರಿಸಿದರು. ರಾಜ್ಯದಲ್ಲಿ ದಲಿತರು ಉದ್ಯೋಗ ವಂಚಿತರಾಗಿದ್ದಾರೆ ಖಾಸಗಿ ಕ್ಷೇತ್ರದಲ್ಲಿ ಮಿಸಾಲಾತಿ ಜಾರಿ ಮಾಡಬೇಕೆಂದು ಒತ್ತಾಯಿಸಿದರು. ತಾಲೋಕ್ ಸಂಚಾಲಕರಾದ ಸರಣಪ್ಪ ವಾಲಿ ಮನವಿಯನ್ನು ಓದಿದರು. ಕಟ್ಟಡ ಸಿ.ಐ.ಟಿಯು ಜಿಲ್ಲಾ ಮುಖಂಡರಾ ಮುನಿರಾಜ್, ಇತರರು ಮಾತಾನಾಡಿದರು.

ಬಳ್ಳಾರಿ ಜಿಲ್ಲೆ:

ಹಗರಿಬೋಮ್ಮನಹಳ್ಳಿ, ಹೊಸಪೇಟೆ, ಸಿರುಗುಪ್ಪ, ಕುರುಗೂಡು, ಸಿಂದೂರು ,ಸಂಡೂರು, ಬಳ್ಳಾರಿ ತಾಲೋಕ್ ಗಳಲ್ಲಿ ಪ್ರತಿಭಟನೆಗಳು ನಡೆದಿದೆ.

ಹಗರಿ ಭೊಮ್ಮನಹಳ್ಳಿ ತಾಲೋಕ್ ಕಛೇರಿಯ ಮುಂದೆ ಡಿ.ಹೆಚ್.ಎಸ್ ರಾಜ್ಯ ಸಹ ಕಾರ್ಯದರ್ಶಿ ಮಾಳಮ್ಮ ನೇತ್ರದಲ್ಲಿ ಧರಣಿ ನಡೆಸಿ. ದಲಿತ ಮಹಿಳೆ ಹುಲಿಗಮ್ಮ ಕೊಲೆ ಮಾಡಿದವರಿಗೆ ಶಿಕ್ಷೆಯಾಗಬೇಕು. ಆ ಕುಟುಂಬಕ್ಕೆ ಪರಿಹಾರ ನೀಡಬೇಕು. ದೇವದಾಸಿ ಮಹಿಳೆಯರಿಗೆ ಮಾಶಾಸನ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಹೊಸ ಪೇಟೆಯಲ್ಲಿ ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕರಾದ ಜಂಬಯ್ಯ ನಾಯಕ ನೇತ್ರತ್ವದಲ್ಲಿ ಮೆರವಣಿಗೆ ನಡೆಸಿ ತಾಹಸಿಲ್ದಾರ್ ರವರಿಗೆ ಮನವಿ ನೀಡಿ ದಲಿತರಿಗೆ ಮೀಸಾಲಾತಿ, ಉದ್ಯೋಗ, ಸಿಕ್ಷಣ ಆರೋಗ್ಯ, ಆಹಾರ ಭದ್ರತೆಗಾಗಿ, ದಲಿತರ ಮೇಲಿನ ದೌರ್ಜನ್ಯ ವಿರೋದಿಸಿ ಪ್ರತಿಭಟನೆ ನಡೆಸಿದರು.

ಕಲ್ಬುರ್ಗಿ ಜಿಲ್ಲೆ:

ಪ್ರತಿಭಟನೆಯ ನೇತೃತ್ವ ವಹಿಸಿ ಜನಪರ ಹೋರಾಟಗಾರ, ರೈತ ಮುಖಂಡ ಮಾರುತಿ ಮಾನಪಡೆ ಅವರು ಮಾತನಾಡಿ, ದಲಿತರ ಜಮೀನುಗಳಿಗೆ ಸಂಬಂಧಿಸಿದ ಸಾವಿರಾರು ಕೇಸುಗಳು ಕೊರ್ಟ್ ನಲ್ಲಿ ಕೊಳೆಯುತ್ತಿವೆ. ಈ ಸಂಬಂಧ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದಲಿತರ ನೆರವಿಗೆ ಬಾರದೆ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಮಾಡಿ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಕಿಡಿಕಾರಿದರು.

ದಲಿತ ಹಕ್ಕುಗಳ ಸಮಿತಿ ಕಲಬುರಗಿ ಜಿಲ್ಲಾ ಸಂಚಾಲಕ ಪಾಂಡುರಂಗ ಮಾವಿನಕರ ಹಾಗೂ ಸುಧಾಮ ಧನ್ನಿ ಮಾತನಾಡಿದರು. 12 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.





ಶ್ರೀಲಂಕಾ ಚುನಾವಣೆ: ರಾಜಪಕ್ಷ ಸಹೋದರರಿಗೆ ಭಾರೀ ಬಹುಮತ

ಅಧ್ಯಕ್ಷ ಗೊಟಬಯ ರಾಜಪಕ್ಸ ಮತ್ತು ಅವರ ಸಹೋದರ ಮಹಿಂದ ರಾಜಪಕ್ಷ ರವರು ಸ್ಥಾಪಿಸಿದ ಹೊಸ ಪಕ್ಷ ಎಸ್‌ಎಲ್‌ಪಿಪಿ (ಶ್ರೀಲಂಕಾ ಪೀಪಲ್ಸ್ ಫ್ರಂಟ್– ಶ್ರೀಲಂಕಾ ಪೊದುಜನ ಪೆರಮುನ) ಯು ಶ್ರೀಲಂಕಾದ 16 ನೇ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಒಟ್ಟು 225 ಸ್ಥಾನಗಳ ಸದಸ್ಯರಲ್ಲಿ 145 ಸ್ಥಾನಗಳನ್ನು ಗೆದ್ದುಕೊಂಡಿದೆ. ಇವರ ಮೈತ್ರಿ ಕೂಟದ ಐದು ಮಿತ್ರ ಪಕ್ಷಗಳ ಬೆಂಬಲದೊಂದಿಗೆ, ಒಟ್ಟು 150 ಸ್ಥಾನಗಳನ್ನು ಪಡೆದು ಮೂರನೇ ಎರಡರಷ್ಟು ಸ್ಥಾನಗಳನ್ನು ಸುಲಭವಾಗಿ ತಲುಪಿದೆ. ಇದು ಶ್ರೀಲಂಕಾದ ಪ್ರಮಾಣಾತ್ಮಕ ಪ್ರಾತಿನಿಧ್ಯ ವ್ಯವಸ್ಥೆ ಯಲ್ಲಿನ ರಾಜಕೀಯದ ಅತ್ಯುತ್ತಮ ಸಾಧನೆ ಎಂದು ಪರಿಗಣಿಸಲಾಗಿದೆ.

ಕಳೆದ ಭಾನುವಾರ ಮಹಿಂದಾ ರಾಜಪಕ್ಷ ಪ್ರಧಾನ ಮಂತ್ರಿ ಯಾಗಿ ಅಧಿಕಾರ ಸ್ವೀಕರಿಸಿದರು. ಈ ಎಲ್ಲಾ ಬೆಳವಣಿಗೆಗಳು ಕೋವಿಡ್–19 ರ ಮಹಾ ಮಾರಿ ಹರಡುವಿಕೆಯ ಅಪಾಯಕಾರಿ ವಾತಾವರಣದಲ್ಲಿಯೇ ನಡೆಯಿತು.

ಚುನಾವಣಾ ಫಲಿತಾಂಶವು ಎಸ್‌ಎಲ್‌ಪಿಪಿ ಗೆ ಸೂಪರ್ ಬಹುಮತ ತಂದು ಕೊಟ್ಟಿದೆ ಎಂಬುದು ವಾಸ್ತವಿಕ. ಆದರೆ, ಈಗಾಗಲೇ ಪ್ರತಿಪಕ್ಷಗಳಿಗೆ ಸಂದೇಹ ಮತ್ತು ಕಳವಳ ಉಂಟಾಗಿದೆ. 2/3 ರಷ್ಟು 'ಬಹುಮತ ಕೆಟ್ಟದನ್ನು ನೀರಿಕ್ಷಿಸಬಹುದು ಅಥವಾ ಉತ್ತಮವಾದುದ್ದನ್ನು ಆಶಿಸಲುಬಹುದು? ಇದನ್ನು ಸಾಭೀತು ಪಡಿಸಿ ಮಿಸ್ಟರ್ ಪ್ರೆಸಿಡೆಂಟ್ ಎಂದು ಯು.ಎನ್.ಪಿ ಪಕ್ಷದ ಮಾಜಿ ಮಂತ್ರಿ ಮಂಗಳ ಸಮರವೀರ ಆತಂಕದಿಂದ ಟ್ವೀಟ್ ಮಾಡಿದ್ದಾರೆ.

ಭಾರೀ ಬಹುಮತ ಏಕೆ?

ಈ ಚುನಾವಣೆಯಲ್ಲಿ ಮಾಜಿ ಪ್ರಧಾನಿ ರನಿಲ್ ವಿಕ್ರಮಸಿಂಘೆ ರ ಯುಎನ್ ಪಿ ಪಕ್ಷವು ಕೇವಲ ಒಂದು ಸ್ಥಾನವನ್ನು ಮಾತ್ರ ಗಳಿಸಿ ಹೀನಾಯ ಸೋಲನ್ನು ಅನುಭವಿಸಿದೆ. ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವುದಾಗಿ ಭರವಸೆ ಮೂಡಿಸಿದ್ದ ವಿಕ್ರಮಸಿಂಘೆ ಸರ್ಕಾರದ ಆಡಳಿತವು ಜನರ ವಿಶ್ವಾಸ ಗಳಿಸುವಲ್ಲಿ ವಿಫಲವಾಗಿತ್ತು.

ಪ್ರಮುಖವಾಗಿ, 2019 ರ ಏಪ್ರಿಲ್ನಲ್ಲಿ ನಡೆದ 'ಈಸ್ಟರ್ ಸಂಡೇ' ಘಟನೆಯಲ್ಲಿ, ಕೊಲೊಂಬೊ ನಗರದಲ್ಲಿ ನ ಮೂರು ಚರ್ಚ್ ಗಳು ಮತ್ತು ಮೂರು ಸುಸಜ್ಜಿತ ಹೋಟೆಲ್ ಗಳ ಮೇಲೆ ಉಗ್ರರ ದಾಳಿಯಿಂದಾಗಿ 260 ಕ್ಕೂ ಹೆಚ್ಚು ಜನರ ಸಾವು ಸಂಭವಿಸಿತ್ತು. ಈ ದಾಳಿ ಕುರಿತಂತೆ ಮುಂಜಾಗ್ರತಾ ಮಾಹಿತಿಗಳು ಲಭ್ಯವಿದ್ದಾಗ್ಯೂ ಪರಿಣಾಮಕಾರಿ ಕ್ರಮ ವಹಿಸುವಲ್ಲಿ ವಿಫಲವಾಗಿದ್ದು, ವಿಕ್ರಮಸಿಂಘೆ ಪಕ್ಷದ ಹೀನಾಯ ಸೋಲಿಗೆ ಕಾರಣವೆನ್ನಲಾಗಿದೆ.

ಇದರೊಂದಿಗೆ ಉಂಟಾದ ಪಕ್ಷ ದೊಳಗಿನ ಒಳಜಗಳ ದಿಂದಾಗಿ, ಸಜಿತ್ ಪ್ರೇಮದಾಸ ಅವರು ಯು ಎನ್ ಪಿ ಪಕ್ಷದಿಂದ ಹೊರಹೋಗಿ, ಎಸ್ ಜೆ ಪಿ ಪಕ್ಷ ಕಟ್ಟಿ ಕೊಂಡರು. ಇದೀಗ ಈ ಚುನಾವಣೆಯಲ್ಲಿ 54 ಸ್ಥಾನಗಳನ್ನು ಇವರ ಪಕ್ಷ ಗೆದ್ದು ಪ್ರಮುಖ ಪ್ರತಿ ಪಕ್ಷವಾಗಿದೆ.

ಪ್ರಸ್ತುತ ಅಧ್ಯಕ್ಷರಾದ, ಗೊತಬಯ ರಾಜಪಕ್ಷೆ 2009 ರಲ್ಲಿ ರಕ್ಷಣಾ ಕಾರ್ಯದರ್ಶಿ ಯಾಗಿದ್ದರು. ಆಗ ತಮಿಳು ಟೈಗರ್' ಪ್ರತ್ಯೇಕತಾ ವಾದಿ ಬಂಡುಕೋರರರನ್ನು ಹತ್ತಿಕ್ಕಿದ್ದರು. ಹೀಗಾಗಿ, ಶ್ರೀಲಂಕಾ ಜನರ ಮಧ್ಯೆ ಜನಪ್ರಿಯ ರಾಗಿದ್ದರು. ಕಳೆದ ನವೆಂಬರ್‌ನಲ್ಲಿನ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದ ನಂತರ, 'ಕೋವಿಡ್–19 ರ ಹರಡುವಿಕೆಯನ್ನು ತಡೆಯುವಲ್ಲಿ, ಏಕಾಂಗಿಯಾಗಿ ಸ್ಥಿರತೆಯನ್ನು ತಂದುಕೊಟ್ಟಿದ್ದಾರೆ ಎಂದು ಬಹುತೇಕ ಮತದಾರರು ಇವರ ಆಡಳಿತಕ್ಕೆ ಮನ್ನಣೆ ನೀಡಿದ್ದಾರೆ ಎನ್ನಲಾಗಿದೆ.



ಶ್ರೀಲಂಕಾ ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ 'ಮೂಲ ಕಾರಣಗಳು' 1956, 1977 ಮತ್ತು 2010 ರಲ್ಲಿ ಸರ್ಕಾರ ಗಳು ಸದನದಲ್ಲಿ ಮೂರನೇ ಎರಡರಷ್ಟು, ಬಹುಮತಗಳನ್ನು ಹೊಂದಿದ್ದ ಸಂದರ್ಭ ಎಂದು ಗುರುತಿಸಬಹುದು. ಹಾಗಾಗಿ, ತಪ್ಪುಗಳು ಮತ್ತು ಅಪಘಾತಗಳು ಸಂಭವಿಸಬಹುದು ಎಂದು ಪ್ರತಿಪಕ್ಷಗಳು ಆತಂಕಿತರಾಗಿದ್ದಾರೆ. ಮತದಾನಕ್ಕೆ ಮುಂಚೆಯೇ, ರಾಜಪಕ್ಷೆ' ಗಳು ಸಂವಿಧಾನದ 19 ನೇ ತಿದ್ದು ಪಡಿಯನ್ನು ಬದಲಾಯಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ.

ಸಂವಿಧಾನದ 19 ನೇ ತಿದ್ದುಪಡಿ

1948 ರಲ್ಲಿ ಸ್ವಾತಂತ್ರ್ಯ ಬಂದ ನಂತರ ಮೊದಲ ಗಣತಂತ್ರ ಸಂವಿಧಾನ ಜಾರಿಗೆ ಬಂದದ್ದು. ಎರಡನೇ ಬಾರಿಗೆ 1972 ರಲ್ಲಿ ಪುನಃ ರಚನೆಗೊಂಡ ಸಂವಿಧಾನವು, ' ಸಿಲೋನ್ ಎಂಬ ಹೆಸರನ್ನು ' ಶ್ರೀಲಂಕಾ' ವೆಂದು ಬದಲಾಯಿಸಿತು. ಮೇ 22, 1972 ರಿಂದ ಹೊಸ ಸಂವಿಧಾನವಾಗಿ ಅನುಷ್ಠಾನಕ್ಕೆ ತರಲಾಯಿತು. ಅಲ್ಲಿಂದ ಇಲ್ಲಿಯವರೆಗೂ, ಸುಮಾರು 19 ತಿದ್ದುಪಡಿಗಳನ್ನು ಮಾಡಲಾಗಿದೆ.

2015 ರಲ್ಲಿ ವಿಕ್ರಮಸಿಂಘೆ ಆಡಳಿತದ ಸರ್ಕಾರ ವು ಸಂವಿಧಾನಕ್ಕೆ 19 ನೇ ತಿದ್ದುಪಡಿಯನ್ನು ತಂದಿತ್ತು. ಆ ಮೂಲಕ ಅವರ ಆಡಳಿತದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಯಿತು. ಒಬ್ಬ ಅಧ್ಯಕ್ಷ ಮತ್ತು ಪ್ರಧಾನಿ ಗೆ ಎರಡು ಬಾರಿ ಮಾತ್ರ ಅವಕಾಶ ನಿಗಧಿ ಪಡಿಸಿತ್ತು. ಹೊಸ ಸರ್ಕಾರ ಇದೀಗ ಇದನ್ನು ಬದಲಾಯಿಸುತ್ತದೆ. ಪ್ರಬಲ ಸರ್ಕಾರ ನೀಡುತ್ತೇವೆ ಎಂಬ ಚುನಾವಣಾ ಭರವಸೆಗೆ ಜನ ಮನ್ನಣೆ ಸಿಕ್ಕಿದೆ. ಸಿಂಹಳ ಬೌದ್ಧ ರಾಷ್ಟ್ರೀಯತೆ ಚುನಾವಣಾ ಪ್ರಚಾರದಲ್ಲಿ ಪ್ರಮುಖ ವಾಗಿತ್ತು ಮತ್ತು ದ್ವೇಷದ ಪ್ರಚೋದಕ ಭಾಷಣಗಳು ಗಂಭೀರವಾಗಿ ಗಮನ ಸೆಳೆದಿದ್ದವು ಎಂದು ಸುದ್ದಿಯಾಗಿದೆ. ಇದೀಗ ಅಲ್ಪ ಸಂಖ್ಯಾತರಾದ ಮುಸ್ಲಿಂರು ಮತ್ತು ತಮಿಳರ ಪ್ರಾತಿನಿಧ್ಯ ಸಂಸತ್ತಿನಲ್ಲಿ ಕಡಿಮೆಯಾಗಿದೆ.

ಈ ಇಬ್ಬರು ಅಣ್ಣ ತಮ್ಮಂದಿರು ಸಂವಿಧಾನದ 19 ನೇ ತಿದ್ದುಪಡಿಗೆ ಮಾತ್ರ ಸೀಮಿತವಾಗಿಲ್ಲ. ಇವರ ಆಡಳಿತದೊಂದಿಗೆ ಸಂಬಂಧ ಹೊಂದಿರುವ ರಾಜಕಾರಣಿ ಗಳು 13 ನೇ ತಿದ್ದುಪಡಿ ಯ ಅಗತ್ಯವನ್ನು ಪ್ರಶ್ನಿಸಿದ್ದಾರೆ ಇದನ್ನು ಇವರು ಕೆದಕುವ ಸಂಭವ ಇದೆ ಎಂದು ವರದಿಯಾಗಿದೆ. ಇದು ಇಂಡೋ–ಲಂಕಾ ಒಪ್ಪಂದದ ನಂತರ ಅಲ್ಪಸಂಖ್ಯಾತ ತಮಿಳರು ವಾಸಿಸುವಂತಹ ಪ್ರಾಂತ್ಯಗಳಿಗೆ ಸಂಬಂಧಿಸಿದ ತಿದ್ದುಪಡಿಯಾಗಿದೆ.

ಬಹು ಜನಾಂಗಗಳ ದ್ವೀಪ ರಾಷ್ಟ್ರ ವು ಧರ್ಮ ಮತ್ತು ಜನಾಂಗದ ಹೆಸರಿನಲ್ಲಿ ಈಗಾಗಲೇ ಸಾಕಷ್ಟು ಸೊರಗಿದೆ. ಇದೀಗ ಕೋವಿಡ್–19 ರಿಂದಾಗಿ ಪ್ರವಾಸೋದ್ಯಮ ಮತ್ತು ಒಟ್ಟಾರೆಯ ಆರ್ಥಿಕತೆ ಕುಸಿದಿದೆ. ಸಿಕ್ಕಿರುವ ಅವಕಾಶವನ್ನು ಬಳಸಿ ಈಗಿನ ಸರಕಾರ ಅಧಿಕಾರದ ಕೇಂದ್ರಿಕರಣ ಮಾಡಿಕೊಂಡು ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುವ ಸಾಧ್ಯತೆ ಹೆಚ್ಚು ಎನ್ನಲಾಗಿದೆ. ●

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬೈರುತ್ ನಲ್ಲಿ ಭಾರಿ ಸ್ಫೋಟ : ಸರಕಾರದ ರಾಜಿನಾಮೆ

ಲೆಬನಾನ್ ರಾಜಧಾನಿ ಬೈರುತ್ ನ ಬಂದರಿನ ಬಳಿಯಿರುವ ಶೇಖರಿಸಿರುವ ಗೋದಾಮಿನಲ್ಲಿ, ಅಗಸ್ಟ್ 4ರಂದು ಭಾರೀ ರಾಸಾಯನಿಕ ಸ್ಫೋಟ ಉಂಟಾಗಿತ್ತು. ಸರ್ಕಾರದ ನಿರ್ಲಕ್ಷ್ಯ ಮತ್ತು ಹೊಣೆಗಾರಿಕೆಯ ಕೊರತೆಯಿಂದಾಗಿ ನಡೆದಿರುವ ಈ ಭಾರಿ ಸ್ಫೋಟದ ವಿರುದ್ಧ ಒಂದು ವಾರದಿಂದ ಎಡೆಬಿಡದೆ ಲೆಬನಾನಿನಾದ್ಯಂತ ಭಾರಿ ಪ್ರತಿಭಟನೆಗಳು ನಡೆದವು. ಇದು ಸರ್ಕಾರದ ಭ್ರಷ್ಟಾಚಾರ ಮತ್ತು ಹದಗೆಟ್ಟ ಆರ್ಥಿಕ ರಾಜಕೀಯ ಪರಿಸ್ಥಿತಿಗಳ ವಿರುದ್ಧ ಕಳೆದ ವರ್ಷ ಅಕ್ಟೋಬರ್ ನಲ್ಲಿ ಆರಂಭಗೊಂಡಿದ್ದ ಸರಣಿ ಆಂದೋಲನಗಳ ಮುಂದುವರಿದ ಭಾಗವಾಗಿತ್ತು. ಪ್ರಧಾನಿ ಹಸನ್ ಡಯಾಬ್ ರ ರಾಜಿನಾಮೆಯು ಪ್ರತಿಭಟನಾಕಾರರ ಬೇಡಿಕೆಯಲ್ಲಿ ಒಂದಾಗಿತ್ತು. ಹೀಗಾಗಿ, ಪ್ರತಿಭಟನೆಗಾರರ ಒತ್ತಡಕ್ಕೆ ಕೊನೆಗೂ ಮಣಿದು, ಆಗಸ್ಟ್ 10 ರ ರಾತ್ರಿ ಡಯಾಬ್ ತಮ್ಮ ರಾಜಿನಾಮೆಯನ್ನು ಘೋಷಿಸಿದ್ದಾರೆ. ಅವರ ಸಂಪುಟದ ಹಲವು ಮಂತ್ರಿಗಳು ಸಹ ತಮ್ಮ ಸ್ಥಾನಗಳನ್ನು ತ್ಯಜಿಸುವುದಾಗಿ ಘೋಷಿಸಿದ್ದಾರೆ.

ಬೈರುತ್ ನಗರ ಕೇಂದ್ರದಲ್ಲಿ ಆದ ಈ ರಾಸಾಯನಿಕ ಸ್ಫೋಟದಿಂದಾಗಿ ಸುಮಾರು 200 ಜನರು ಸಾವನ್ನಪ್ಪಿದ್ದಾರೆ ಮತ್ತು 6000 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. 70 ಸಾವಿರ ಮನೆಗಳು ನಾಶವಾಗಿದ್ದು ವಾಸಯೋಗ್ಯವಾಗಿರದೆ ಲಕ್ಷಾಂತರ ಜನ ನಿರ್ಗತಿಕರಾಗಿದ್ದಾರೆ. ಸ್ಫೋಟದಿಂದ ಉಂಟಾದ ತರಂಗಗಳ ಅನುಭವ 15 ಕಿ.ಮಿ ದೂರದ ವರೆಗೊಯಿತು ಎಂದು ಹೇಳಲಾಗಿದೆ. ಈಗಾಗಲೇ ದಿವಾಳಿತನ ಎದುರಿಸುತ್ತಿರುವ ಆರ್ಥಿಕತೆಗೆ, ಕೊವಿದ್–19 ನಿಂದಾಗಿ ತೀವ್ರ ಸಂಕಷ್ಟ ಎದುರಾಗಿದ್ದು, ಈ ಸ್ಫೋಟದಿಂದ ಶತಕೋಟಿ ಡಾಲರ್ ಮೌಲ್ಯದ ಹಾನಿಯುಂಟಾಗಿದೆ ಎಂದು ಅಂದಾಜಿಸಲಾಗಿದೆ. ಇದರಿಂದ ದೇಶದ ಆರ್ಥಿಕತೆಗೆ ಮತ್ತಷ್ಟು ಹೊಡೆತ ಉಂಟಾಗಿ, ಆರ್ಥಿಕ ಪರಿಸ್ಥಿತಿ ತೀವ್ರವಾಗಿ ಹದಗೆಡಲಿದೆ. ಸುಮಾರು 7 ವರ್ಷಗಳಿಂದ 2750 ಟನ್ನುಗಳಷ್ಟು ಅಮೋನಿಯಂ ನೈಟ್ರೇಟ್ ಸ್ಫೋಟಕಗಳನ್ನು ಬಂದರದ ಕಸ್ಟಮ್ಸ್ ವಿಭಾಗದ ಗೋದಾಮಿನಲ್ಲಿ ಇಡಲಾಗಿತ್ತು. ಇದನ್ನು ಮೊಜಾಂಬಿಕ್ ಗೆ ಹೋಗುವ ಹಡಗದಿಂದ ವಶಪಡಿಸಿಕೊಳ್ಳಲಾಗಿತ್ತು. ಈ ಹಡಗು ಸಮುದ್ರಯಾನಕ್ಕೆ ಯೋಗ್ಯವಲ್ಲ ಎಂದು ಇದನ್ನು ಇಳಿಸಲಾಗಿತ್ತು. ಆದರೆ ಈ ಸ್ಫೋಟಕಗಳನ್ನು ವಿಲೇವಾರಿ ಹೇಗೆ ಮಾಡಬೇಕು ಎಂದು ಕಸ್ಟಮ್ಸ್ ವಿಭಾಗ ಸಂಬಂಧಪಟ್ಟ ಸಚಿವಾಲಯ, ಸಚಿವರು, ಅಧಿಕಾರಿಗಳು, ರಾಜಕೀಯ ನಾಯಕರು, ಪೋಲಿಸ್, ಮಿಲಿಟರಿ, ಕೋರ್ಟುಗಳು ಇತ್ಯಾದಿ ಎಲ್ಲರನ್ನು ಕೇಳಿದ್ದು, ಯಾವುದೇ ಉತ್ತರ/ನಿರ್ಣಯಗಳಿಲ್ಲದೆ ನೆನೆಗುದಿಗೆ ಬಿದ್ದಿತ್ತು. ಗೋದಾಮಿನಲ್ಲಿ ಬೆಂಕಿ ಹತ್ತಿಕೊಳ್ಳಬಲ್ಲ ಇತರ ಹಲವು ವಸ್ತುಗಳ ಜತೆ ಶೇಖರಿಸಲಾಗಿದ್ದು ಈ ಭೀಕರ ಸ್ಫೋಟ ಯಾವಾಗ ಬೇಕಾದರೂ ಸಂಭವಿಸಬಹುದೆಂದು ಎಲ್ಲರಿಗೂ ಗೊತ್ತಿದ್ದರೂ ಯಾವುದೇ ರೀತಿಯಲ್ಲಿ ಕ್ರಮ ಕೈಗೊಳ್ಳದಿರುವುದರಿಂದ ಜನತೆಯಲ್ಲಿ ಇಡೀ ವ್ಯವಸ್ಥೆಯ ಕುರಿತು ತೀವ್ರ ಆಕ್ರೋಶ ಉಂಟಾಗಿದೆ.



ಸ್ಫೋಟ ಸಂಭವಿಸಿದ ನಂತರ ದೇಶವನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಧಾನಿ ಹಸನ್ ಡಯಾಬ್ ತಾವು ಅಧಿಕಾರದಲ್ಲಿ ಮುಂದುವರಿಯಲು ಬಯಸಿದ್ದರು. ಆದರೆ, ಅವರ ಸರ್ಕಾರದೊಳಗಿನ ಮತ್ತು ಲೆಬಾನಾನ್‌ನ ಬೀದಿ ಬದಿಯಲೆಲ್ಲಾ ಜನರ ಪ್ರತಿಭಟನೆಗಳು ಮತ್ತು ನಾಗರಿಕ ಸಮಾಜದ ತೀವ್ರ ಒತ್ತಡವು, ಅವರು ರಾಜಿನಾಮೆ ನೀಡಲು ಕಾರಣವಾಯಿತು. ಹೊಸ ಸರ್ಕಾರ ರಚನೆ ಯಾಗುವವರೆಗೂ, ಡಯಾಬ್ ಉಸ್ತುವಾರಿ ಪ್ರಧಾನಿಯಾಗಿ ಮುಂದುವರಿಯಲ್ಲಿದ್ದಾರೆ.

ಮಾಜಿ ನಿವೃತ್ತ ಸೇನಾಧಿಕಾರಿಗಳ ಒಂದು ಗುಂಪು ಸೇರಿದಂತೆ, ಕೆಲವು ಪ್ರತಿಭಟನಾಕಾರರು, ಅಗಸ್ಟ್ 8 ರಂದು, ಪ್ರಮುಖ ಸರ್ಕಾರಿ ಸಚಿವಲಾಯದ ಕಟ್ಟಡಗಳನ್ನು ಮತ್ತು ಖಾಸಗಿ ಹಣಕಾಸು ಸಂಸ್ಥೆಗಳನ್ನು ಮತ್ತು ಬ್ಯಾಂಕುಗಳಿಗೆ ಸೇರಿದ್ದ ಕಟ್ಟಡಗಳ ಒಳಗೆ ನುಗ್ಗಿ ತಾತ್ಕಾಲಿಕವಾಗಿ ಆಕ್ರಮಿಸಿಕೊಂಡಿದ್ದರು. ಅಂತಿಮವಾಗಿ ಅವರನ್ನು ಮಿಲಿಟರಿ ಪೊಲೀಸರು ಮತ್ತು ಲೆಬನಾನ್ ನಿನ ಸೈನ್ಯ ಬಳಸಿ ಹೊರ ಹಾಕಲಾಯಿತು. ಕೆಲವು ಕಡೆ ಕಟ್ಟಡಗಳನ್ನು ಆಕ್ರಮಿಸಿದ್ದ ಸುಮಾರು 200–300 ಪ್ರತಿಭಟನಾಕಾರರನ್ನು ನಿಗ್ರಹಿಸಲು ಭದ್ರತಾ ಪಡೆಗಳು ಅಶ್ರುವಾಯ ಡಬ್ಬಿಗಳು ಮತ್ತು ರಬ್ಬರ್ ಲೇಪಿತ ಲೋಹದ ಗುಂಡುಗಳನ್ನು ಬಳಸಿದ್ದರು. ಪ್ರತಿಭಟನಾಕಾರರು ಭದ್ರತಾ ಪಡೆಗಳ ಮೇಲೆ ಕಲ್ಲು ಮತ್ತು ಪಟಾಕಿಗಳನ್ನು ಎಸೆಯುವ ಮೂಲಕ ಇಬ್ಬರ ನಡುವೆ ಹಿಂಸಾಚಾರ ನಡೆಯಿತು. ಇದರಿಂದಾಗಿ, ಸಾವಿರಾರು ಜನರು ಗಾಯಗೊಂಡರು. ತೀವ್ರವಾಗಿ ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

3–4 ದಶಕಗಳ ಹಿಂದಿನ ವರೆಗೆ ಅರಬ್ ಪ್ರದೇಶಗಳಲ್ಲಿ ಅತ್ಯಂತ ಶ್ರೀಮಂತ ದೇಶವಾಗಿದ್ದ ಲೆಬನಾನಿನ ಆರ್ಥಿಕ ಪರಿಸ್ಥಿತಿ – ಅಮೆರಿಕ–ಇಸ್ರೇಲುಗಳ ದಾಳಿಗಳು, ಆಂತರಿಕ ಮತೀಯ ಸಂಘರ್ಷಗಳು, ಸಿರಿಯಾ/ಪ್ಯಾಲೆಸ್ಟೈನ್ ನಿರಾಶ್ರಿತರ ಒತ್ತಡ, ಚಮಚಾ ಬಂಡವಾಳಶಾಹಿಯ ಬೆಳವಣಿಗೆ, ನವ–ಉದಾರವಾದಿ ನೀತಿಗಳು–ಇವುಗಳಿಂದಾಗಿ ಆಗಲೇ ಹದಗೆಟ್ಟಿತ್ತು. ಶೇ. 40ರಷ್ಟು ಯುವ–ನಿರುದ್ಯೋಗ ಉಂಟಾಗಿತ್ತು ಮತ್ತು ದೇಶದ ಅರ್ಧದಷ್ಟು ಜನ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿದ್ದರು. ಚಮಚಾ ಬಂಡವಾಳಶಾಹಿಯ ಅನುಕೂಲಕ್ಕಾಗಿ ರಾಜಕೀಯ ಆಡಳಿತದ ದುರುಪಯೋಗದ ವಿರುದ್ಧ ಕಳೆದ ಅಕ್ಟೋಬರ್ ನಲ್ಲಿ ಆರಂಭಗೊಂಡಿದ್ದ ಪ್ರತಿಭಟನೆಯಿಂದಾಗಿ, ಅಂದಿನ ಪ್ರಧಾನಿ ಸಾದ್ ಹರ್ರಿ ಅವರು ರಾಜೀನಾಮೆ ನೀಡಬೇಕಾಯಿತು. ತರುವಾಯ ಹಸನ್ ಡಯಾಬ್ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದರು, ಆದರೆ ಪರಿಸ್ಥಿತಿ ಸುಧಾರಿಸಲಿಲ್ಲ. ಪ್ರತಿಭಟನೆಕಾರರ ಬೇಡಿಕೆಗಳನ್ನು ಪರಿಹರಿಸಲು ಡಯಾಬ್ ಸರ್ಕಾರದದಿಂದಲೂ ಸಾಧ್ಯವಾಗಲಿಲ್ಲ. ಈ ಮಧ್ಯೆಲೊಂದು ಕಡೆ ಕೊವಿದ್–19, ಸಾಲದೆಂಬಂತೆ ರಾಸಾಯನಿಕ ಸ್ಫೋಟವು ಉಂಟಾಗಿ ನೂರಾರು ಜನರ ಸಾವಿಗೆ ಕಾರಣವಾಯಿತು. ಹಾಗಾಗಿ, ಪ್ರತಿಭಟನೆ ತೀವ್ರ ಸ್ವರೂಪ ತಳೆದು, ಇದೀಗ ಡಯಾಬ್ ಕೂಡ ರಾಜೀನಾಮೆ ನೀಡಬೇಕಾಯಿತು. ■

JANASHAKTHI KANNADA VARA PATRIKE August 17-23, 2020 Price: Rs. 10/- Date of Publication: 14 August 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ದಲಿತ ಹಕ್ಕುಗಳ ಸಮಿತಿ ಕರೆಗೆ ಆಗಸ್ಟ್ 13, ರಾಜ್ಯದ್ಯಾಂತ ಪ್ರತಿಭಟನೆ ಯಶಸ್ವಿ
ದಲಿತ ವಿರೋಧಿ ಭೂ ಸುಧಾರಣಾ ಕಾಯಿದೆ ತಿದ್ದುಪಡಿ 2020 ವಾಪಸ್ಸಾಗಲಿ

ದಲಿತರ ಮೇಲಿನ ದೌರ್ಜನ್ಯ ತಡೆ ಗಟ್ಟಿ: ದಲಿತರ ಹಕ್ಕುಗಳನ್ನು ರಕ್ಷಿಸಿ



ಬೆಂಗಳೂರಿನ ಮೈಸೂರು ಬ್ಯಾಂಕ್ ಚೌಕದಲ್ಲಿ ಪ್ರತಿಭಟನೆ :

ರಾಜಧಾನಿ ಬೆಂಗಳೂರಿನಲ್ಲಿ 144 ನಿಷೇದಾಜ್ಞೆ ಇದ್ದಾಗ್ಯೂ ಹೋರಾಟ ನಡೆದಿದೆ ಈ ಪ್ರತಿಭಟನೆಯನ್ನು ಉದೇಶಿಸಿ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಮಾತಾನಾಡುತ್ತಾ ದೇಶದಲ್ಲಿ ಬಿಜೆಪಿ ಸಧಕಾರಕ್ಕೆ ಬಂದ ಮೇಲೆ ದಲಿತರ ಮೇಲೆ ದೌರ್ಜನ್ಯಗಳು ವ್ಯಾಪಕವಾಗಿ ಹೆಚ್ಚಾಗಿರುವುದಕ್ಕೆ ಕೇಂದ್ರ ಸರ್ಕಾರ ದಲಿತ ವಿರೋಧ ನೀತಿಗಳು ಕಾರಣವಾಗಿದೆ ಆರಂಭ ದಿಂದಲೂ ಸಂವಿದಾನ ಮೇಲಿನ ದಾಳಿ, ಸಂವಿಧಾನ ಬದಲಿಸುವ ಬಜೆಪಿ ಎಂ.ಪಿ.ಗಳ ಮಾತುಗಳು, ಕೋಮುವಾಧಿಗಳು ಸಂವಿದಾನ ಪ್ರತಿ ಸುಟ್ಟ ಪ್ರಕರಣಗಳು ಮೇಲ್ಜಾತಿಯವರು ದಲಿತರ ಮೇಲೆ ದೌರ್ಜನ್ಯ ನಡೆಸಲು ಪ್ರಚೋಧನೆ ಸಿಕ್ಕಾಂತಾಗಿದೆ. ರಾಜ್ಯದಲ್ಲಿ ವಿಜಯಪುರದಲ್ಲಿ ಬೈಕ್ ಮುಟ್ಟಿದಕ್ಕೆ ಅಮಾನುಷವಾಗಿ ಬಡಿದಿದ್ದಾರೆ. ಬಳ್ಳಾರಿ ಜಿಲ್ಲೆಯ ಹಗರಿಬೋಮ್ಮನಹಳ್ಳಿ ತಾಲೋಕ್ ಕೋರೊನಾ ವೈರಸ್ ಭಯಂಕರದ ಬಗ್ಗೆ ಮಾತಾಡುವ ಸರ್ಕಾರಗಳು ಅದಕ್ಕಿಂತ ಕ್ರೂರವಾದ ಜಾತಿ ದೌರ್ಜನ್ಯದ ಬಗ್ಗೆ ಸೊಲ್ಲೇತುತ್ತಿಲ್ಲ. ಡಾ.ಬಿ.ಆರ್. ಅಂಬೇಡ್ಕರವರ ಮನೆ ಮೇಲೆ ದಾಳಿ, ಸಂವಿಧಾನದ ಮೇಲೆ ದಾಳಿ, ದೇಶದಲ್ಲಿ ದಲಿತರ ಪರ ದ್ವನಿ ಎತ್ತಿದ ಹೋರಾಟಗಾರರನ್ನು ಕೋರ್ಟ್ ಬಳಸಿ ಜೈಲಿಗೆ ತಳ್ಳಿದ್ದಾರೆ. ಎಸ್.ಸಿ/ಎಸ್.ಟಿ ದೌರ್ಜನ್ಯ ತಡೆ ಕಾಯಿದೆ ಸಡಿಲಿಕೆ, ಮೀಸಾಲಾತಿ ಮೂಲಭೂತ ಹಕ್ಕಲ್ಲ, ಇತ್ಯಾದಿ ನ್ಯಾಯಲಯಗಳ ದಲಿತ ವಿರೋಧಿ ತೀರ್ಪುಗಳು. ಮನುವಾದಿ ಬಿ.ಜೆ.ಪಿ ಕೇಂದ್ರ ಸರ್ಕಾರ ದಲಿತ ವಿರೋದಿ ನೀತಿಗೆ ಸಾಕ್ಷಿಯಾಗಿದೆ ಎಂದರು.

ಮೇಲ್ ಜಾತಿಯ ಜಾತಿವಾದಿಗಳಿಂದ ಸಾಮಾಜಿಕ ಬಹಿಷ್ಕಾರ, ಜಾತಿತಾರತಮ್ಯ ದೌರ್ಜನ್ಯ, ಕೊಲೆ, ಪೋಲಿಸ್ ದಬ್ಬಾಳಿಕೆ, ಅಂತರ ಜಾತಿ ವಿವಾಹದ ಮರ್ಯಾದೆ ಹತ್ಯೆ, ದಲಿತ ಮಹಿಳೆ ಮೇಲಿನ ಅತ್ಯಾಚಾರಗಳು ಇವುಗಳ ವಿರುದ್ದ ಕೌಂಟರ್ ಕೇಸು ಹಾಕಿ ಪೋಲಿಸರೇ ಆರೋಪಿಗಳಿಗೆ ರಕ್ಷಣೆ ನೀಡುತ್ತಿರುವುದು ಆತಂಕದ ವಿಷಯವಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ವಿಜಯಪುರದ ಮಿಣಜಿಗಿಯಲ್ಲಿ ಬೈಕ್ ಮುಟ್ಟಿದಕ್ಕೆ ಅಮಾನುಷವಾಗಿ ಬಡಿದಿದ್ದಾರೆ. ತುಮಕೂರು ಮಧುಗಿರಿಯ ತಿಪ್ಪಾಪುರ, ಗುಬ್ಬಿ ತಾಲೋಕ್ ಕೊಡುಗೇಹಳ್ಳಿ, ಹಗರಿಬೋಮ್ಮನಹಳ್ಳಿಯ ಸಾಲ್ಮೂರಹಳ್ಳಿಯಲ್ಲಿ ದಲಿತ ಮಹಿಳೆ ಕೊಲೆ, ನಾಗಮಂಗಲದ ಬೆಳ್ಳೂರಿನ ಹೊಸ ಮನೆ ಯಲ್ಲಿ ಪೋಲಿಸರ ಮತ್ತು ಅಧಿಕಾರಿಗಳ ಎದುರೆ ರೌಡಿಗಳಿಂದ ಹಲ್ಲೆ, ಹಾಸನದ ಅರಕಲಗೂಡು ದಲಿತ ಮುಖಂಡನ ಕೊಲೆ, ಆಲೂರುನಲ್ಲಿ ದೌರ್ಜನ್ಯ, ಯಲ್ಬುರ್ಗದ ವಜ್ರಬಂಡಿಯಲ್ಲಿ ದೌರ್ಜನ್ಯ ಹೀಗೆ ಮುಂದುವರಿದಿದೆ. ಇಂತಹ ಶೋಚನೀಯ ಸ್ಥಿತಿಯಲ್ಲಿ ದಲಿತ ಭದುಕು ಸಾಗಿದೆ. ಆದರಿಂದ ರಾಜ್ಯ ಬಿಜೆಪಿ ಸರ್ಕಾರ ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಅಪರಾಧಿಗಳಿಗೆ ಕಠಿಣ ಶಿಕ್ಷೆ ಯಾಗಬೇಕು. ಅದಕ್ಕಾಗಿ ಎಸ್.ಸಿ. ಎಸ್.ಟಿ ದೌರ್ಜನ್ಯ ತಡೆ ಕಾಯಿದೆಯನ್ನು ಕಟ್ಟು ನಿಟ್ಟಾಗಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು.

ದಲಿತ ವಿರೋಧಿ ಭೂ ಸುಧಾರಣಾ ತಿದ್ದುಪಡಿ ಕಾಯಿದೆ ವಾಪಸ್ಸಾಗುವವರೆಗೂ ಹೋರಾಟ ನಿಲ್ಲುವುದಿಲ್ಲ

ದಲಿತರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಮುನ್ನುಡಿಯು ಅವರ ಸ್ವಾವಲಂಬಿ ಬಧುಕಿನಿಂದ ಸಾದ್ಯವಾಗುತ್ತದೆ. ದಲಿತರಿಗೆ ಬೇಕಾದ್ದು ಕೃಷಿಯೋಗ್ಯ ಭೂಮಿ. ಭೂಮಿ ನೀಡಬೇಕಾದ್ದು ಸರ್ಕಾರದ ಜವಾಬ್ದಾರಿಯಾಗಿದೆ. ಇದು ಕೇವಲ ದಲಿತರ ವಿಮೋಚನೆಯ ದಾರಿ ಮಾತ್ರವೇ ಆಗಿಲ್ಲ. ಬದಲಿಗೆ ಕೈಗಾರಿಕಾಭಿವೃದ್ದಿಯ, ನಿರುದ್ಯೋಗ ನಿವಾರಣೆಯ, ದಲಿತರ ಮೇಲಿನ ದೌರ್ಜನ್ಯ ತಡೆಯ ಹಾದಿಯೂ ಆಗಿದೆ. ಆದ್ದರಿಂದಲೇ ಉಳುವವನನ್ನು ಭೂ ಒಡೆಯನನ್ನಾಗಿಸಲು ಮತ್ತು ತಲಾ 5ಎಕರೆ ಜಮೀನು ನೀಡುವಂತಹ ಭೂ ಸುಧಾರಣೆಗಾಗಿ ಹೋರಾಡುತ್ತಿರುವ ದಲಿತ ಹಕ್ಕುಗಳ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ

1961 ಮತ್ತು 1974ರ ಭೂ ಸುಧಾರಣೆ ಕಾಯಿದೆ ಜಾರಿಯಾದಗಿನಿಂದ ಇದುವರೆಗೂ ಎಸ್ಸಿ.ಗೆ 1.18 ಹೆಕ್ಟರ್ ಮತ್ತು ಎಸ್ಟಿ ಗೆ 1.49 ಹೆಕ್ಟರ್ ಭೂಮಿ ಇದೆ. ಶೇಕಡವಾರು ಲೆಕ್ಕ ಹಾಕಿದರೆ ಪರಿಶಿಷ್ಟ ಜಾತಿಯವರು ಶೇ.8.83% ಪರಿಶಿಷ್ಟ ಪಂಗಡದವರು ಶೇ.5.80% ಮಾತ್ರ ಭೂಮಿ ಹೊಂದಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಅತಿ ಸಣ್ಣ ಹಿಡುವಳಿದಾರರಾಗಿದ್ದಾರೆ. ದರಖಾಸ್ತು, ಕೊಡುಗಿ, ಬಗರ್ ಹುಕ್ಕುಂ, ಒತ್ತುವರಿ ಇತ್ಯಾದಿ ದಲಿತರ ಜಮೀನಿಗೆ ಸಂಬಂದಿಸಿದ ಸಾವಿರಾರು ಕೇಸುಗಳು ನ್ಯಾಯಲಯದಲ್ಲಿ

ಪುಟ 14 ಕ್ಕೆ

ಭಾರತ ರಕ್ಷಿಸಿ ಆಂದೋಲನಕ್ಕೆ ವ್ಯಾಪಕ ಬೆಂಬಲ....

ಪುಟ 8 ರಿಂದ



















JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**